

ಕಲ್ಯಾಣ ಕಿರಣ

ಬೆಲೆ : ರೂ. 6/-

ಆಗಸ್ಟ್ - 2006





ಶ್ರೀಮತಿ ರಾಣಿ ಸತೀಶ್ ಅವರಿಂದ 811ನೆಯ ಬಸವ ಲಿಂಗೈಕ್ಯ ಸಂಸ್ಮರಣೆಯ ಉದ್ಘಾಟನೆ



ಡಾ॥ಜೆ.ಎಸ್.ಪಾಟೀಲ್, ಗುಲಬರ್ಗಾ ವಿ.ವಿ. ಕಾನೂನು ವಿಭಾಗದ ಮುಖ್ಯಸ್ಥರಿಂದ
ಲಿಂಗಾಯತ ಧರ್ಮಸಾರ ಪುಸ್ತಕ ಬಿಡುಗಡೆ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-36 ಬಸವ ಶಕೆ-873 ಆಜೀವ ಸದಸ್ಯತ್ವ 600 ರೂ.
ಸಂಚಿಕೆ-4 ಆಗಸ್ಟ್-2006 ವಾರ್ಷಿಕ ಚಂದಾ 60/- ರೂ.

ಕ್ರಾಂತಿ ಖಡ್ಗವನಾಂತ ಸಾಹಸಿ



ನೀವಲ್ಲ, ದುರ್ಗಮ ಕಾನನ ಗರ್ಭದಲ್ಲಿ ನಿರ್ಜನ ಗಹ್ವರದಿ
ಮೂಗು ಮುಚ್ಚಿ ಕುಳಿತಿಹ ಏಕಾಂತ ತಪಸಿಗಳು,
ವಿಗುರ್ಬಿಸುವ ವಿಚಿತ್ರ ಮೃಗಗಳಿಂ ತುಂಬಿಹ
ಲೋಕ ಕಾಂತಾರವ ಆತ್ಮವಿಶ್ವಾಸದಿಂ ಎದುರಿಸುವ ಸಾಹಸಿಗಳು.
ಇದ್ದವರು ದುಷ್ಟರು ಸತ್ತವರು ಸಜ್ಜನರು
ಎಂಬ ಲೋಕದ ನೀತಿಗೆ ನಗುವಿರಲ್ಲವೆ ತಾವು?
ಸರಿದ ಆನೆಯ ಕಡೆಗೆ ಧೂಪ ಆರತಿಯ ವೈಭವ
ಹೊರುವ ಆನೆಯ ಕಡೆಗೆ ತುಂಬು ಔದಾಸೀನ್ಯತೆ.
ಅನ್ನ ನೀಡುವ ಕೈಗೆ ಕತ್ತಿ- ಕತ್ತರಿ ಚುಂಬನ
ವಿಷವನುಣಿಸುವ ಹಸ್ತಕ್ಕೆ ಗೌರವದ ಅರ್ಚನ.
ಹತ್ತಿ, ತುಳಿದು, ಮುನ್ನಡೆವಂಗೆ ವೈಭವದ ತೇರು
ಬಿದ್ದವರ ಮೇಲೆತ್ತಿ, ಸಂತೈಸಿ ಸಾಗುವವಗೆ ಅಪವಾದದ ಹೇರು!
ಮೌಢ್ಯದ ಕಣ್ಪಟ್ಟಿ ಕಟ್ಟಿ, ಮೆರೆದಾಡುವವಗೆ ಬಿರಿದು ಬಾವಲಿ
ಮೌಢ್ಯತೆಯ ಪೊರೆಕಿತ್ತು ಸತ್ಯದರ್ಶನ ತೋರ್ವವಗೆ ಉರಿಯ ಕಾವಲಿ,
ಇದೆಯಲ್ಲವೇ ಈ ಜಗದ ಲೀಲಾ ವಿನೋದ?!
ಆದರೇಂ ಅಲ್ಪ ಕೀರ್ತಿಯ ಕಡೆಗೆ ನಿಮಗಿಲ್ಲ ತೀಕ್ಷ್ಣ ಉನ್ಮಾದ!
ಕೋಣನ ಹೇರಿಂಗೆ ಕುನ್ನಿ ಬುಸುಗುಡುವಂಥ ಜನಮನವ
ಸಹಿಸಿಕೊಂಡು, ಮತ್ತೆ ಮಾತೃ ಹೃದಯದಿಂ ತಿದ್ದಿ ತೀಡುವ ತವಕಿಗಳು
ಮರೆವಿನ ತಿಮಿರಕ್ಕೆ ಶತಮಾನಗಳಿಂ ಹೊಂದಿಕೊಂಡ ಕಣ್ಣುಳ್ಳವರ
ಕಣ್ಪೊರೆಯ ವೈಚಾರಿಕತೆಯ ಶಸ್ತ್ರದಿಂ ಹರಿದ ಮರುಕಿಗಳು!
ಉಪ್ಪು ನೀರನು ನುಂಗಿ ಸವಿಯ ಜಲವನು ಈವ
ಮೇಘಾಳಿಯ ತೆರದಿ ನಿಮ್ಮ ಹಿರಿಬಾಳು!
ಸೊಪ್ಪು ಹಾಕದೆ ಬನ್ನಕೆ ಅದಮ್ಯ ಉತ್ಸಾಹದಿಂ ಸಾಗ್ವ
ಕ್ರಾಂತಿ ಖಡ್ಗವನಾಂತ ಸಚ್ಚಿದಾನಂದ ಕಂದ
ಸ್ವಾಮಿ ಲಿಂಗಾನಂದರು ನೀವು.

- ಮಾತಾಜಿ

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಸಂಪುಟ 36	ಬಸವ ಶಕೆ 873	ಆಜೀವ ಸದಸ್ಯತ್ವ 600ರೂ
ಸಂಚಿಕೆ 4	ಆಗಸ್ಟ್ - 2006	ವಾರ್ಷಿಕ ಚಂದಾ 60/-ರೂ.

ಕಿರಣ ಗನ್ನಡಿ



ದೇವ(ಭಾನು)ವಾರ, ದಿ.27-8-2006ರಂದು

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ

75ನೆಯ ಜಯಂತಿ



ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ

ದ್ವಿತೀಯ ಮಹಿಳಾ ಜಗದ್ಗುರು ಪೂಜ್ಯ ಶ್ರೀ ಜಗದ್ಗುರು

ಮಾತೆ ಗಂಗಾದೇವಿಯವರ 49 ನೆಯ ವರ್ಧಂತಿ

KALYANA KIRANA-Reg No.19988/70. Monthly Magazine Edited by Pujya Mate Kasturidevi and Published by Pujya Allama Prabhu Swamiji, on behalf of Vishwakalyana Mission Charitable Trust, Basava Mantapa, at Padmashri Printers, Rajaji Nagara, 2nd Block, Bangalore-560010

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ
ವಿಳಾಸಕ್ಕೆ ಬರೆಯಿರಿ :
ದೂರವಾಣಿ : 23325335/23322790

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

ಸಂಪಾದಕೀಯ : 1

ಬಸವ ಜಯಂತಿಯ ವೈಖರಿಗಳು

ಬೆಂಗಳೂರಿನ ಒಂದು ಫ್ಯಾಕ್ಟರಿಯ ಬಸವ ಸಮಿತಿಯವರು ದಿ.23-7-2006 ರಂದು ಬಸವ ಜಯಂತಿ ಉತ್ಸವ ಇಟ್ಟಿದ್ದರು. ಓರ್ವ ಪಂಚಾಚಾರ್ಯ ಸ್ವಾಮಿಗಳ ಸನ್ನಿಧಿ ಬೇರೆ. ಇಡೀ ಕಾರ್ಯಕ್ರಮದಲ್ಲಿ ಗುರು ಬಸವಣ್ಣನವರ ಬಗ್ಗೆ ಏನೇನೂ ಮಾತನಾಡಲಿಲ್ಲವಂತೆ. ಭಾಗವಹಿಸಿದ್ದ ಅತಿಥಿಗಳಲ್ಲಿ ಒಬ್ಬರು ಮಾತ್ರ ಅದೂ ಲಿಂಗಾಯತೇತರರು ಗುರು ಬಸವಣ್ಣನವರ ಹೆಸರನ್ನು ಹೇಳಿ ಇಡೀ ನಾಡು ಹೆಮ್ಮೆ ಪಡುವಂಥ ಮಹಾಪುರುಷ ಎಂದು ಬಣ್ಣಿಸಿದರಂತೆ. ಸನ್ನಿಧಿ ವಹಿಸಿದ ಸ್ವಾಮಿಗಳು ರೇಣುಕಾಚಾರ್ಯರು ಮತ್ತು ಪಂಚಾಚಾರ್ಯರ ಬಗ್ಗೆ ಮಾತನಾಡಿದರಂತೆ. ಆ ಕಾರ್ಯಕ್ರಮದಿಂದ ನೇರವಾಗಿ ಬಸವ ಮಂಟಪಕ್ಕೆ ಧಾವಿಸಿ ಬಂದ ಶರಣೆ.ಭಾರತಿ ಶಿವಶರಣಪ್ಪ ಮದ್ದೂರು ಅತ್ಯಂತ ಆಕ್ರೋಶಗೊಂಡು "ಧರ್ಮಗುರು ಬಸವಣ್ಣನವರ ಬಗ್ಗೆ ಮಾತನಾಡದಿದ್ದ ಮೇಲೆ ಬಸವ ಜಯಂತಿ ಏಕಿಡಬೇಕು ?" ಎಂದು ನಮ್ಮ ಬಳಿ ನುಡಿದರು.

ಅವರನ್ನು ಸಮಾಧಾನಿಸಿ ಹೇಳಿದೆ, "ಇಂದು ಬಸವಣ್ಣನವರ ವಿಚಾರಧಾರೆ ಚಲಾವಣೆಯಲ್ಲಿರುವ ನಾಣ್ಯ. ಅದಕ್ಕಾಗಿ ಆ ಹೆಸರನ್ನು ಬಳಸಿಕೊಂಡು ಪಂಚಾಚಾರ್ಯರ ಹಿರಿಮೆ ಕುರಿತು ಮಾತನಾಡಲು ಯತ್ನಿಸುತ್ತಾರೆ. ನೇರವಾಗಿ ಪಂಚಾಚಾರ್ಯರ ಜಯಂತಿ ಇಟ್ಟರೆ ಜನ ಬರುವುದಿಲ್ಲ ಎಂದು ಈ ತಂತ್ರ. ಒಂದು ಕಾಲದಲ್ಲಿ ಗುರು ಬಸವಣ್ಣನವರನ್ನು ತಿರಸ್ಕರಿಸುತ್ತಿದ್ದ, ಅವರ ಭಾವಚಿತ್ರ ಇದ್ದರೆ ಕೆಳಗೆ ಹೋಗುವುದಿಲ್ಲ, ಅಂಥ ಭವನವನ್ನು ಪ್ರವೇಶಿಸುವುದಿಲ್ಲ ಎನ್ನುತ್ತಿದ್ದವರು ಈಗ "ಬಸವ ನಾಮ"ದ ಬಲದಿಂದ ತಮ್ಮ ಅಸ್ತಿತ್ವ ಉಳಿಸಿಕೊಳ್ಳುವ ಸನ್ನಿವೇಶ ಒದಗಿರುವುದನ್ನು ನಾವು ಅರಿತು ಹೆಮ್ಮೆ ಪಡಬೇಕಲ್ಲವೆ?" ಎಂದು. ಮತ್ತೊಂದು ಬಸವ ಜಯಂತಿಯ ವರದಿ ಬಂದಿತು. ಅಲ್ಲಿ ಗುರು ಬಸವಣ್ಣನವರ ಪೂಜೆ ಇಲ್ಲ, ಪ್ರಾರ್ಥನೆ ಇಲ್ಲ. ಒಂದು ರಾಜಕೀಯ ಸಮಾರಂಭದಂತೆ ಬಸವ ಜಯಂತಿ ಎಂದು ಬಣ್ಣಿಸಿದರು. ಕೆಲವರು ಸಂಘ - ಸಂಸ್ಥೆಗಳನ್ನು ಮಾಡಿಕೊಂಡು ಜಯಂತಿ, ಉತ್ಸವಗಳ ಹೆಸರಿನಲ್ಲಿ ಹಣ ಸಂಗ್ರಹ ಮಾಡಿ, ಲೆಕ್ಕವಿಲ್ಲದಂತೆ ಖರ್ಚು ಮಾಡಿ ತಮ್ಮ ಪ್ರಚಾರ ಮಾಡಿಕೊಳ್ಳುವವರು ಕೆಲವರಾದರೆ, ಲೆಕ್ಕ ಕೊಡದೆ ಹಣದ ದುರುಪಯೋಗ ಮಾಡಿಕೊಳ್ಳುವವರು ಮತ್ತೆ ಕೆಲವರು. ಹೀಗೆ ಬಸವ ಜಯಂತಿ ಆಚರಣೆ ಒಂದು ವ್ಯವಹಾರ ಮಾತ್ರ.

ದಿ.30-7-2006 ರಂದು ನಾವು 811ನೆಯ ಗುರು ಬಸವಣ್ಣನವರ ಲಿಂಗೈಕ್ಯ ಸಂಸ್ಮರಣೆ ಮಾಡುವ ದಿವಸ ಬೇರೊಂದು ಕಾರ್ಖಾನೆಯ ಬಸವ ಸಮಿತಿಯವರು ಬಸವ ಜಯಂತಿ ಆಚರಿಸುತ್ತಿದ್ದರು. ಎಷ್ಟು ಹಾಸ್ಯಾಸ್ಪದ! 30-4-2006 ರಂದು ನಿಜ ಬಸವ ಜಯಂತಿ. ದಿ.30-7-2006 ರಂದು ಅಂದರೆ 3 ತಿಂಗಳ ಬಳಿಕ ಬಸವ ಜಯಂತಿ ಎಂದು ಆಚರಿಸುವುದು ಎಷ್ಟು ಅರ್ಥ ರಹಿತ. ಬೇರೊಂದು ಹೆಸರಿನಿಂದ ಉದಾ : "ಬಸವ ಜ್ಯೋತಿ" ಎಂದು ಯಾವಾಗ ಬೇಕಾದರೂ ಮಾಡಬಹುದು. ಆದರೆ ಬಸವ ಜಯಂತಿ ಎಂದು 3 ತಿಂಗಳ ನಂತರ ಮಾಡುವುದು ಎಷ್ಟು ಅರ್ಥ ರಹಿತ.

ಕ್ರೈಸ್ತರು ಏಸುಕ್ರಿಸ್ತನ ಜಯಂತಿಯನ್ನು ಇಡೀ ಜಗತ್ತಿನಲ್ಲಿ ಅತ್ಯಂತ ಭಕ್ತಿಪೂರ್ಣವಾಗಿ, ಅಷ್ಟೇ ವೈಭವಪೂರ್ಣವಾಗಿ ಮಾಡುತ್ತಾರೆ. ವೈಷ್ಣವರು ಕೃಷ್ಣ ಜಯಂತಿಯನ್ನು ಬೌದ್ಧರು ಬುದ್ಧ ಜಯಂತಿಯನ್ನು, ಜೈನರು ಮಹಾವೀರನ ಜಯಂತಿಯನ್ನು ಭಕ್ತಿಪೂರ್ಣವಾಗಿ ಆಚರಿಸುತ್ತಾರೆ. ಸಿಖ್ಖರಂತೂ ಭಕ್ತಿಭಾವ ತುಂಬಿ ತುಳುಕುವ ಜನರು, ಗುರು ನಾನಕ ಜಯಂತಿಯಂದು ಗುರುದ್ವಾರಗಳು ತುಂಬಿ ತುಳುಕುತ್ತವೆ. ಓಣಿ ಓಣಿಗೆ ಟೆಂಟ್ ಹಾಕಿ ಲಂಗರ್ (ಅನ್ನ ದಾಸೋಹ) ನಡೆಸುತ್ತಾರೆ. ಅದನ್ನು ನೋಡಿದಾಗಿನಿಂದಲೂ ನಮಗೂ ಹಾಗೆ ಮಾಡಬೇಕೆನ್ನಿಸಿತ್ತು. 2005, 2006 ಈ 2 ಬಸವ ಜಯಂತಿಗಳಂದು ಹಲವಾರು ಕಡೆ ಜಯಂತಿ ಕಾರ್ಯಕ್ರಮದಲ್ಲಿ ಭಾಗಿಯಾದವರಿಗಷ್ಟೇ ಅಲ್ಲದೆ ಸಾರ್ವಜನಿಕರಿಗೂ ಸಹ ವಿವಿಧ ರಾ.ಬ.ದಳಗಳವರು ಅನ್ನದಾಸೋಹ ಮಾಡಿಸಿದ್ದಾರೆ. ಈ ಸಲದ

ಬಸವ ಪಂಚಮಿಯಂದು ಬೆಂಗಳೂರಿನಲ್ಲಿ ನಾವು ದೊಡ್ಡಣ್ಣಶೆಟ್ಟಿ ಹಾಲ್‌ದಲ್ಲಿ 811ನೆಯ ಬಸವ ಪಂಚಮಿ ಆಚರಿಸಿದಾಗ ಕಾರ್ಯಕ್ರಮದಲ್ಲಿ ಭಾಗಿಗಳಾದವರಿಗಷ್ಟೇ ಅಲ್ಲ, ಅವರ ಪ್ರಸಾದ ವಿತರಣೆ ಮುಗಿದ ಮೇಲೆ ಸಾರ್ವಜನಿಕವಾಗಿ ಅನ್ನದಾಸೋಹ ಮಾಡಲಾಯಿತು. ಅದರಿಂದ ನಮಗೂ ಸಂತೃಪ್ತಿ ಜನರಿಗೂ ಪ್ರಸಾದ ಪಡೆದ ಸಂತೃಪ್ತಿಯುಂಟಾಯಿತಲ್ಲದೆ, ಬಸವ ಪಂಚಮಿಯ ಪ್ರಚಾರವಾಯಿತು. ಅಂದು ಬೆಳಿಗ್ಗೆ ಬೆಂಗಳೂರಿನ ಗಣಾಚಾರ ದಳದ ಸದಸ್ಯರು ವಾಣಿ ವಿಲಾಸ ಆಸ್ಪತ್ರೆಗೆ ಹೋಗಿ ಹಣ್ಣು-ಹಾಲು ರೋಗಿಗಳಿಗೆ ಹಂಚಿ ಬಂದರು.

ಬಸವ ಜಯಂತಿ - ಲಿಂಗಾಯತರ ಹೊಸ ವರ್ಷದ ಆರಂಭದ ದಿವಸ. ಗುರು ಬಸವಣ್ಣನವರಿಗೆ ಭಕ್ತಿಪೂರ್ವಕವಾಗಿ ಮನೆ -ಮಠ -ಮಂದಿರಗಳಲ್ಲಿ ಪೂಜೆ ಸಲ್ಲಿಸಬೇಕು. ತೊಟ್ಟಿಲಲ್ಲಿ ಧರ್ಮಪಿತರ ಭಾವಚಿತ್ರವನ್ನಿಟ್ಟು ತೂಗಿ, ಜೋಗುಳ ಹಾಡಿ, ಆರತಿ ಮಾಡಬೇಕು. ತಮ್ಮ ಮನೆಯಲ್ಲಿ ಜನಿಸಿದ ಮಗುವನ್ನು ತೊಟ್ಟಿಲಿಗೆ ಹಾಕಿ ಹರ್ಷಿಸುವುದು ಸ್ವಾಭಾವಿಕ. ಆದರೆ ಭುವನದ ಭಾಗ್ಯವಾದ, ನಮಗೆ ಧರ್ಮಪಥವನ್ನು ಹಾಕಿಕೊಟ್ಟ ಗುರು ಬಸವಣ್ಣನವರ ಜನನ ಇನ್ನೂ ಮಹತ್ವ ಪೂರ್ಣವಾದ್ದರಿಂದ ಅವರ ಅವತಾರವನ್ನು ಸಂಭ್ರಮ-ಸಂತೋಷಗಳಿಂದ ನಾವು ಸ್ವಾಗತಿಸಬೇಕು.

ಲಿಂಗಯತ ಧರ್ಮ ಸಂಸ್ಥಾಪನಾ ದಿವಸ ಜನವರಿ 14ರಂದು. ಅಂದು ಸಾಮೂಹಿಕ ಪ್ರಾರ್ಥನೆ (ಶರಣ ಮೇಳದಲ್ಲಿ ಸಮುದಾಯ ಪ್ರಾರ್ಥನೆ.) ಯನ್ನು ಬಸವ ಮಂಟಪಗಳಲ್ಲಿ, ಬಸವ ಮಂಟಪ ಇಲ್ಲದಲ್ಲಿ ಯಾವುದಾದರೊಂದು ಸ್ಥಳದಲ್ಲಿ ಮಾಡಿ, ವಚನ ಪಠಣವನ್ನು ಮಾಡಬೇಕು. ಶರಣರ ಸಂಸ್ಕೃತಿ ಅಳವಡಿಸಿಕೊಂಡಿರುವ ಸಕಲಟ್ಟಿ, ಕಾಟೇರಿ, ಕೂನೂರು ಮುಂತಾದ ಕಡೆಯ ಶರಣರು ಬಿಟ್ಟರೆ ಶರಣ ಸಂಸ್ಕೃತಿಯ ಸಂಬಂಧ ಕಳಚಿಕೊಂಡಿರುವ ತಮಿಳು ನಾಡು ಲಿಂಗಾಯತರು ತಮಿಳು ನಾಡಿನ ಪೊಂಗಲ್ ಹಬ್ಬದ ನಿಮಿತ್ತ ಈವರೆಗೂ ಶರಣ ಮೇಳಕ್ಕೆ ಬರದಿರುವಷ್ಟು ಅಜ್ಞಾನ ಹೊಂದಿದ್ದಾರೆ. ಅದೇ ರೀತಿ ಕರ್ನಾಟಕದ ಹಳೆ ಮೈಸೂರಿನ ಬಹುಪಾಲು ಲಿಂಗಾಯತರು ಸಂಕ್ರಾಂತಿಯ ಎಳ್ಳು-ಬೆಲ್ಲ ಬೀರಿ, ಅದನ್ನು ತಿನ್ನುವುದರಲ್ಲೇ ಮಗ್ನರೇ ವಿನಾ ಸಮಾಜ ಸಂಘಟನೆಯಲ್ಲಿ, ಶರಣ ಸಂಸ್ಕೃತಿಯ ಪುನರುತ್ಥಾನದಲ್ಲಿ ಎಳ್ಳಷ್ಟೂ ಆಸಕ್ತಿ ಹೊಂದಿಲ್ಲ.

ಇನ್ನು ಮತ್ತೊಂದು ಅತಿ ಮಹತ್ವದ ದಿನ, ಬಸವ ಪಂಚಮಿ ಅರ್ಥಾತ್ ಬಸವ ಲಿಂಗೈಕ್ಯ ದಿವಸ. ಧರ್ಮ ಪಿತರು ಹುಟ್ಟುವಾಗ ನಮಗೆ ಧಾರ್ಮಿಕವಾಗಿ ಸಂಬಂಧವಿಲ್ಲದಿದ್ದರೂ ಅವರ ಅವತಾರ ನಮಗೆ ಮುಖ್ಯವಾದ್ದರಿಂದ ತಪ್ಪದೆ ಬಸವ ಜಯಂತಿ ಆಚರಿಸಬೇಕು. ಅವರು ಲಿಂಗಾಯತ ಧರ್ಮ ಸ್ಥಾಪಿಸಿದ ದಿನ (ಮಕರ ಸಂಕ್ರಾಂತಿ) ಮತ್ತು ಲಿಂಗೈಕ್ಯರಾದ ದಿನ ಎಲ್ಲಕ್ಕೂ ಮಹತ್ವಪೂರ್ಣ. ಬೌದ್ಧರು ಬುದ್ಧನ ನಿರ್ವಾಣದ ದಿವಸವನ್ನು, ಕ್ರೈಸ್ತರು ಏಸು ಕ್ರಿಸ್ತನ ಸ್ವರ್ಗಾರೋಹಣ ದಿನವನ್ನು, ಮುಸಲೀಮರು ಮೊಹಮ್ಮದರ ಅಂತಿಮ ದಿನವನ್ನು ಅವರ ಜಯಂತಿಗಳಷ್ಟೇ ಭಕ್ತಿಪೂರ್ಣವಾಗಿ ಆಚರಿಸುತ್ತಾರೆ. ಪೂಜ್ಯ ಗುರುಗಳು, ನಾವು ಧರ್ಮಪಿತರ ಲಿಂಗೈಕ್ಯ ದಿವಸದ ಅನ್ವೇಷಣೆಯಲ್ಲಿರುವಾಗ ಒಮ್ಮೆ ಡಾ||ಬಾಡಾಲ ರಾಮಯ್ಯನವರನ್ನು ಗುರು ಬಸವಣ್ಣನವರ ವಚನಗಳನ್ನು ತೆಲುಗಿಗೆ ಭಾಷಾಂತರಿಸಿದ್ದಕ್ಕಾಗಿ ಸತ್ಕರಿಸಲು ಆಹ್ವಾನಿಸಿದಾಗ ಅವರು, "ಗುರು ಬಸವಣ್ಣನವರು ಲಿಂಗೈಕ್ಯರಾದ ಶ್ರಾವಣಶುದ್ಧ ಪಂಚಮಿಯನ್ನು ತಾವು ಅನ್ವೇಷಿಸಿರುವುದಾಗಿಯೂ ಆದರೆ ಅವರ ಸಂಶೋಧನೆಯನ್ನು ಯಾರೂ ಗುರುತಿಸಿಲ್ಲವೆಂದು ದುಃಖಿಸಿದರು." ಕಾಲಜ್ಞಾನ ವಚನ ಮತ್ತು ತೆಲುಗಿನಲ್ಲಿ ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ಈ ಸಂಶೋಧನೆ ಮಾಡಿರುವುದನ್ನು, ಇದಕ್ಕೆ ಬಸವಣ್ಣನವರು ಅವರಿಗೆ ಅಧ್ಯಾತ್ಮಿಕವಾಗಿ ಮಾರ್ಗದರ್ಶನ ಮಾಡಿರುವುದಾಗಿಯೂ ಅವರು ಭಾವುಕರಾಗಿ ಹೇಳಿದರು. ನಮಗೆ ಪರಮಭಾಗ್ಯವು ಸಿಕ್ಕಂತೆ ಆಯಿತು. ನಾವು ಅರಸುತ್ತಿದ್ದ ಅಮೂಲ್ಯ ದಿನ ಸಿಕ್ಕಿದಾಗ ಅದೇ ವರ್ಷವೇ ಬಸವ ಲಿಂಗೈಕ್ಯ ದಿನವನ್ನು ಆಚರಿಸಿದೆವು. ಆಗಲೂ ಗುರು ಬಸವಣ್ಣನವರ ಅಂತರಂಗ ಶತ್ರುಗಳಿಂದ ಟೀಕೆ- ಟಿಪ್ಪಣಿ ಪತ್ರಿಕೆಗಳಲ್ಲಿ ಪ್ರಕಟವಾದವು.

ದೆಹಲಿಯಲ್ಲಿ "ಬಸವ ಲಿಂಗೈಕ್ಯ ದಿನ ಆಚರಿಸಿರಿ; 1997 ರಲ್ಲಿ ಆಚರಿಸಿ ಅಂದು ಸ್ಟಾಂಪ್ ಬಿಡುಗಡೆ ಮಾಡಲಾಗಿತ್ತು." ಎಂದು ಅಲ್ಲಿ ಇರುವ ಪೂಜ್ಯ ಚನ್ನಬಸವಾನಂದ ಸ್ವಾಮಿಗಳಿಗೆ ತಿಳಿಸಿದೆನು. ದೆಹಲಿಯ ಚಾಣಕ್ಯ ಪುರಿಯಲ್ಲಿರುವ ಕರ್ನಾಟಕ ಭವನವನ್ನು ಬುಕ್ ಮಾಡಿ ಅವರು ಕಾರ್ಯಕ್ರಮದ ಸಿದ್ಧತೆ ಆರಂಭಿಸಿದರು. ಆಗ ಉತ್ಸಾಹದಿಂದ ಸಹಕರಿಸಲು ನೆರವಾಗುತ್ತಿದ್ದ ಶರಣರೊಬ್ಬರಿಗೆ ಕರ್ನಾಟಕದ ಓರ್ವ ಸ್ವಾಮಿಗಳು ಫೋನ್ ಮಾಡಿದರಂತೆ, ಸಹಜವಾಗಿ ಅವರು ಬಸವ ಲಿಂಗೈಕ್ಯ ಸಂಸ್ಮರಣೆ ಬಗ್ಗೆ ಹೇಳಿದಾಗ "ಅದನ್ನು ಮಾತಾಜಿಯವರು ಮತ್ತು ಅವರ ಅನುಯಾಯಿಗಳು ಮಾತ್ರ ಆಚರಿಸುತ್ತಾರೆ. ನಾವು ಆಚರಿಸುವುದಿಲ್ಲ." ಎಂದರಂತೆ. ಇದರಿಂದ ನಮ್ಮ ಕೆಲವು ಮಠಾಧೀಶರ ಮನೋಭಾವ ಏನೆಂಬುದು ತಿಳಿಯುತ್ತದೆ. ಜಗತ್ತಿನ ಎಲ್ಲ ಧರ್ಮಗಳು ತಮ್ಮ ಧರ್ಮಗುರುವಿನ ನಿರ್ವಾಣ(ಲಿಂಗೈಕ್ಯ) ದಿನವನ್ನು ಕೃತಜ್ಞತೆಯಿಂದ ಆಚರಿಸುತ್ತಿವೆ. ಈ ಕೊರತೆಯನ್ನು ನಮ್ಮ ಮಠಾಧೀಶರು ಎಂದೋ ಅರಿತು, ತುಂಬಬೇಕಿತ್ತು. ನಾವಾದರೂ ಡಾ||ಬಾಡಾಲ ರಾಮಯ್ಯನಂಥವರ ಸಂಶೋಧನೆಗೆ ಗೌರವ ಕೊಟ್ಟು ಆಚರಿಸುತ್ತಿದ್ದೇವೆ, ಆ ದಿನವನ್ನು ಜನಪ್ರಿಯಗೊಳಿಸುತ್ತಿದ್ದೇವೆ. ಆದರೆ ನಮ್ಮ ಮೇಲಿನ ಈರ್ಷೆ ಮಾತ್ಸರ್ಯಗಳಿಂದ ಧರ್ಮಗುರುವಿಗೆ ದ್ರೋಹವೆಸಗುತ್ತಿದ್ದೇವೆ ಎಂಬ ಅರಿವೂ ಇಲ್ಲದೆ, ಭಯವೂ ಇಲ್ಲದೆ ಅದನ್ನು ವಿರೋಧಿಸುತ್ತಾರೆ. ಹೋಗಲಿ ಇನ್ನೊಂದು ದಿನವನ್ನು ಪರ್ಯಾಯವಾಗಿ ಸೂಚಿಸುವ ಕಳಕಳಿ, ಬೌದ್ಧಿಕ ಸಾಮರ್ಥ್ಯವಾದರೂ ಅಂಥ ವಿರೋಧಿಗಳಿಗೆ ಇದೆಯೆ? ಇದರಿಂದ ನನಗೆ ಅನ್ನಿಸುವುದೇನೆಂದರೆ, ಪೂರಾ ಲಿಂಗಾಯತ ಸಮಾಜವನ್ನು ತಿದ್ದುವುದು ಇನ್ನು ಆಗದ ಮಾತು. ಇಡೀ ನದಿಯನ್ನು ಶುದ್ಧೀಕರಣ ಮಾಡುತ್ತೇವೆ ಎಂಬ ಸಾಹಸದಂತಿದೆ ಇದು. ನದಿಯ ನೀರನ್ನು ಕೊಳವೆ ಮೂಲಕ ಹಾಯಿಸಿ ತಂದು ಶುದ್ಧೀಕರಣ ಯಂತ್ರದ ನೆರವಿನಿಂದ ಶುದ್ಧೀಕರಿಸುವಂತೆ, ರಾಷ್ಟ್ರೀಯ ಬಸವ ದಳ ಕಟ್ಟಿ ಹಳೆಯ ಲಿಂಗಾಯತರನ್ನು ಶುದ್ಧೀಕರಿಸಿ ಒಂದು ತತ್ತ್ವಕ್ಕೆ ತರಬೇಕು ; ಲಿಂಗಾಯತೇತರರನ್ನು ಆಕರ್ಷಿಸಬೇಕು ; ಒಂದು ವಿಶಿಷ್ಟ ತತ್ತ್ವಕ್ಕೆ ಬದ್ಧರಾದ ಜನರಿಂದ ಮತ್ತೆ ಇದನ್ನು ವಿಸ್ತರಿಸುತ್ತ ಹೋಗಬೇಕು. ಅಧ್ಯಾತ್ಮಿಕ ಪ್ರವೃತ್ತಿ, ಧರ್ಮಗುರು ನಿಷ್ಠೆ ಇಲ್ಲದ ಜನರು ಎಷ್ಟು ಸಂಖ್ಯೆಯಲ್ಲಿದ್ದರೇನು? ಗಾತ್ರ ಮುಖ್ಯವಲ್ಲ ಸತ್ವವು ಮುಖ್ಯ!

ಈ ಹಿನ್ನೆಲೆಯಲ್ಲಿ ಸಭೆ - ಸಮಾರಂಭಗಳು ಬರೀ ಔಪಚಾರಿಕ, ಪರಸ್ಪರ ಹೊಗಳಿಕೆಯ ವೇದಿಕೆಗಳಾಗದೆ ಧರ್ಮಗುರುವಿಗೆ, ಅವರ ಸಮಕಾಲೀನ ಶರಣರಿಗೆ ಭಕ್ತಿ - ಕೃತಜ್ಞತೆ ಸಲ್ಲಿಸುವ ಭಾವಪೂರ್ಣ ಕಾರ್ಯಕ್ರಮಗಳಾಗಬೇಕು. ದಿನ ಪತ್ರಿಕೆಗಳು, ಪ್ರಸಾರ ಮಾಧ್ಯಮಗಳು ರಾಜಕೀಯ ವ್ಯಕ್ತಿಗಳಿಗೆ ಬಹಳಷ್ಟು ಪ್ರಚಾರಕೊಡುತ್ತವೆ ಎಂದು ವೇದಿಕೆಗಳನ್ನು ರಾಜಕೀಯ ಧುರೀಣರ ಪ್ರದರ್ಶನ ರಂಗ ಮಾಡುವ ಬದಲು ಭಕ್ತಿ-ಜ್ಞಾನ ಪೂರ್ಣ ಸಮಾವೇಶಗಳನ್ನಾಗಿ ಮಾಡಬೇಕು. ಆದಿ ಶರಣರು ಗುರು ಬಸವಣ್ಣನವರ ಔನ್ನತ್ಯ, ಸರ್ವಾಂಗ ಪರಿಪೂರ್ಣ ವ್ಯಕ್ತಿತ್ವ ಕುರಿತು ಮನ ತುಂಬಿ ಹೊಗಳಿದಾರೆ; ಹಾಡಿ ಕೊಂಡಾಡಿದ್ದಾರೆ. ಸಮಕಾಲೀನ ಶರಣರ ಚಿತ್ರಣ ಅಷ್ಟು ಸ್ಪಷ್ಟವಾಗಿದ್ದೂ ಸಹ ಇತ್ತೀಚಿನ ಸಾಹಿತಿಗಳು, ಭಾಷಣಕಾರರು ಗುರು ಬಸವಣ್ಣನವರು ಕೇವಲ ಒಬ್ಬ ಸುಧಾರಕರು ಎಂಬಂತೆ ಚಿತ್ರಿಸುವುದು ನಿಜಕ್ಕೂ ವಿಷಾದನೀಯ. ಆದ್ದರಿಂದ ಕ್ರೈಸ್ತ ಜಗತ್ತಿನ ಪರಮೋಚ್ಚ ಧರ್ಮಗುರು ಪೋಪ್ ಸಹ ಏಸುವಿಗೆ ಕಿಂಕರತೆಯಿಂದ ಗೌರವಿಸುವಂತೆ ನಾವುಗಳು ಧರ್ಮಗುರು ಬಸವಣ್ಣನವರಿಗೆ ಅತ್ಯುನ್ನತ ಗೌರವ ನೀಡುವ ಪರಿಪಾಠವನ್ನು ಬೆಳೆಸಿಕೊಳ್ಳಬೇಕು. ಬಸವ ಜಯಂತಿಯಂತಹ ಸಮಾರಂಭಗಳಲ್ಲಿ ಗುರು ಬಸವಣ್ಣನವರಿಗೆ ಪೂಜೆ ಸಲ್ಲಿಸದೆ, ಸ್ತುತಿ ಮಾಡದೆ ಸಂದರ್ಭಕ್ಕೆ ಹೊಂದದ ಯಾವುದೋ ಎರಡು ವಚನಗಳನ್ನು ಹಾಡಿ ಶುಷ್ಕವಾಗಿ ಬಸವ ಜಯಂತಿ ಆಚರಿಸದೆ, ಸಾಮೂಹಿಕವಾಗಿ ಹಾಡುತ್ತ ಪೂಜಿಸಿ, ಬಸವ ಸ್ತುತಿ, ಪುಷ್ಪವೃಷ್ಟಿ ಮಾಡಿ, ಆರತಿ ಬೆಳಗುವ ಪರಿಪಾಠ ಮಾಡುತ್ತ ರೂಢಿಸಬೇಕು.

- ಮಾತಾಜಿ

2. ಕಲ್ಯಾಣ ಕ್ರಾಂತಿ ಸಂಸ್ಮರಣೆಯ ಆಚರಣೆ

ಕಲ್ಯಾಣ ಕ್ರಾಂತಿ ಒಂದು ಅಪೂರ್ವ, ದಿಟ್ಟ ಹೆಜ್ಜೆಯ ಹೋರಾಟದ ಫಲಶ್ರುತಿ. ಭಾರತ ದೇಶದ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಇಬ್ಬರು ವರ್ಣೀಯರ ನಡುವೆ ನಂಟಸ್ಥಿಕೆ ಗುರು ಬಸವಣ್ಣನವರ ನೇತೃತ್ವದಲ್ಲಿ ಬಸವ ಕಲ್ಯಾಣದಲ್ಲಿ ಜರುಗಿತು. ವಚನ ಸಾಹಿತ್ಯಸಂವಿಧಾನದ ಪ್ರಕಾರ, ಹುಟ್ಟು ಬ್ರಾಹ್ಮಣ ಮಧುವರಸ, ಜನ್ಮತಃ ಸಮಗಾರನಾದ ಶರಣ ಹರಳಯ್ಯ ಉಭಯತರೂ ಲಿಂಗಾಯತ ಧರ್ಮದ ದೀಕ್ಷೆ ಪಡೆದು ಶರಣರಾದ ಕಾರಣ ಸಮಾನರು, ಏಕ ಧರ್ಮೀಯರು. ಆದರೆ ಅಂದು ರೂಢಿಯಲ್ಲಿದ್ದ ವರ್ಣಾಶ್ರಮ ಸಾಮಾಜಿಕ ವ್ಯವಸ್ಥೆಯ ಪ್ರಕಾರ ಅವರು ಭಿನ್ನವರ್ಣೀಯರು. ಶರಣ ಮಧುವರಸರ ಮಗಳನ್ನು ಹರಳಯ್ಯನವರ ಮಗನಿಗೆ ಮದುವೆ ಮಾಡಿಸಲು ಗುರು ಬಸವಣ್ಣನವರು ನೇತೃತ್ವ ವಹಿಸಿದ್ದರಿಂದ ಸಂಪ್ರದಾಯವಾದಿಗಳು ಸಿಡಿದೆದ್ದರು. ಗುರು ಬಸವಣ್ಣನವರನ್ನು ಗಡಿಪಾರು ಮಾಡಲಾಯಿತು, ಹರಳಯ್ಯ-ಮಧುವರಸ-ಶೀಲವಂತರನ್ನು ಎಳೆಹೂಟೆ ಶಿಕ್ಷೆಯ ಮೂಲಕ ಕೊಲ್ಲಲಾಯಿತು. ಈ ಎಲ್ಲ ಬಲಿದಾನವಾದುದು ಸ್ವಾರ್ಥಕ್ಕಾಗಿ, ಹೆಣ್ಣು ಹೊನ್ನು ಮಣ್ಣುಗಳ ಗಳಿಕೆ-ಉಳಿಕೆ -ಬಳಕೆಗಾಗಿ ಅಲ್ಲ ಸಮಾನತೆಯನ್ನು ಸಾರಲಿಕ್ಕೆ.

ಜಗತ್ತಿನಲ್ಲಿ ಧರ್ಮಕ್ಕಾಗಿ, ದೇವರಿಗಾಗಿ ಅನೇಕ ಹೋರಾಟ, ಬಲಿದಾನ ನಡೆದಿವೆ. ಬೌದ್ಧ ಭಿಕ್ಕುಗಳ ಇಸ್ಲಾಂದಲ್ಲಿ ಇಬ್ರಾಹಿಂರ, ಶಿಲುಬೆಯ ಮೇಲೆ ಏಸುವಿನ, ಸಿಖ್ ಧರ್ಮದಲ್ಲಿ ಗುರು ತೇಜ್ ಬಹೂದ್ದೂರ್, ಗುರು ಗೋವಿಂದ ಸಿಂಗರ ಬಲಿದಾನಗಳು ವಿಶ್ವವಿಖ್ಯಾತವಾಗಿವೆ. ಈ ಎಲ್ಲವನ್ನು ಮೀರಿಸುವ, ಸಮಾನತೆಗಾಗಿ ಆದ ಬಲಿದಾನ ಹರಳಯ್ಯ ಮಧುವರಸರದ್ದು. ಹುತಾತ್ಮರ ದಿನಗಳನ್ನು ಆಯಾ ಧರ್ಮಗಳ ಜನರು ಅತ್ಯಂತ ಭಕ್ತಿ - ನಿಷ್ಠೆ - ಕೃತಜ್ಞತೆಗಳಿಂದ ಆಚರಿಸುತ್ತಾರೆ. ಆ ಪರಿಪಾಠ ಲಿಂಗಾಯತ ಸಮಾಜದಲ್ಲಿ ಸಾಗಿ ಬಂದಿಲ್ಲದಿರುವುದು ಅತ್ಯಂತ ವಿಷಾದನೀಯ ಸಂಗತಿ. ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠದ ವತಿಯಿಂದ ಕಲ್ಯಾಣ ಕ್ರಾಂತಿಯ ಸಂಸ್ಮರಣೆಯನ್ನು ಈಗಾಗಲೇ ನಾವು ಆಚರಣೆಯಲ್ಲಿ ತರಲಾಗಿದೆ.

ಕಾಲಜ್ಞಾನ ವಚನಗಳ ಪ್ರಕಾರ ಕಲ್ಯಾಣ ಕ್ರಾಂತಿ ನಡೆದುದು ರಾಕ್ಷಸನಾಮ ಸಂವತ್ಸರದ ಫಾಲ್ಗುಣ ಮಾಸದ ದ್ವಾದಶಿ, ತ್ರಯೋದಶಿ, ಚತುರ್ದಶಿಯಂದು. ಅದು ಹೋಳಿ ಹುಣ್ಣಿಮೆಯ ಸಮಯ. ಹಿಂದುಗಳು ಆಚರಿಸುವ ಹೋಳಿ / ಕಾಮನ ಹುಣ್ಣಿಮೆ ಮೂಲತಃ ಯೋಗಿರಾಜ ಶಿವನಿಗೆ ಸಂಬಂಧಿಸಿದ ಕಾಮ ನಿಗ್ರಹದ ಪವಿತ್ರ ಹಬ್ಬವಾಗಿದ್ದರೂ ಇಂದು ಅತ್ಯಂತ ಕೆಳಮಟ್ಟದ ಬೈಗುಳದ ಹಬ್ಬವಾದ್ದರಿಂದ ಆ ಸಮಯದಲ್ಲಿ ಕಲ್ಯಾಣ ಕ್ರಾಂತಿಯ ಸಂಸ್ಮರಣೆಯನ್ನು ಭಕ್ತಿಯಿಂದ ಆಚರಿಸಲು ಸಾಧ್ಯವಾಗದು. ಹುಣ್ಣಿಮೆಯ ಆಸುಪಾಸಿನ ದಿನಗಳಲ್ಲಿ ಹೋಳೀ ಆಡುವ ಆಚರಣೆ ಇರುವುದರಿಂದ ಸಭ್ಯ ಜನರು ಮನೆಯ ಹೊರಗೆ ಬರುವುದಿಲ್ಲ, ಕೆಲವೊಮ್ಮೆ ದೂರದ ಸ್ಥಳಗಳಿಗೆ ಹೋಗಿ ಇದ್ದು ಬಿಡುತ್ತಾರೆ. ಆದ್ದರಿಂದ ಅಂದು ಘಟನೆ ನಡೆದುದು ಫಾಲ್ಗುಣ ಮಾಸದ ಹೋಳೀ ಹುಣ್ಣಿಮೆಯ ಸಮಯದಲ್ಲಿ ಆಗಿದ್ದರೂ ಇದನ್ನು ಬೇರೊಂದು ಸಮಯದಲ್ಲಿ ಆಚರಿಸಬೇಕೆಂದು ಕಲ್ಯಾಣ ಪರ್ವದ ಚಿಂತನಗೋಷ್ಠಿಯಲ್ಲಿ ಚರ್ಚಿಸಿ ನಿರ್ಧರಿಸಲಾಯಿತು. ಎಲ್ಲರೂ ಇದನ್ನು ಒಮ್ಮತದಿಂದ ಬೆಂಬಲಿಸಿದರಲ್ಲದೆ, ದಸರಾ ಸಮಯದಲ್ಲಿ ಆಚರಿಸುವುದು ಸೂಕ್ತ ಎಂಬ ನಿರ್ಣಯಕ್ಕೆ ಬರಲಾಗಿದೆ. ಇದರಿಂದ "ಘಟ್ಟ" ಕೂರಿಸುವ ಸಂಪ್ರದಾಯವಿರುವ ಕೆಲವು ಭಾಗಗಳಲ್ಲಿ, ನವರಾತ್ರಿ ಸಮಯದಲ್ಲಿ ದೇವಿ ಪುರಾಣ ಓದುವ ಪರಿಪಾಠವಿರುವಲ್ಲಿ ಅವನ್ನು ಬಿಡಿಸಲು ಅನುಕೂಲವಾಗುವುದೆಂದು ಸೂಚಿಸಿದಾಗ ಶರಣ ಬಂಧುಗಳು ತುಂಬಾ ಸಂತೋಷದಿಂದ ಒಪ್ಪಿಕೊಂಡರು. ಆದ್ದರಿಂದ ಕಲ್ಯಾಣ

ಕ್ರಾಂತಿಯ ಸಂಸ್ಮರಣೆಯನ್ನು ಮುಂದೆ ತಿಳಿಸಿದಂತೆ ಮಾಡಬೇಕೆಂದು ನಿರ್ಧರಿಸಲಾಗಿದೆ.

ಅಶ್ವಯುಜ ಮಾಸದ ಅಮವಾಸ್ಯೆ(21-9-2006 ಮತ್ತು 22-9-2006 ಎರಡು ದಿನ ಇದೆ)ಯ ಮರುದಿವಸದಿಂದ (2006 ವರ್ಷದ ಸಾಲಿನಲ್ಲಿ ಸೆಪ್ಟಂಬರ್ 22 ರಿಂದ) ಹತ್ತು ದಿವಸಗಳ ಕಾಲ ಕಲ್ಯಾಣ ಕ್ರಾಂತಿಯ ಸಂಸ್ಮರಣೆಯನ್ನು ಆಚರಿಸಬೇಕು. 9 ದಿವಸಗಳನ್ನು 9 ಶರಣರ ಹೆಸರಿನಲ್ಲಿ ಆಚರಿಸಿ ಅವರುಗಳ ಜೀವನ ಚರಿತ್ರೆ ಪಾರಾಯಣ ಮಾಡಬೇಕು.

1. ಪ್ರತಿಪದೆ (23-9-2006) ಗುರು ಬಸವಣ್ಣನವರ ಚರಿತ್ರೆ
2. ದ್ವಿತೀಯ (24-9-2006) ಶೂನ್ಯ ಪೀಠಾಧೀಶ ಅಲ್ಲಮ ಪ್ರಭು ದೇವರ ಚರಿತ್ರೆ
3. ತೃತೀಯ (25-9-2006) ಚಿನ್ಮಯ ಜ್ಞಾನಿ ಚನ್ನಬಸವಣ್ಣನವರ ಚರಿತ್ರೆ
4. ಚತುರ್ಥಿ (26-9-2006) ಬಸವ ಯೋಗಿ ಸಿದ್ಧರಾಮೇಶ್ವರರ ಚರಿತ್ರೆ
5. ಪಂಚಮಿ (27-9-2006) ವೀರ ವಿರಾಗಿಣಿ ಅಕ್ಕಮಹಾದೇವಿಯ ಚರಿತ್ರೆ
6. ಷಷ್ಠಿ (28-9-2006) ವೀರ ಗಣಾಚಾರಿ ಮಡಿವಾಳ ಮಾಚಿದೇವರ ಚರಿತ್ರೆ
7. ಸಪ್ತಮಿ (29-9-2006) ವೀರ ಮಾತೆ ಅಕ್ಕನಾಗಲಾಂಬಿಕೆಯ ಚರಿತ್ರೆ
8. ಅಷ್ಟಮಿ (30-9-2006) ಸರ್ವ ಶರಣರ ಸ್ಮರಣೆ
9. ಮಹಾನವಮಿ(1-10-2006) ಹರಳಯ್ಯ - ಮಧುವರಸ- ಶೀಲವಂತರ ಸಂಸ್ಮರಣೆ
10. ವಿಜಯ ದಶಮಿ(2-10-2006) ಬಸವ ಧರ್ಮ ವಿಜಯೋತ್ಸವ, ಪ್ರಸಾದ ದಾಸೋಹ.

<u>ಆಚರಣೆ ವಿವರ :</u> ನಡುಮನೆಯಲ್ಲಿ ಸುಂದರ ಮಂಟಪ ಕಟ್ಟಿ, ಗುರು ಬಸವಣ್ಣನವರ ಭಾವಚಿತ್ರ ಇಟ್ಟು ಅಲಂಕರಿಸಬೇಕು. ಪ್ರತಿಪದೆ ದಿನ ಮಾತ್ರ ಪೂರ್ತಿ ಪೂಜಾವ್ರತ ಮಾಡಿ ದಿನ ನಿತ್ಯ ಸಂಕ್ಷಿಪ್ತ ಪೂಜೆ ಮಾಡಿ ಆ ದಿನದ ಶರಣರ 108 ಸ್ತುತಿ ಪಠಿಸಬೇಕು.

1. ಪ್ರತಿಪದೆ (23-9-2006) ಬಸವೇಶ್ವರ ಪೂಜಾವ್ರತ.
2. ದ್ವಿತೀಯ (ದಿ.24) ಅಲ್ಲಮ ಪ್ರಭು ದೇವರ ಚರಿತ್ರೆ + ಅವರ 108 ಸ್ತುತಿ. - ಷ.ಸ್ತು ಮುಂದಿನ 4 ದಿನಗಳ ಕಾಲ ಮಾಡುವ ಶರಣರ ಸ್ಮರಣೆಯ ಸ್ತುತಿಗಳು ಲಭ್ಯವಿವೆ.

ಶರಣೆ. ವನಜಾ ಶ್ರೀನಿವಾಸ್ "ಷಡುಗಣಾಧೀಶರ ಸ್ತುತಿ" ಎಂಬ ಪುಸ್ತಕವನ್ನು ಬರೆದಿದ್ದು ವಿಶ್ವಕಲ್ಯಾಣ ಮಿಷನ್ ದಿಂದ ಪ್ರಕಟಿಸಲಾಗಿದೆ. ಅಂಚೆ ವೆಚ್ಚ ಸೇರಿ (ಬೆಲೆ 15 ರೂ) ಅದರಲ್ಲಿ 6 ಜನ ಗಣಾಧೀಶರ 108 ನಾಮಾವಳಿಗಳಿವೆ. ಅಕ್ಕನಾಗಲಾಂಬಿಕೆ ಕುರಿತ ಪುಸ್ತಕವೂ ಇದೆ. ಅಂಚೆ ವೆಚ್ಚ ಸೇರಿ (ಬೆಲೆ 20 ರೂ) ಅಷ್ಟಮಿಯ ದಿವಸ ಪಠಿಸಲು ಶರಣರ ಹೆಸರುಗಳಿವೆ. (ಇವನ್ನು ಸೆಪ್ಟಂಬರ್ ಕಲ್ಯಾಣ ಕಿರಣದಲ್ಲಿ ಪ್ರಕಟಿಸಲಾಗುವುದು. ಹಬ್ಬದ ಹೊತ್ತಿಗೆ ಕಲ್ಯಾಣ ಕಿರಣವು ತಲುಪಿರುತ್ತದೆ). ಮಹಾನವಮಿಯ ದಿವಸ ಹರಳಯ್ಯನವರ ಚರಿತ್ರೆ ಓದಬೇಕು.

ಮಹಾನವಮಿ ದಿವಸ ಮೆರವಣಿಗೆ ಇಡಬೇಕು. ಗುರು ಬಸವಣ್ಣನವರ ಭಾವಚಿತ್ರ, ಎಳೆ ಹೂಟೆ ಶಿಕ್ಷೆಯ ಭಾವಚಿತ್ರವನ್ನಿಟ್ಟು ಉತ್ಸವ ಆಚರಿಸಬೇಕು. ವರ್ಷದಲ್ಲಿ 2 ಉತ್ಸವಗಳು, ಒಂದು ಬಸವ ಜಯಂತಿಯಂದು ಇನ್ನೊಂದು ಮಹಾನವಮಿಯಂದು ನಡೆಸಬೇಕು. ಅನ್ಯ ಜನರು ಬನ್ನಿ ಮುಡಿಯುವ ಆಚರಣೆ ಮಾಡುತ್ತಾರೆ. ಶರಣ ಬಂಧುಗಳು ಹುತಾತ್ಮರಾದ ಶರಣರ ಮೆರವಣಿಗೆ ಮಾಡಬೇಕು.

ರಾಷ್ಟ್ರೀಯ ಬಸವ ದಳ, ಬಸವ ತತ್ತ್ವ ಪ್ರಚಾರಕ ಸಂಘ-ಸಂಸ್ಥೆಗಳು ಇರುವವರು ಒಂಬತ್ತು ದಿನ ಪ್ರತಿನಿತ್ಯ ಸಂಜೆ ಕಲ್ಯಾಣ ಕ್ರಾಂತಿಯ ಪುಸ್ತಕವನ್ನು ಅಥವಾ ಎಲ್ಲರಿಗೆ ಬೆಲ್ಲಾದ ಕಲ್ಯಾಣ ಬಸವಯ್ಯ ಪುಸ್ತಕವನ್ನಾಗಲಿ ಓದಿ, ವ್ಯಾಖ್ಯಾನ ಮಾಡಬೇಕು. ಇನ್ನು ಪ್ರತಿಯೊಬ್ಬರೂ ತಮಗೆ ಸಾಧ್ಯವಾದಷ್ಟು ವಚನಗಳನ್ನು ಚಿಕ್ಕ ಕಾಗದದ ತುಂಡು ಮಾಡಿ, ಅದರಲ್ಲಿ ಬರೆಯಬೇಕು.

ಮಾದರಿ

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ್ನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಲಿಂಗದೇವನು ಎಂತೊಲಿವನಯ್ಯ

- ಧರ್ಮ ಪಿತ ಗುರು ಬಸವಣ್ಣನವರು

ಬರೆದವರು : ವಚನ ಶ್ರೀ,

ನಿಷ್ಠೆಯಿಂದ, ಸುಂದರವಾಗಿ, ವಚನಗಳನ್ನು ಅರ್ಥಮಾಡಿಕೊಳ್ಳುತ್ತ ಬರೆಯಬೇಕು. ಮಹಾನವಮಿಯ ಉತ್ಸವದಂದು ಶರಣ ಬಂಧುಗಳಿಗೆ ಹಂಚಬೇಕು. ಮೆರವಣಿಗೆ ಹೋಗುವಾಗ ದಾರಿಯಲ್ಲಿ ಭೇಟಿಯಾದವರಿಗೆ ಶರಣಾರ್ಥಿ ಸಲ್ಲಿಸಿ ವಚನ ಪ್ರಸಾದ ಹಂಚುತ್ತ ಸಾಗಬೇಕು.

ವಿಜಯ ದಶಮಿಯಂದು ಕಾರ್ಯಕ್ರಮ ಏರ್ಪಡಿಸಿ, ಬಸವ ಧರ್ಮ ವಿಜಯೋತ್ಸವ ಆಚರಿಸಬೇಕು. ಗಣ ದಾಸೋಹವನ್ನು ಮಾಡಬೇಕು ಹೀಗೆ ದಸರಾದ 10 ದಿವಸಗಳನ್ನು ಕಲ್ಯಾಣ ಕ್ರಾಂತಿಯ ಸಂಸ್ಮರಣಾ ಉತ್ಸವವನ್ನಾಗಿ ಆಚರಿಸಬೇಕು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ

[ಆಗಸ್ಟ್ ಕಲ್ಯಾಣ ಕಿರಣ ಓದಿ, ಬದಲಾವಣೆ, ತಿದ್ದುಪಡಿ ಸೂಚಿಸಲು ಬಯಸುವವರು ಬೆಂಗಳೂರು ವಿಳಾಸಕ್ಕೆ ಬರೆದು ತಿಳಿಸಬೇಕು. ಸೆಪ್ಟಂಬರ್ ಸಂಚಿಕೆಯಲ್ಲಿ ಸಲಹೆ ಪ್ರಕಟಿಸಲಾಗುವುದು.]

3. ಶರಣ(ರ) ನುಡಿಯೇ ಗತಿಮತಿ ಸೋಪಾನ

ಅಕ್ಕನ ಅಮರವಾಣಿ

-ಮಾತಾಜಿ

ಇತ್ತೀಚೆಗೆ ಒಬ್ಬ ಶರಣರ ಮನೆಗೆ ಪೂಜೆಗೆ ಹೋಗಿದ್ದೆವು. ಒಂದೆರಡು ವರ್ಷಗಳ ಹಿಂದೆ ಅವರ ಮನೆಯಲ್ಲಿ ಒಂದು ದುರ್ಘಟನೆ ನಡೆದಿತ್ತು. ಅವರ ಮಗ ಎಂಜನಿಯರಿಂಗ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದೆ ಇದ್ದುದರಿಂದ ಮನೆಯಲ್ಲಿ ಯಾರೂ ಇಲ್ಲದ ಸಮಯ ನೋಡಿ ಆತ್ಮಹತ್ಯೆ ಮಾಡಿಕೊಂಡಿದ್ದ. ಆ ನೋವಿನ ನೆನೆಪಿನಿಂದ ತಾಯಿ ಇನ್ನೂ ಹೊರಗೆ ಬಂದಿರಲಿಲ್ಲ. ಇನ್ನೂ ಅಳುತ್ತಲೇ ಇರುತ್ತಾರೆ. ಅವರ ದುಃಖಿತ ಪರಿಸ್ಥಿತಿ, ವರ್ತನೆಯಿಂದ ಉಳಿದವರೂ ಖಿನ್ನರಾಗುತ್ತಾರೆ, ಸಂತೋಷದ ಗಳಿಗೆಗಳು ಕೆಲವು ಬಂದರೂ ಅನುಭವಿಸಲಾರದವರಾಗುತ್ತಾರೆ. ಯಜಮಾನರು ಶರಣ ಸಂಗಮ-ವಾರದ ಪ್ರಾರ್ಥನೆಗೆ ತಪ್ಪದೆ ಹೋಗುತ್ತಾರೆ. ಆದರೆ ಹೆಂಡತಿ ಮಾತ್ರ ಮನೆ ಬಿಟ್ಟು ಎಲ್ಲೂ ಹೋಗುವುದಿಲ್ಲ. "ಸಾಮೂಹಿಕ ಪ್ರಾರ್ಥನೆಗೆ ಬಾ ಅಂದರೂ ಬರುವುದಿಲ್ಲ. ನಾನು ಮಾತ್ರ ಪ್ರಾರ್ಥನೆಗೆ ಹೋಗಿ ಪ್ರವಚನ ಕೇಳಿ ಸಮಾಧಾನ ಹೊಂದುತ್ತೇನೆ." ಎಂದು ಅವರು ಹೇಳಿದರು.

"ಅತ್ತು ಕಳೆವ ನೋವ ಹಾಡಿ ಕಳೆಯರೇಕಯ್ಯ?." ಎನ್ನುತ್ತಾಳೆ ಶರಣೆ ಸತ್ಯಕ್ಕ. ಕೆಲವು ವ್ಯಕ್ತಿಗಳು ಅಳುವುದರಲ್ಲೇ ಒಂದು ವಿಲಕ್ಷಣ ಸಮಾಧಾನ ಹೊಂದುವರೇನೋ ಎನ್ನಿಸುತ್ತದೆ. ಮತ್ತೆ ಕೆಲವರು ಕಾಯಿಲೆಯ ಬಗ್ಗೆ ವಿವರಿಸಿ ಹೇಳುವುದರಲ್ಲೇ ಒಂದು ವಿಶಿಷ್ಟ ಬಗೆಯ ಸಮಾಧಾನ ಹೊಂದುತ್ತಾರೆ. ಕಾಯಿಲೆಗಳು ಮತ್ತು ಚಿಂತೆ ಅವುಗಳ ಬಗ್ಗೆಯೇ ಆಲೋಚಿಸಿದಾಗ ಜಾಸ್ತಿಯಾಗುತ್ತವೆ. ಆ ಅನುಭವದಿಂದ ಹೊರ ಬರುವಂತೆ ಚಿತ್ತ-ಬುದ್ಧಿ-ಮನಸ್ಸುಗಳನ್ನು ಬೇರೆ ಕಡೆಗೆ ಹರಿಸಬೇಕು. ಪ್ರವಚನ ಶ್ರವಣ, ಸಾಹಿತ್ಯ ಅಧ್ಯಯನ, ಶರಣರ ಒಡನಾಟ ಚಿತ್ತ-ಮನ-ಬುದ್ಧಿಗಳನ್ನು ಬೇರೆ ಕಡೆಗೆ ತಿರುಗಿಸುತ್ತವೆ. ಹಾಗೆ ಮಾಡದೆ ಕಾಯಿಲೆಯ ಬಗ್ಗೆಯೇ ಚಿಂತಿಸುವುದರಿಂದ ಕಾಯಿಲೆ ಜಾಸ್ತಿಯಾಗುತ್ತದೆ; ಕಷ್ಟ-ನೋವುಗಳ ಬಗ್ಗೆಯೇ

ಆಲೋಚಿಸುವುದರಿಂದ ಚಿಂತೆ, ದುಃಖ ಜಾಸ್ತಿಯಾಗುತ್ತವೆ. ಅತ್ತು ಅತ್ತು ಸಮಯ ಕಳೆಯುವುದಕ್ಕಿಂತ ದೇವರನ್ನು, ಗುರುವನ್ನು ಕುರಿತು, ವಚನಗಳನ್ನು ಹಾಡುವುದರಿಂದ ನೋವು ಶಮನವಾಗುತ್ತದೆ.

ಇದಕ್ಕೆ ನಾನೊಂದು ಉದಾಹರಣೆ ಕೊಡುತ್ತೇನೆ. ಒಂದು ಗಾಯವಾಗಿರುತ್ತದೆ ಎಂದುಕೊಳ್ಳಿರಿ. ಒಂದು ಪಿನ್ನು ತೆಗೆದುಕೊಂಡು ಅದನ್ನು ಕೆದರಿದರೆ ಅದು ನಂಜು ಆಗುವ ಸಂಭವ ಇರುತ್ತದೆ. ಅದರ ಬದಲು ಕ್ರಿಮಿನಾಶಕ ಹಾಕಿ ತೊಳೆದು, ಮುಲಾಮು ಹಚ್ಚಿ, ಬ್ಯಾಂಡೇಜ್ ಕಟ್ಟಿ ಬಿಟ್ಟರೆ ಗಾಯವು ವಾಸಿಯಾಗುತ್ತದೆ. ಜೀವನದಲ್ಲಿ ದುರ್ಘಟನೆ ನಡೆದಾಗ ಅದರ ಬಗ್ಗೆ ಚಿಂತಿಸಿ, ಅಳುತ್ತಿದ್ದರೆ ಅದು ಮನೋಖಿನ್ನತೆಗೆ ಕಾರಣವಾಗುತ್ತದೆ. ಅದರ ಬದಲು ಜ್ಞಾನದ ಕ್ರಿಮಿನಾಶಕದಿಂದ ತೊಳೆದು, ಭಕ್ತಿಯ ಮುಲಾಮು ಹಚ್ಚಿ, ಸತ್ಸಂಗ(ಶರಣರ ಸಂಗ)ದ ಬ್ಯಾಂಡೇಜ್ ಕಟ್ಟಿದರೆ ಎಂಥಾ ನೋವೂ ಮಾಯವಾಗಿ ಆತ್ಮಸ್ಥೈರ್ಯ ಬೆಳೆಯುವುದು. "ಋಣಾನುಬಂಧ ಎಷ್ಟು ದಿವಸ ಇರುತ್ತೋ ಅಷ್ಟು ದಿವಸ ಈ ಲೌಕಿಕ ಸಂಬಂಧ ಇರುತ್ತದೆ. ಚಿಂತೆ ಮಾಡಿ ಇತರರನ್ನು ಖಿನ್ನರಾಗಿಸಬೇಡಿರಿ. ಚೇತರಿಸಿಕೊಳ್ಳಿರಿ. ಅಜ್ಞಾನ ಸಾಕು." ಎಂದು ಹೇಳಿ ಬಂದೆ.

ಶರಣೆ ಸತ್ಯಕ್ಕನ ನುಡಿ ನಿಜಕ್ಕೂ ಜೀವನದಲ್ಲಿ ಉತ್ತಮ ಸೋಪಾನ. ಅಕ್ಕನಾಗಲಾಂಬಿಕೆ ತಮ್ಮನಾಗಿದ್ದ ಗುರು ಬಸವಣ್ಣನವರಲ್ಲಿ ಕ್ರಾಂತಿಯ ಕಿರಣ ಮೂಡಿಸಿದ ವಿಚಾರಶೀಲೆ, ಇಡೀ ಜೀವನ ಪರ್ಯಂತರ ಗುರು ಬಸವಣ್ಣನವರ ಜೊತೆ ಹೆಗಲೆಣೆಯಾಗಿ ದುಡಿದ ಮಹಿಮಾನ್ವಿತೆ. ಕಾಲಜ್ಞಾನ ವಚನಗಳಲ್ಲಿ ಉಲ್ಲೇಖವಾದಂತೆ ಅಶ್ವಾರೋಹಿಯಾಗಿ ಸಂಚರಿಸಿ ಧರ್ಮ ಪ್ರಚಾರ ಮಾಡಿದ್ದು ಮಾತ್ರವಲ್ಲ, ವಚನ ಸಾಹಿತ್ಯಕ್ಕೆ ಸಂಕಷ್ಟ ಬಂದಾಗ ಧೈರ್ಯವಾಗಿ ಮುಂದಾಳತ್ವ ವಹಿಸಿ ವಚನ ವಾಙ್ಮಯವನ್ನು ರಕ್ಷಿಸಿದಳು. ಇಂಥ ಅಕ್ಕನಾಗಲಾಂಬಿಕೆಯ ಎದುರಲ್ಲೇ ಕಲ್ಯಾಣ ಕ್ರಾಂತಿಯಾಯಿತು, ಗುರು ಬಸವಣ್ಣನವರು ಲಿಂಗೈಕ್ಯರಾದರು, 24 ವರ್ಷಗಳ ಮಗ ತರುಣ ಸನ್ಯಾಸಿ ಚನ್ನಬಸವಣ್ಣನವರು ಲಿಂಗೈಕ್ಯರಾದರು. ಆದರೂ ಆ ತಾಯಿ ಧೈರ್ಯ ತಂದುಕೊಂಡು 72 ವರ್ಷಗಳ ವೃದ್ಧಾಪ್ಯದಲ್ಲೂ ಧರ್ಮ ಪ್ರಚಾರ ಮಾಡಲು ಸಂಚರಿಸಿದಳು. ನಿಜಕ್ಕೂ ಆ ತಾಯಿಯ ಚಿತ್ತ ಸಮತೆ ಅನುಕರಣೀಯ. ಶರಣರ ಬದುಕು ಬರೀ ಹಾಡಿ ಹೊಗಳಲಿಕ್ಕೆ ಅಷ್ಟೇ ಸೀಮಿತವಾಗಬಾರದು, ಪ್ರತಿ ಹೆಜ್ಜೆಯಲ್ಲೂ ಮಾರ್ಗದರ್ಶನ ಮಾಡುವಂತಿರಬೇಕು.

ಮತ್ತೊಬ್ಬ ಶರಣರಿಗೆ ಒಬ್ಬ ಮಗ, ಒಬ್ಬ ಮಗಳು. ಎಂಜನಿಯರಿಂಗ್ ಓದುತ್ತಿದ್ದವನು; ಒಂದು ದಿವಸ ರಜೆಯಲ್ಲಿ ಬಂದಾಗ ಯಾರೋ ತಿಳಿಗೇಡಿ ಹುಡುಗರ ಮಾತು ಕೇಳಿ ಜೇನುಗೂಡು ಬಿಡಿಸಲು ಹೋಗಿದ್ದಾನೆ. ಅದು ಎಷ್ಟು ಅಪಾಯಕಾರಿ ಪ್ರಯತ್ನ ಎಂಬ ಅರಿವು ಆತನಿಗಿಲ್ಲ. ಒಂದು ಉದ್ದವಾದ ಜಿ.ಐ ಪೈಪ್ ತಗೊಂಡು ಆ ಜೇನುಗೂಡಿಗೆ ಬಡಿಯಲು ಹೋಗುವಾಗ ಅದು ಜೋಲಿ ತಪ್ಪಿ ಶಕ್ತಿಶಾಲಿ ವಿದ್ಯುತ್ ವೈಯರ್‌ಗೆ ಬಡಿದ ತಕ್ಷಣ ವಿದ್ಯುತ್ ಆಘಾತದಿಂದ ಮರಣ ಹೊಂದಿದ. ದುಃಖ ತಪ್ತ ತಾಯಿ ತಂದೆಗಳನ್ನು ಸ್ವಲ್ಪ ಕಾಲದ ನಂತರ ಭೇಟಿಯಾಗುವ ಸಂದರ್ಭ ಬಂದಿತು. ಅವರನ್ನು ನೋಡುವ ಮೊದಲು ನನ್ನ ಮನಸ್ಸಿನಲ್ಲಿ ಅಪಾರ ತಾಕಲಾಟ. ಆ ತಾಯಿ ತಂದೆ ಇನ್ನೂ ಚಿಂತೆಯಿಂದ ಹೊರಬಂದಿರುವರೋ ಇಲ್ಲವೋ? ಯಾವ ಪದಗಳಿಂದ ಸಂತೈಸಬೇಕು? ಎಂದು ಆಲೋಚಿಸುತ್ತಿದ್ದೆ. ಅವರು ಭೇಟಿಗೆ ಬರುವುದು ತಡವಾಯಿತು. ಮತ್ತಷ್ಟು ವ್ಯಾಕುಲತೆ. ಫೋನ್ ಮಾಡಿಸಿದೆ. ನಂತರ ಬಂದರು. ಅಂತರಂಗದಲ್ಲಿ ನೋವು ಇದ್ದಿರಲೇಬೇಕು. ಮೇಲಿನ ಪ್ರಸಂಗ ನಡೆದು ಸುಮಾರು 2 ವರ್ಷವಾಗಿರಬಹುದು. ಆದರೆ ಈ ಎರಡನೆ ಪ್ರಸಂಗ ನಡೆದು ಹದಿನೈದು ದಿವಸ ಕೂಡ ಆಗಿರಲಿಲ್ಲ. ಆದರೂ ಆ ದಂಪತಿಗಳು ಹೊರಗೆ ತೋರಿಸಿಕೊಳ್ಳಲಿಲ್ಲ. ಸಹಜವಾಗಿಯೇ ನಡೆದುದನ್ನು ವಿವರಿಸಿದರು. ಆಗ ಅನ್ನಿಸಿತು, "ಜ್ಞಾನ, ವಿವೇಕ ಇವರಲ್ಲಿ ಹೆಚ್ಚು ಕೆಲಸ ಮಾಡುತ್ತಿವೆ. ಅನಿರೀಕ್ಷಿತವಾಗಿ ಆಘಾತಗಳು ಎದುರಾದಾಗ ಅನಿವಾರ್ಯವಾಗಿಯಾದರೂ ಪರಿಸ್ಥಿತಿಗೆ ಹೊಂದಿಕೊಳ್ಳಬೇಕಾಗುತ್ತದೆ. ಓರ್ವ ತತ್ತ್ವಜ್ಞಾನಿ ಹೇಳುತ್ತಾನೆ, ಭೂತಕಾಲ (Past is dead) ಸತ್ತ ಶಿಶು, ಹುಗಿದು ಬಿಡು. ಭವಿಷ್ಯತ್ ಹುಟ್ಟಲಿರುವ ಶಿಶು, ಖಚಿತವಿಲ್ಲ. ವರ್ತಮಾನ ಕೈಯಲ್ಲಿರುವ ಶಿಶು, ಸರಿಯಾಗಿ ಪೋಷಿಸು. ಎಂಥಾ ಅಮೂಲ್ಯ ಮಾತುಗಳು. ಕೈಯಲ್ಲಿರುವ ಬದುಕನ್ನಾದರೂ ಅರ್ಥಪೂರ್ಣವಾಗಿ ಮಾಡಿಕೊಳ್ಳಬೇಕಲ್ಲವೆ?

ಉದಾಸೀನವಿಡಿದು ಶರಣೆನ್ನೆನು

ಮೇಲಿನ ಎರಡೂ ಪ್ರಸಂಗಗಳಿಗಿಂತಲೂ ದುಃಖಕರವಾದ ಮತ್ತೊಂದು ಘಟನೆ ನಡೆಯಿತು. ಅತ್ಯಂತ ಸಾತ್ವಿಕರಾದ, ತತ್ತ್ವನಿಷ್ಠ ಶರಣರು ; ಅವರ ಮಗಳಿಗೆ ಮದುವೆಯಾಯಿತು. ಮನೆ ಮಂದಿಗೆ ಮಾತ್ರವಲ್ಲ ನಮಗೂ ಇತರ ಶರಣ ಬಂಧುಗಳಿಗೂ ಎಲ್ಲರಿಗೂ ಖುಷಿಯೋ ಖುಷಿ. ಮದುವೆಯಾಗಿ 32 ದಿವಸ ಪೂರ್ಣಗೊಂಡಿಲ್ಲ; ದಂಪತಿಗಳು ನಗು ನಗುತ್ತ ಬಂದು ಭೇಟಿಯಾದುದನ್ನು ಕಂಡು ಎಲ್ಲ ಶರಣ ಬಂಧುಗಳು ಹರ್ಷಿಸಿ ಇನ್ನು 25 ದಿವಸ ಕಳೆದಿಲ್ಲ; ಆ ಹುಡುಗ ಅಪಘಾತಕ್ಕೆ ಈಡಾಗಿ ತೀರಿಕೊಂಡ. ಸುದ್ದಿ ಕೇಳುತ್ತಲೇ ಕಣ್ಣೀರು ಹಾಕದವರೇ ಇಲ್ಲ. ಎಂಥವರ ಹೃದಯವೂ ನಡುಗಿ ಬಿಟ್ಟಿತು, ಯಾರಿಗಾಗಿ ಆ ಮುಗ್ಧ ಹುಡುಗಿಗಾಗಿ! ಆಕೆಯ ಸಾತ್ವಿಕ, ತತ್ತ್ವನಿಷ್ಠ ತಂದೆ - ತಾಯಿಗಾಗಿ!

ಯಾವ ರೀತಿ ಧೈರ್ಯ ಹೇಳಬೇಕು? ಏನು ತತ್ತ್ವಜ್ಞಾನ ಇಲ್ಲಿ ಕೆಲಸ ಮಾಡೀತು? ಒಳ್ಳೆಯವರಿಗೆ ಇಂಥ ಕಷ್ಟವೆ? ಹಾಗಾದರೆ ವ್ಯಕ್ತಿ ಮಾಡುವ ಪೂಜೆ, ದಾನ, ಧರ್ಮ ಕಾಪಾಡಲಾರವೆ? ದೇವರು ನಿಜಕ್ಕೂ ಕ್ರೂರಿಯೆ? ಮನುಷ್ಯರು ಇನ್ನೊಬ್ಬರ ಏಳಿಗೆ ನೋಡಿ ಮತ್ಸರ ಪಡುವಂತೆ ದೇವರು ಸಹ ಸುಖವಾಗಿರುವುದನ್ನು ಕಂಡು ಮತ್ಸರ ಪಡುವನೆ? ಮನಸ್ಸು ಕ್ಷಣ ಕಾಲ ವ್ಯಗ್ರಗೊಂಡು, ವಿಚಲಿತವಾಗಿ ಹತ್ತಾರು ಪ್ರಶ್ನೆಗಳನ್ನು ದೇವರತ್ತ ಎಸೆಯಿತು. ಬಿರುಗಾಳಿಗೆ ಸಿಕ್ಕ ನಾವೆಯಂತೆ ಹೊಯ್ದಾಡಿದ ಮನಕ್ಕೆ ತಟ್ಟನೆ ಧರ್ಮಪಿತರ ಈ ವಚನ ನೆನಪಾಯಿತು.

ಸುಖ ಬಂದರೆ ಪುಣ್ಯದ ಫಲವೆಂಬೆನು
ದುಃಖ ಬಂದರೆ ಪಾಪದ ಫಲವೆಂಬೆನು
ನೀ ಮಾಡಿದೊಡಾಯಿತ್ತೆಂದೆನ್ನೆನು
ಕರ್ಮಕ್ಕೆ ಕತ್ತುವೆ ಕಡೆಯೆಂದೆಂಬೆನು
ಉದಾಸೀನವಿಡಿದು ಶರಣೆನ್ನೆನು
ಲಿಂಗದೇವಾ, ನೀ ಮಾಡಿದುಪದೇಶವು ಎನಗೀ ಪರಿಯಲಿ;
ಸಂಸಾರವ ಸವೆಯೆ ಬಳಸುವೆನು. - ಬ.ವ.ದೀ.692

ಸಾಮಾನ್ಯ ಜನರಿಗಿಂತಲೂ ತತ್ತ್ವಕ್ಕೆ ಬದ್ಧರಾದ ನಿಜ ಶರಣರಿಗೆ ಸಂಕಷ್ಟಗಳು ಎದುರಾಗುತ್ತವೆ. ಆದರೆ ಅವರು ದೇವರಲ್ಲಿ, ಗುರುವಿನಲ್ಲಿ ನಂಬಿಕೆಯನ್ನು ಕಳೆದುಕೊಳ್ಳುವುದಿಲ್ಲ. ಸಂಪ್ರದಾಯವಾದಿಗಳಿಂದ ಪೂಜ್ಯ ಗುರುಗಳಾದಿಯಾಗಿ ನಾವುಗಳು ಸಾಕಷ್ಟು ಕಿರುಕುಳ, ಕಷ್ಟ ಕೋಟಲೆ ಅನುಭವಿಸಿದೆವು. ಕೆಲವರು ಹೇಳುತ್ತಾರೆ, "ನೀವು ಇಷ್ಟೆಲ್ಲ ಲಿಂಗದೇವನ ಮಹಿಮೆ ಮೆರೆಸಲು, ಗುರು ಬಸವಣ್ಣನವರ ತತ್ತ್ವ ಪ್ರಚಾರಕ್ಕಾಗಿ ಕಷ್ಟ ಪಡುತ್ತೀರಿ. ದೇವರಿಗೆ ತಿಳಿಯದೆ? ಬಸವಣ್ಣನವರಿಗೆ ತಿಳಿಯದೆ? ಏಕೆ ಇವನ್ನು ತಪ್ಪಿಸಬಾರದು?" ಎಂದು ಕೇಳುತ್ತಾರೆ. ಇವೆಲ್ಲ ಕಷ್ಟಗಳಲ್ಲ ಕಿರಿಕಿರಿಗಳು ಅಷ್ಟೆ. ಅಸೂಯೆ, ಮತ್ಸರದ ಫಲಶ್ರುತಿಗಳು. ಸಮಾಜವು ಒಂದು ವ್ಯವಸ್ಥೆಗೆ ಬದ್ಧವಾಗಿರುತ್ತದೆ. ಆ ವ್ಯವಸ್ಥೆಯಲ್ಲಿನ ಹುಳುಕು, ಲೋಪ ದೋಷಗಳನ್ನು ಎತ್ತಿ ತೋರಿಸಲು, ನಿವಾರಿಸಲು ಯತ್ನಿಸಿದಾಗ ಕಷ್ಟ ಕೊಡುವುದು ಸ್ವಾಭಾವಿಕ. ಸಮಾಜ ಸುಧಾರಕರು ಅಂಥ ಪ್ರತಿಕ್ರಿಯೆ ನಿರೀಕ್ಷಿಸಿಯೇ ಸತ್ಯದ ದಾರಿಯಲ್ಲಿ ಹೆಜ್ಜೆ ಹಾಕುತ್ತಾರೆ. ವೈಯಕ್ತಿಕ ಜೀವನದಲ್ಲಿ ಸಂಕಷ್ಟ ಬಂದಾಗಲೂ ದೇವರು, ಧರ್ಮಗುರುವಿನಲ್ಲಿ ಶ್ರದ್ಧೆ ಕಳೆದುಕೊಳ್ಳದಿರುವವನೇ ನಿಜ ಶರಣ.

ಅದಕ್ಕೇ ಅಕ್ಕನವರು ಹೀಗೆ ಹೇಳುತ್ತಾರೆ:

ಹೆದರದಿರು ಮನವೆ, ಬೆದರದಿರು ತನುವೆ
ನಿಜವನರಿತು ನಿಶ್ಚಿಂತನಾಗಿರೆಲೆ ಮನವೇ!
ಫಲವಾದ ಮರನ ಕಲ್ಲಲಿ ಇಡುವುದೊಂದು ಕೋಟಿ;
ಎಲವದ ಮರನ ಇಡುವರೊಬ್ಬರ ಕಾಣೆ.
ಭಕ್ತಿಯುಳ್ಳವರ ಬೈವರೊಂದು ಕೋಟಿ
ಭಕ್ತಿಯಿಲ್ಲದವರ ಬೈವರೊಬ್ಬರ ಕಾಣೆ.
ನಿಮ್ಮ ಶರಣರ ನುಡಿಯೇ ಎನಗೆ ಗತಿ, ಮತಿ, ಸೋಪಾನ
ಚನ್ನಮಲ್ಲಿಕಾರ್ಜುನಾ ಮಹಾದೇವಿಯಕ್ಕ ಪ್ರಿಯ ಲಿಂಗದೇವ. ಅಕ್ಕನ ಅಮರವಾಣಿ - 209

☹ ಸಮಸ್ಯೆ..? - ಸಮಾಧಾನ..! ☺

ಹಡಪದ ಅಪ್ಪಣ್ಣ ಸಮಾಜದ ಸಾಧಕ, ಬಾಗಲಕೋಟೆ

? ಶರಣ. ಹಡಪದ ಅಪ್ಪಣ್ಣ ಜ್ಯೋತಿಯಾತ್ರೆಯ ಸಮಾರೋಪ ಕೂಡಲ ಸಂಗಮದಲ್ಲಿತ್ತು. ಅಂದು ನಮ್ಮ ಸಮಾಜದ ನೂರಾರು ಜನರಿಗೆ ಚಿತ್ರದುರ್ಗದ ಮುರುಘರಾಜೇಂದ್ರ ಸ್ವಾಮಿಗಳು ಇಷ್ಟಲಿಂಗ ಪ್ರದಾನ ಮಾಡಿದರು. ಅದನ್ನು ದೀಕ್ಷೆ ಎಂದು ನನಗೆ ಕರೆಯುವ ಮನಸ್ಸಿಲ್ಲ. ಏಕೆಂದರೆ ನೆಲದ ಮೇಲೆ ಒಂದು ಚಾಪೆ, ಜಮಖಾನಾ ಏನೂ ಹಾಸದೆ ಜನರನ್ನು ಕುಳ್ಳಿರಿಸಲಾಗಿತ್ತು. ಧೂಪ ದೀಪಾರತಿ ನೈವೇದ್ಯ ಏನೂ ಇಲ್ಲ. ವಿಭೂತಿಯಷ್ಟೇ ಹಚ್ಚಿದ್ದು ಹಸ್ತಮಸ್ತಕ ಸಂಯೋಗವೂ ಇಲ್ಲ. ಇದೆಂಥಾ ವಿಚಿತ್ರ ದೀಕ್ಷೆ ಇಷ್ಟಲಿಂಗ ಧರಿಸಲು ಕರಡಿಗೆ, ಬಟ್ಟೆ ಏನೂ ವ್ಯವಸ್ಥೆ ಮಾಡಿರದೆ ಚಾಕಲೆಟ್ ಕೊಟ್ಟಂತೆ ಇಷ್ಟಲಿಂಗ ಕೊಟ್ಟು, ಮಹಿಳೆಯರು ಸೀರೆಯ ಸೆರಗಿನಲ್ಲಿ ಕಟ್ಟಲು ಪುರುಷರು ಜೇಬಿನಲ್ಲಿ ಇಟ್ಟುಕೊಳ್ಳಲು ಸ್ವಾಮಿಗಳು ಸೂಚಿಸಿದರು. ಇಷ್ಟಲಿಂಗ ಪಡೆದುಕೊಂಡವರಲ್ಲಿ ಹತ್ತು ಪರ್ಸೆಂಟ್ ಜನ ಸಹ ಉಳಿಸಿಕೊಂಡು ಪೂಜಿಸುತ್ತಿಲ್ಲ. ಈ ವಿಧಾನವನ್ನು ನಾನು ಪ್ರತಿಭಟಿಸಿದೆ. ಸರಿಯೋ ತಪ್ಪೋ ?

★ ನೀವು ಪ್ರತಿಭಟಿಸಿದ್ದು ಸರಿ, ಏಕೆಂದರೆ ಸ್ವಾಮಿಗಳು ಏನೇನೋ ಎಡವಟ್ಟು ದಾರಿ ಹಾಕುತ್ತಿದ್ದಾರೆ. ದೀಕ್ಷೆ ನೀಡುವಾಗ, ಪೂಜೆ ಧ್ಯಾನ ಮಾಡುವಾಗ ಬರಿ ನೆಲದ ಮೇಲೆ ಕೂಡಿಸಬಾರದು, ಕೂಡ್ರಬಾರದು. ಇಷ್ಟಲಿಂಗ ದೀಕ್ಷೆಯ 3 ವಿಧಿಗಳು ವೇಧಾ, ಮಂತ್ರ, ಕ್ರಿಯಾದೀಕ್ಷೆ. ಇವು ಕ್ರಮವಾಗಿ ಕಾರಣ, ಸೂಕ್ಷ್ಮ ಮತ್ತು ಸ್ಥೂಲ ದೇಹಕ್ಕೆ ಸಂಬಂಧಿಸಿವೆ. ಹಸ್ತಮಸ್ತಕ ಸಂಯೋಗದ ಮೂಲಕ ವೇಧಾ ದೀಕ್ಷೆ, ಮಂತ್ರೋಪದೇಶದ ಮೂಲಕ ಮಂತ್ರ ದೀಕ್ಷೆ, ಇಷ್ಟಲಿಂಗವನ್ನು ದೃಷ್ಟಿಯ ಮೂಲಕ ಚಿತ್ಕಳೆ ತುಂಬಿ ಧರಿಸಬೇಕು.

ಬಸವ ಭಕ್ತಿಯಾಗಲಿ ಇಷ್ಟಲಿಂಗ ಪ್ರೀತಿ, ನಿಷ್ಠೆ ಅಂತರಂಗದಿಂದ ಹುಟ್ಟಿ ಹೊರಹೊಮ್ಮಬೇಕು. ಬಿಸಿಲಿನಲ್ಲಿ ಮಾಗಿ ಹಣ್ಣಾದ ಮಾವಿನ ಹಣ್ಣು, ಬಾಳೆ ಹಣ್ಣು ಬಲು ರುಚಿ; ಅದು ಒಳಗಿನಿಂದ ಪಕ್ವವಾಗುತ್ತ ಬರುತ್ತದೆ. ಬಣ್ಣ ಬರಲಿ ಎಂದು ಹೊರಗಿನಿಂದ ಪುಡಿ ಚಿಮುಕಿಸಿ ಹಣ್ಣು ಮಾಡಿದ್ದು ಬಣ್ಣ ಬಂದಿರುವುದೇ ವಿನಾ ರುಚಿ ಪಡೆದಿರುವುದಿಲ್ಲ. ಉಪಚಾರದ ಗುರುವಿಂಗೆ ಉಪಚಾರದ ಶಿಷ್ಯ, ಉಪದೇಶವೊಂದು ವ್ಯವಹಾರವಾದರೆ ಏನೂ ಸಾರ್ಥಕವಾಗದು. ಇಂಥ ಲಿಂಗಧಾರಣೆಯ ಬದಲು ಬಸವಾಯತ ದೀಕ್ಷೆ ಕೊಟ್ಟು ಬಸವ ಭಕ್ತರಾಗಿ ಜನರು ವಚನ ಸಾಹಿತ್ಯ ಅಧ್ಯಯನ ಮಾಡಲು ಹೇಳುವುದು ಸೂಕ್ತ.

ಒಂದು ಊರಿನಲ್ಲಿ ನನ್ನ ಕಿವಿಯ ಮೇಲೆ ಬಿದ್ದ ಸುದ್ದಿ ಹೀಗಿತ್ತು. ಇಂಥ ಕಾರ್ಯಕ್ರಮ, ದೀಕ್ಷೆ, ಬಸವಕೇಂದ್ರ ಮುಂತಾಗಿ ಮಾಡಲು ಹಣವನ್ನು ಕೊಡಲಾಗುವುದು. ಹಣದ ಆಸೆಗಾಗಿ ಕೆಲವು ಮುಖಂಡರು ಅಂಥ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾರೆ. ಇದು ಸತ್ಯವೇ ಇದ್ದರೆ ಖಂಡಿತಾ ಅರ್ಥರಹಿತ.

ಶಿವಕುಮಾರ ಹಿಂದು ಸಂಗೊಳಗಿ, ತಾ-ಜಿ . ಬೀದರ್

? ಕೆಲವರು ಬಸವ ತತ್ತ್ವದ ಪ್ರಕಾರ ಮದುವೆ ಮಾಡಿಕೊಂಡರೂ ಮದುವೆ ಆದ ಮೇಲೆ ಹನುಮಾನ್ ಮಂದಿರಕ್ಕೆ ಹೋಗಿ ಮನೆಗೆ ಬರುತ್ತಾರೆ. ಇದು ಸರಿಯೆ ?

★ ಕೆಲವು ಇಂಥ ಹಾಳೂರುಗಳು ಇರುತ್ತವೆ ಎಂದರೆ ಇಡೀ ಊರಲ್ಲಿ ಒಂದು ಶಿವಾಲಯ ಸಹ ಇರುವುದಿಲ್ಲ. ಲಿಂಗಾಯತ ಸಮಾಜ ಇರುವ ಪ್ರತಿ ಗ್ರಾಮ - ಊರಲ್ಲಿ ಬಸವ ಮಂಟಪ, ಬಸವೇಶ್ವರ ದೇವಾಲಯ ಆಗಿರಬೇಕಿತ್ತು. ಯಾರೋ ನಾಲ್ಕು ಜನ ಹಿಂದುಗಳು ಸೇರಿ ಹನುಮಂತನ ಗುಡಿಯನ್ನೋ, ಗಣಪತಿಯ ಗುಡಿಯನ್ನೋ ಕಟ್ಟಿರುತ್ತಾರೆ. ಇದ್ದ ಗುಡಿಗೇ ಲಿಂಗಾಯತರೂ ಹೋಗುತ್ತಾರೆ.

ಬಸವ ಮಂಟಪಗಳಾದರೆ ಮೇಲಿನ ಸಮಸ್ಯೆ ತಪ್ಪುತ್ತದೆ. ಒಂದೇ ಪರಿಹಾರ ಎಂದರೆ ಮನೆಯಲ್ಲಿಯೇ ಬಸವೇಶ್ವರ ಪೂಜಾವ್ರತ ಮಾಡಿ ಹೋಗಬೇಕು; ಮದುವೆ ಮಂಟಪದ ವೇದಿಕೆಯ ಮೇಲೆಯೂ ಮಾಡಬೇಕು. ಆಗ ಎಲ್ಲಿಗೂ ಹೋಗುವುದು ಅಗತ್ಯಬೀಳದು.

□ ಮಂಜುನಾಥ ಅಂಗಡಿ, ಬೆಳಗಾವಿ

? ದಿ-3-8-2006ರ ಹಸಿರು ಕ್ರಾಂತಿ ಪತ್ರಿಕೆಯಲ್ಲಿ ಹೀಗೆ ವರದಿಯಾಗಿದೆ. "ಬೆಳಗಾವಿಯ ಸಮೀಪದ ಬಸವನ ಕುಡಚಿ ಗ್ರಾಮದಲ್ಲಿ ಗಣಪತಿ ದೇವಸ್ಥಾನದ ಕಳಸಾರೋಹಣಕ್ಕೆ ನಾಗನೂರು ರುದ್ರಾಕ್ಷಿ ಮಠದ ಪೂಜ್ಯ ಸಿದ್ಧರಾಮ ಸ್ವಾಮಿಗಳು ಚಾಲನೆ ನೀಡಿದರು." ಎಂದು. ಒಂದು ಫೋಟೋ ಸಹ ಮುದ್ರಣಗೊಂಡಿದೆ. ಅದರಲ್ಲಿ ಸ್ವಾಮಿಗಳು ಹೋಮ ಕುಂಡದಲ್ಲಿ ಏನನ್ನೋ ಹಾಕುವಂತೆ ತೋರುತ್ತದೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?

★ ಸರಿಯಾಗಿ ಗಮನಿಸಿರಿ. ಕೆಲವೊಮ್ಮೆ ಪತ್ರಿಕಾ ವರದಿಗಳು ಸರಿಯಾಗಿ ಬಂದಿರುವುದಿಲ್ಲ. ವಿರಕ್ತ ಸ್ವಾಮಿಗಳ ಪೈಕಿ ಈಗೀಗ ಕೆಲವರು ತತ್ವನಿಷ್ಠರಾಗಿ ಲಿಂಗಾಯತ ಮಾರ್ಗಕ್ಕೆ ಬರುತ್ತಿದ್ದಾರೆ (?) ಎನ್ನಿಸಿ ಸಂತೋಷವೆನಿಸಿತ್ತು. ಅಂಥವರಲ್ಲಿ ಪೂಜ್ಯ ನಾಗನೂರು ಸಿದ್ಧರಾಮ ಸ್ವಾಮಿಗಳೂ ಒಬ್ಬರು. "ಅವರು ಈಗೀಗ ಲಿಂಗಾಯತ ಪದವನ್ನು ಗಟ್ಟಿಯಾಗಿ ಹೇಳುತ್ತಿದ್ದಾರೆ. ಲಿಂಗಾಯತ ಪತ್ರಿಕೆ ಬೇರೆ ಶುರು ಮಾಡಿದ್ದಾರೆ." ಎಂದು ಹಿಗ್ಗಾಗಿತ್ತು. "ಆಚಾರ ಹೇಳೋಕೆ ಬದನೆಕಾಯಿ ತಿನ್ನೋಕೆ" ಎಂಬಂತೆ ಪತ್ರಿಕೆಯಲ್ಲಿ ಲಿಂಗಾಯತ ಧರ್ಮ ಬೋಧಿಸಿ, ತಾವು ಅದಕ್ಕೆ ಹೊರತಾದ ಆಚರಣೆ ಮಾಡಿದರೆ ಎಂಥಾ ವಿಪರ್ಯಾಸ! ಲಿಂಗಾಯತ ಮಠಾಧೀಶರು, ಯಾರಿಗೆ ಹೆದರಿಕೊಂಡು, ಬಹುಶಃ ರಾಜಕೀಯ ಮುಂದಾಳುಗಳ ಆಜ್ಞಾಧಾರಕರಾಗಿ ಇರಬಹುದು, ಇಂಥ ತಮ್ಮ ಧರ್ಮ ವಿರೋಧಿ ಆಚರಣೆ ಮಾಡುತ್ತಾರೋ ತಿಳಿಯದು. ಗುರುಗಳಾಗಿ ತಮ್ಮ ಬಳಿಗೆ ಬರುವ ಶ್ರೀಮಂತ ಭಕ್ತರು, ರಾಜಕೀಯ ಮುಂದಾಳುಗಳನ್ನು ಧರ್ಮನಿಷ್ಠರನ್ನಾಗಿ ಮಾಡುವ ಬದಲು ತಾವೇ ಅವರ ಒತ್ತಡಕ್ಕೆ ಒಳಗಾಗಿ ಏನೇನೋ ಆಚರಿಸುವುದು ನಿಜಕ್ಕೂ ವಿಷಾದನೀಯ.

□ ಬಿ.ಎಸ್.ಸೋಲಾಪುರೆ, "ಬಾಲಕ," ಕಮಲ ನಗರ, ಬೀದರ ಜಿಲ್ಲೆ

? ಮೇ - ಜೂನ್ ಸಂಚಿಕೆಯ "ಲಿಂಗನಿಷ್ಠೆ"ಲೇಖನದಲ್ಲಿ ಲಿಂಗಾಯತರನ್ನು ಸರಿದಾರಿಗೆ ಹಚ್ಚುವುದು, ಸಂಘಟನೆ ಮಾಡುವುದು ಹೇಗೆ ಸಾಧ್ಯ ಎಂದು ಕಸ್ತೂರಿ ಮಾತಾಜಿಯವರು ವಿಷಾದಿಸಿದ್ದಾರೆ. ಪೂಜ್ಯ ಮಾತಾಜಿಯವರು 'ಲಿಂಗದೇವ' ವಚನಾಂಕಿತವನ್ನು ವಾಪಸ್ಸು ತೆಗೆದುಕೊಂಡು, ಪಂಚಪೀಠಗಳಂತೆ ಬಸವ ಧರ್ಮ ಪೀಠವನ್ನು ಮಾಡಿರುವುದು ಕೈ ಬಿಟ್ಟರೆ ಲಿಂಗಾಯತ ಸಮಾಜ ಸಂಘಟನೆಯಾಗಲು ಸಾಧ್ಯ. ಎಂದು ನನ್ನ ಅಭಿಪ್ರಾಯ.

★ ಎಲೈ 'ಬಾಲಕ' ರೇ, ಲಿಂಗಾಯತ ಸಮಾಜದ ಸಂಘಟನೆಗೆ, ಸರಿದಾರಿಗೆ ಹಚ್ಚಲಿಕ್ಕಾಗಿಯೇ ಈ ಎರಡೂ ಕಾರ್ಯ ಮಾಡಿರುವುದು. ನಿಮ್ಮ ಗುರು ಯಾರು ಎಂದರೆ ದೀಕ್ಷಾ ಗುರು, ಕುಲಗುರು, ಜಾತಿ ಗುರು, ಬಿನ್ನಹ ತೀರಿಸುವ ಗುರುವಿನ ಹೆಸರನ್ನು ಹೇಳದೆ ಧರ್ಮಗುರುವಿನ ಹೆಸರನ್ನು ಹೇಳಬೇಕು. ನಿಮ್ಮ ದೇವರು ಯಾರು ಎಂದರೆ ಮನೆ ದೇವರು, ಕುಲದೇವರು, ಸ್ಥಾವರಗಳ ಹೆಸರು ಹೇಳದೆ ಲಿಂಗದೇವರು ಎಂದು ಹೇಳಬೇಕು. ಬಸವ ತತ್ತ್ವ ವಿರೋಧಿಗಳಾದ ಪಂಚಪೀಠಗಳಂತೆ ಬಸವ ಧರ್ಮ ಪೀಠವು ಬಂದು ಭಾವಿಸಿರುವ ನೀವು ಅಪ್ಪಟ 'ಬಾಲಕ' ರೇ ಸರಿ. ಎಲ್ಲ ಮಠ ಪೀಠಗಳು ತಮ್ಮ ತಮ್ಮ ಗದ್ದುಗೆಗಳ ಕರ್ತೃಗಳನ್ನು ಮೆರೆಸುತ್ತ ಧರ್ಮ ಗುರು ಬಸವಣ್ಣನವರನ್ನು ಲಿಂಗಾಯತರ ಮನೆ-ಮನಗಳಿಂದ ದೂರ ಮಾಡಿದ್ದಾಗ ಬಸವ ಗುರು, ಬಸವ ತತ್ತ್ವ ಪ್ರಚಾರಕ್ಕಾಗಿಯೇ ಹುಟ್ಟಿ, ಅದಕ್ಕೇ ಮೀಸಲಾಗಿರುವ ಧರ್ಮ ಪೀಠವನ್ನು ಅರ್ಥ ಮಾಡಿಕೊಳ್ಳಲು ನಿಮಗಾಗಿಲ್ಲವಲ್ಲ! ಒಳ ಜಾತಿಗಳ ಸಂಘಟನೆ ಮಾಡಿ ಮನಸ್ಸುಗಳನ್ನು ಬೇರೆ ಬೇರೆ ಮಠ, ಪೀಠಗಳು ಒಡೆಯುತ್ತಲಿರುವಾಗ ಬಸವ ತತ್ತ್ವದ ಆಧಾರದ ಮೇಲೆ ಲಿಂಗಾಯತರು ಮತ್ತು ಲಿಂಗಾಯತೇತರನ್ನು ಒಂದುಗೂಡಿಸಲಿಕ್ಕಾಗಿಯೇ ಬಸವ ಧರ್ಮ ಪೀಠ ಇರುವುದು. ಜಂಗಮತ್ವ ಜಾತಿಯಿಂದ ಬರುತ್ತದೆ ಎಂದು ಜಂಗಮೇತರರಿಗೆ ಗುರು-ಜಂಗಮತ್ವ ಮಠ ಪೀಠಾಧಿಕಾರಗಳ ಹಕ್ಕುಗಳನ್ನು ಗುರು-ವಿರಕ್ತ ಮಠ-ಪೀಠಗಳು ನಿರಾಕರಿಸಿದ್ದಾಗ, ಎಲ್ಲರ ಹಕ್ಕು ಎತ್ತಿ ಹಿಡಿಯಲೆಂದೇ ಬಸವ ಧರ್ಮ ಪೀಠ ಹುಟ್ಟಿರುವುದು. ಇದನ್ನು ಅರಿಯುವ ಬೌದ್ಧಿಕ ಪ್ರೌಢಿಮೆ ನಿಮಗೆ ಬರಲೆಂದು ನಮ್ಮ ಹಾರೈಕೆ.

□ ಶರಣ.ಧನರಾಜ, ಕಾರ್ಪೆಂಟರ್, ಜಿಯಾಗುಡ, ಹೈದರಾಬಾದ್

? ಗುರು ಬಸವಣ್ಣನವರ ನಾಣ್ಯವನ್ನು ಕೇಂದ್ರ ಸರ್ಕಾರವು ಬಿಡುಗಡೆ ಮಾಡಿದ್ದು ನಮಗೆಲ್ಲ ಅಪಾರ ಸಂತೋಷ ತಂದಿದೆ. ನಿರಾಶೆ ಉಂಟು ಮಾಡಿದ ಸಂಗತಿ ಏನೆಂದರೆ ಅದರಲ್ಲಿ ಜನನ ಮತ್ತು ಲಿಂಗೈಕ್ಯದ ಇಸವಿ ನಮೂದಿಸದೆ ಇರುವುದು. ಸಾಮಾನ್ಯವಾಗಿ ಇಂಥ ಸ್ಮಾರಕ ನಾಣ್ಯಗಳಲ್ಲಿ ಇಸವಿಗಳು ಇರುತ್ತವೆ. ಏಕೆ ಹೀಗೆ?

★ ಬಸವ ಸಮಿತಿಯವರಲ್ಲಿ ಯಾವ ವಿಷಯದಲ್ಲೂ ನಿರ್ದಿಷ್ಟ ನಿಲುವಿಲ್ಲ, ದೃಢ ನಂಬಿಕೆ ಇಲ್ಲ. ಗುರು ಬಸವಣ್ಣನವರೇ ಲಿಂಗಾಯತ ಧರ್ಮ ಸಂಸ್ಥಾಪಕರು ಎಂದು ಗಟ್ಟಿಯಾಗಿ ಹೇಳುವ ಧೈರ್ಯವಿಲ್ಲ. ಒಂದು ಡಿಸೈನ್ ಮಾಡಿಸಿಕೊಂಡು ಬಂದು ಶ್ರೀ ಅರವಿಂದ ಜತ್ತಿಯವರು ತೋರಿಸಿದಾಗಲೇ ನಾನು ಹೇಳಿದೆ, "ಏನಿದು, ಇಸವಿಯನ್ನೇ ಹಾಕಿಲ್ಲವಲ್ಲ!" ಎಂದು. "ಒಮ್ಮತ ಮತ್ತು ನಿರ್ದಿಷ್ಟ ಅಭಿಪ್ರಾಯವಿಲ್ಲ; ಕೆಲವರು 1106ರಿಂದ 1168 ಎನ್ನುವರು" ಎಂದರು. ಆಗ ನಾನು ಹೇಳಿದೆ, "ಬಸವಣ್ಣನವರ ಜೀವನದ ಕಾಲ ನಿರ್ಣಯ ಎಂಬ ಪುಸ್ತಕವನ್ನು ನಾನು ಬರೆದಿದ್ದೇನೆ. ಕಲ್ಯಾಣ ಕ್ರಾಂತಿಯಾದುದು ರಾಕ್ಷಸ ನಾಮ ಸಂವತ್ಸರ ಎಂದು ಕಾಲಜ್ಞಾನ ವಚನದಲ್ಲಿ ಹಲವಾರು ಬಾರಿ ಬಂದಿದೆ. ಈ ಬಗ್ಗೆ ಎಲ್ಲರೂ ಒಪ್ಪಿದ್ದಾರೆ. ಆ ವರ್ಷವು 1195 - 1196 ; ಭಾರತೀಯ ಸಂವತ್ಸರಗಳನ್ನು ಇಂಗ್ಲೀಷ್ ವರ್ಷಗಳಿಗೆ ಲೆಕ್ಕಚಾರ ಮಾಡಿ ಬರೆದ ಅಧಿಕೃತ ಪುಸ್ತಕದಲ್ಲಿದೆ." ಎಂದೆ. "ಅಹುದು ನಿಮ್ಮ ಪುಸ್ತಕ ನೋಡಿದ್ದೇವೆ. ಬಸವ ಸಮಿತಿಯಲ್ಲಿ ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ಡಾ||ಎಂ.ಎಂ.ಕಲಬುರ್ಗಿಯವರು ಸಹ ಗುರು ಬಸವಣ್ಣನವರ ಲಿಂಗೈಕ್ಯ ವರ್ಷ 1196 ಎಂಬ ಅಭಿಪ್ರಾಯ ನೀಡಿದರು." ಎಂದರು. ಇಷ್ಟೆಲ್ಲ ಆಗಿಯೂ ಸಹ ಮತ್ತೂ ಒಂದು ನಿರ್ದಿಷ್ಟ ನಿಲುವನ್ನು ಬಸವ ಸಮಿತಿ ತಳೆಯುವುದಿಲ್ಲ.

□ ಭಾರತಿ ಶಿವಶರಣಪ್ಪ ಮುದ್ದೂರು, ಬೆಂಗಳೂರು

? "ಜುಲೈ 2006 ರ ಬಸವ ಪಥದಲ್ಲಿ ಪುಟ.72ರಲ್ಲಿ ಅಂಗ - ಲಿಂಗ - ಸಂಗ ಸುಖಸಾರಾಯದನುಭವ ಲಿಂಗವಂತನಿಗಲ್ಲದೆ ಸಾಧ್ಯವಾಗದು." ಎಂಬ ಗುರು ಬಸವಣ್ಣನವರ ವಚನ (1174 ಕ.ವಿ.ವಿ. ಪ್ರಕಟಣೆ)ಕ್ಕೆ ವ್ಯಾಖ್ಯಾನ ಮಾಡುತ್ತ ಬಿ.ಮಹಾದೇವಪ್ಪ ಅವರು ಅದರಲ್ಲಿ ಬರುವ ವಾಕ್ಯ, "ವೀರಶೈವ ಸಂಪನ್ನನೆನಿಸಿ ಲಿಂಗವಂತನಾದ ಬಳಿಕ" ಎಂಬುದನ್ನು ಉಲ್ಲೇಖಿಸಿ ವೀರಶೈವ ಮತ್ತು ಲಿಂಗಾಯತ ಎರಡೂ ಒಂದೇ, ಬೇರೆ ಬೇರೆ ಎನ್ನುವವರಿಗೆ ಈ ವಚನದಲ್ಲಿ ಉತ್ತರವಿದೆ. ಎಂದು ಬರೆದಿದ್ದಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?

★ ಗುರು ಬಸವಣ್ಣನವರ ಲಭ್ಯವಿರುವ ವಚನಗಳಲ್ಲಿ ಕೇವಲ ಇದೊಂದೇ ವಚನದಲ್ಲಿ ವೀರಶೈವ ಪದ ಉಲ್ಲೇಖವಾಗಿರುವುದು. ಗುರು ಬಸವಣ್ಣನವರು ಹೊಸ ಧರ್ಮವನ್ನು ಕೊಟ್ಟಾಗ ಬಣಜಿಗ, ಕಂಚುಗಾರ, ಹಾರುವರು, ವೀರಶೈವರು ಎಲ್ಲರೂ ಲಿಂಗಾಯತದಲ್ಲಿ ಪ್ರವೇಶಿಸಿದರು. ಆದರೆ ತಮ್ಮ ಪೂರ್ವದ ಆಚಾರಗಳನ್ನು ಹಾಗೆಯೇ ಉಳಿಸಿಕೊಂಡು ಹೊಸಧರ್ಮದ ಶುಚಿಯನ್ನು ಕೆಡಿಸತೊಡಗಿದರು. ಆಗ ಧರ್ಮಪಿತರು ಹೇಳುತ್ತಾರೆ. ವೀರಶೈವ ಸಂಪನ್ನರು ಎನ್ನಿಸಿಕೊಂಡು (ಶ್ರೇಷ್ಠರು ಎಂದು ಬೀಗುವವರು) ಲಿಂಗಾಯತದಲ್ಲಿ ಸೇರ್ಪಡೆಯಾದ ಮೇಲೆ ಏಕಲಿಂಗ ನಿಷ್ಠಾಪರರಾಗಬೇಕು. ಅದು ಬಿಟ್ಟು ಮೊದಲಿನಂತೆ ಭವಿ - ಶೈವ - ದೈವ - ಕ್ಷೇತ್ರ - ತೀರ್ಥ ಇವನ್ನು ಆಚರಿಸಬಾರದು, ಹಲವು ಲಿಂಗಾರ್ಚನೆ ಮಾಡಬಾರದು; ತನ್ನ ಅಂಗದ ಮೇಲಿರುವ ಲಿಂಗಕ್ಕೆ ನಿಷ್ಠನಾಗಿರಬೇಕು ಎಂದು ಹೇಳಿದ್ದಾರೆ. ಈ ವಚನವು ಬಸವ ಪೂರ್ವದ ವೀರಶೈವ ಪಂಥದವರು ಬಸವ ಸ್ಥಾಪಿತ ಲಿಂಗಾಯತ ಧರ್ಮದಲ್ಲಿ ಸೇರ್ಪಡೆಯಾದರು ಎಂಬುದಕ್ಕೆ ಜ್ವಲಂತ ಸಾಕ್ಷಿ ಮತ್ತು ಅವರು ಸ್ಥಾವರ ಅರ್ಚನೆಯನ್ನು ನಂತರವೂ ಮುಂದುವರಿಸಿದ್ದಕ್ಕೆ ಆಕ್ಷೇಪವಿದೆ.



ಅಲ್ಲಮ ಪ್ರಭು - ಮುಕ್ತಾಯಕ ಸಂವಾದ ರೂಪಕ



ಗುರು ಬಸವಣ್ಣನವರಿಗೆ ಗೌರವಾರ್ಪಣೆ. ಸಾಂಸ್ಕೃತಿಕ ಕಾರ್ಯಕ್ರಮ

ಬಸವ ಧರ್ಮದ ವೀರ ಸೇನಾನಿ ಸ್ವಾಮಿ ಲಿಂಗಾನಂದರು

ಲೇಖಕರು : ಕೆ.ಎಸ್.ಕೋರಿಶೆಟ್ಟರ್

[27-8-2006ರಂದು ಒದಗಿ ಬಂದರುವ ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರ 75ನೆಯ ಜಯಂತಿ ಉತ್ಸವದ ನಿಮಿತ್ತ]

ಜಾತಿಗಳು ದೇವ ನಿರ್ಮಿತವಲ್ಲ; ಮಾನವ ಕಲ್ಪಿತ, ಪರಮಾತ್ಮನ ದೃಷ್ಟಿಯಲ್ಲಿ ಸರ್ವರೂ ಸಮಾನರು. ಹುಟ್ಟಿದ ಜಾತಿ, ಪಡೆದ ಅಂತಸ್ತು, ಮಾಡುವ ಕಾಯಕಗಳ ಮೇಲೆ ಮೇಲು ಕೀಳೆಂದು ಮನುಷ್ಯ ಕುಲವನ್ನು ವಿಂಗಡಿಸಬಾರದು. ಎಂಬ ವಿಶ್ವ ಮಾನವ ಸಂದೇಶವನ್ನು ಯಶಸ್ವಿಯಾಗಿ ಪ್ರಚಾರ ಮಾಡಿದವರು ಪೂಜ್ಯ ಶ್ರೀ ಮಹಾ ಜಗದ್ಗುರು ಲಿಂಗಾನಂದ ಸ್ವಾಮಿಗಳು. ಗೌರವರ್ಣದ ತೇಜೋಮಯ ಮುಖ, ಕ್ರೀಡಾ ಪಟುವಿನ ಮೈಕಟ್ಟು, ಶುಭ್ರ ಕಾಷಾಯ ವಸ್ತ್ರದಿಂದ ಶೋಭಿಸುತ್ತಿದ್ದ ಶ್ರೀಗಳು ತಮ್ಮ ಕಂಚಿನ ಕಂಠದಿಂದ ಹೊರ ಹೊಮ್ಮುವ ಕನ್ನಡ ಸಾಹಿತ್ಯದ ವಾಗ್ಝರಿಯ ಮೂಲಕ ನಾಡಿನಲ್ಲಿ ವೈಚಾರಿಕ, ಅಧ್ಯಾತ್ಮಿಕ ಕ್ರಾಂತಿಯನ್ನು ಮೊಳಗಿಸಿದವರು.

ವಿಶ್ವಗುರು ಬಸವಣ್ಣನವರು ಜನ್ಮಿಸಿದ ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೋಕಿನ ಮನಗೂಳಿಯ ಶರಣ ಮಲ್ಲಪ್ಪ ಕಪ್ಪರದ ಮತ್ತು ಕಲ್ಲಮ್ಮ ದಂಪತಿಗಳ ಮಗನಾಗಿ 1931ರ ಸೆಪ್ಟಂಬರ್ 14 ರಂದು ಜನ್ಮಿಸಿದ ಬಾಲಕ ಸಂಗಮೇಶ ತನ್ನ ಭಕ್ತಿ - ಜ್ಞಾನ - ವೈರಾಗ್ಯಗಳಿಂದ ಸ್ವಾಮಿ ಲಿಂಗಾನಂದರಾಗಿ, ಸದ್ಗುರುವಾಗಿ, ಮಹಾಜಗದ್ಗುರುವಾಗಿ, ಬಸವ ಧರ್ಮದ ವೀರ ಸೇನಾನಿಯಾಗಿ ರೂಪುಗೊಂಡದ್ದು ನಾಡಿನ ಪುಣ್ಯ ವಿಶೇಷ.

ಮನಗೂಳಿ ಹಾಗೂ ಹಂಚಿನಾಳದಲ್ಲಿ ಪ್ರಾಥಮಿಕ ಶಿಕ್ಷಣ, ಬಿಜಾಪುರ, ಬಾಗಲಕೋಟೆಗಳಲ್ಲಿ ಪ್ರೌಢ ಶಿಕ್ಷಣ, ಬೆಳಗಾವಿಯ ಲಿಂಗರಾಜ್ ಕಾಲೇಜಿನಲ್ಲಿ ಬಿ.ಎ (ಆನರ್ಸ್) ಪದವಿ ಶಿಕ್ಷಣ ಪೂರೈಸಿದ ಶ್ರೀಗಳು ವಿದ್ಯಾರ್ಥಿ ಜೀವನದಲ್ಲಿ ಕಾರ್ಲ್ ಮಾರ್ಕ್ಸ್‌ನ ವಿಚಾರ ಧಾರೆಗಳಿಂದ ಪ್ರಭಾವಿತರಾಗಿ ಅಪ್ಪಟ ನಾಸ್ತಿಕವಾದಿಗಳಾಗಿದ್ದರು. ಪದವಿ ವ್ಯಾಸಂಗದ ಸಂದರ್ಭದಲ್ಲಿ ಪ್ರೊ.ರಾಜ್‌ಗೋಪಾಲ್ ಅವರಿಂದ ಪ್ರೇರಣೆಗೊಂಡು ಧರ್ಮಗ್ರಂಥಗಳು ಹಾಗೂ ವಚನ ಸಾಹಿತ್ಯದ ಸತತ ಅಭ್ಯಾಸಿಗಳಾದರು. ಆ ವರೆಗೆ ಮಾರ್ಕ್ಸ್ ವಾದಿಯಾಗಿದ್ದ ಸಂಗಮೇಶ ಗುರು ಬಸವಣ್ಣನವರ ವಿಚಾರ ಧಾರೆಗಳನ್ನರಿತು ಬಸವ ತತ್ತ್ವಕ್ಕೆ ಪರಿವರ್ತನೆಗೊಂಡರು.

ಗದುಗಿನ ಶಿವಾನಂದ ಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳಿಂದ ಲಿಂಗ ದೀಕ್ಷೆ ಪಡೆದರು. ಸಂಗಮೇಶರು, 19-11-1956ರಂದು ಗುರು ಬಸವಣ್ಣನವರ ಅನುಗ್ರಹದಿಂದ ಬಸವ ಧರ್ಮ ಪ್ರಚಾರಕ್ಕಾಗಿ ಜ್ಞಾನ ಸನ್ಯಾಸ ಸ್ವೀಕರಿಸುವ ದೃಢ ಸಂಕಲ್ಪ ಕೈಗೊಂಡರು ಸ್ವಾಮಿ ಲಿಂಗಾನಂದರೆಂದು ಅಭಿದಾನ ತಾಳಿದರು. 4 ವರ್ಷಗಳ ವರೆಗೆ ಮಾಣಿಕ್ಯಗಿರಿ, ಸೊಗಲ ಸೋಮೇಶ್ವರದ ನಿಸರ್ಗ ಮಂದಿರಗಳಲ್ಲಿ ಯೋಗಾಭ್ಯಾಸವನ್ನು ಮಾಡಿ, 7-8-1961ರಂದು ಮೈಸೂರಿನ ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳಿಂದ ಜಂಗಮ ದೀಕ್ಷೆ ಸ್ವೀಕರಿಸಿದ ಸಂಗಮೇಶರು

ಬಸವ ಧರ್ಮ ಪ್ರಚಾರವನ್ನೇ ದೈನಂದಿನ ಕಾಯಕವನ್ನಾಗಿ ಮಾಡಿಕೊಂಡ ಪೂಜ್ಯ ಸ್ವಾಮಿ ಲಿಂಗಾನಂದರ ಕೀರ್ತಿ ನಾಡಿನಾದ್ಯಾಂತ ಮಾತ್ರವಲ್ಲ ನೆರೆಯ ರಾಜ್ಯಗಳಲ್ಲೂ ಪರಿಮಳದಂತೆ ಪಸರಿಸಿತು. ಅವರ ಪ್ರವಚನವೆಂದರೆ ಅದು ಶ್ರೋತೃ ಗಳಿಗೆ ಜ್ಞಾನದಾಸೋಹದ ಸಂಭ್ರಮವಾಗಿತ್ತು. ಬುದ್ಧನ - ಅಹಿಂಸಾವಾದ, ಯೇಸು ಕ್ರಿಸ್ತನ - ಮಾನವೀಯತೆ, ಪ್ರವಾದಿ ಮಹಮ್ಮದ್ ಪೈಗಂಬರ್‌ರ - ಏಕದೇವ ನಿಷ್ಠೆ, ಮಹಾತ್ಮ ಗಾಂಧೀಜಿಯವರ - ಅಸ್ಪೃಶ್ಯೋದ್ಧಾರದ ಕಳಕಳಿ, ಛತ್ರಪತಿ ಶಿವಾಜಿಯ - ರಾಷ್ಟ್ರ ಪ್ರೇಮ, ರಾಮಕೃಷ್ಣ ಪರಮಹಂಸ ಶಾರದಾ ಮಾತೆಯವರ - ಅಧ್ಯಾತ್ಮ ಪ್ರವೃತ್ತಿ, ಸ್ವಾಮಿ ವಿವೇಕಾನಂದರ - ಧರ್ಮ ಪ್ರಚಾರದ ಶ್ರದ್ಧೆ, ದಯಾನಂದ ಸರಸ್ವತಿಯವರ - ವಿಚಾರವಾದ, ಡಾ||ಬಿ.ಆರ್.ಅಂಬೇಡ್ಕರ್ ಅವರ - ಸಮತಾವಾದ, ಅರವಿಂದರು ಹಾಗೂ ಮಾತೆಯವರು, ಸ್ವಾಮಿ ರಾಮತೀರ್ಥರು, ಲಿಯೋ ಟಾಲ್‌ಸ್ಟಾಯ್ ಇವರೆಲ್ಲರ ವಿಚಾರಗಳು ಶ್ರೀಗಳಿಗೆ ಆದರ್ಶವಾಗಿದ್ದವು. ಈ ಎಲ್ಲಾ ವಿಚಾರ ಧಾರೆಗಳ ಸಂಗಮವಾಗಿರುವ ಗುರು ಬಸವಣ್ಣನವರು ಇವರಿಗೆ ಪರಮ ಆದರ್ಶವಾಗಿದ್ದರು. ತಮ್ಮ ಕಂಚಿನ ಕಂಠದ

ಪ್ರವಚನದ ಮೂಲಕ ಭಾರತೀಯ ಸಂಸ್ಕೃತಿಯ ಪುನರುತ್ಥಾನದ ಜೊತೆಗೆ ಸರ್ವ ಧರ್ಮ ಸಾಮರಸ್ಯಕ್ಕೆ ಪ್ರಯತ್ನಿಸುತ್ತಿದ್ದರು.

ಜಾತಿವಾದಿಗಳ, ಸಂಪ್ರದಾಯವಾದಿಗಳ ವಿರೋಧದ ಮಧ್ಯೆಯೂ ಎದೆಗುಂದದೆ ಗುರು ಬಸವಣ್ಣನವರ ಕ್ರಾಂತಿಕಾರಿ ವಿಚಾರಗಳನ್ನು ಧೈರ್ಯದಿಂದ ಏಕಾಂಗಿಯಾಗಿ ಪ್ರಚಾರ ಮಾಡಿದ ಶ್ರೀಗಳು "ಬಸವ ಧರ್ಮದ ವೀರಸೇನಾನಿ"ಯಾಗಿ ಕಂಗೊಳಿಸಿದರು. ಸ್ತ್ರೀಯರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು 12 ನೇ ಶತಮಾನದಲ್ಲಿಯೇ ಅನುಭವ ಮಂಟಪದ ಮೂಲಕ ಬಸವಾದಿ ಶರಣರು ನೀಡಿದ್ದರೂ ಸಹ ಇಂದಿಗೂ ಸ್ತ್ರೀಯರಿಗೆ ಧಾರ್ಮಿಕ ಗುರು ಪೀಠವೊಂದು ಇಲ್ಲದ್ದನ್ನು ಮನಗಂಡು 1970ರಲ್ಲಿ ಧಾರವಾಡದಲ್ಲಿ "ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ"ವನ್ನು ಸಂಸ್ಥಾಪಿಸಿ ತಮ್ಮ ಶಿಷ್ಯೆಯಾದ ಚಲಿಸುವ ವಿಶ್ವವಿದ್ಯಾಲಯದಂತಿರುವ ಭಕ್ತಿ - ಜ್ಞಾನ - ವೈರಾಗ್ಯಗಳ ತ್ರಿವೇಣಿ ಸಂಗಮವಾಗಿರುವ ಮಾತೆ ಮಹಾದೇವಿಯವರನ್ನು ಪೀಠಾರೋಹಣ ಮಾಡಿ, ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಎಂಬ ಅಭಿಧಾನ ನೀಡಿದರು. ಆ ಮೂಲಕ ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರು ಪೀಠದ ಸ್ಥಾಪನೆಗೆ ಕಾರಣ ಕರ್ತರಾದರು.

ಗುರು ಬಸವಣ್ಣನವರು ತಿರಸ್ಕರಿಸಿದ್ದ ಕಂದಾಚಾರ, ಮೂಢ ನಂಬಿಕೆ, ಶುಷ್ಕ ಆಚರಣೆಗಳನ್ನು ನಮ್ಮ ಕೆಲವು ಸ್ವಾಮಿಗಳು ಮತ್ತೆ ಅಳವಡಿಸಿಕೊಂಡಿದ್ದಾರೆ, ಮಾತ್ರವಲ್ಲ ; ಅರ್ಹತೆಯಿಂದ ಪಡೆಯಬೇಕಾದ ಸ್ವಾಮಿತ್ವ, ಗುರುತ್ವ, ಜಂಗಮತ್ವ, ಜಗದ್ಗುರು ಪದವಿಗಳನ್ನು ನಿರ್ದಿಷ್ಟ ವಂಶಗಳಿಗೆ ಸೀಮಿತಗೊಳಿಸಿದ್ದಾರೆ ಎಂದು ನಿರ್ದಾಕ್ಷಿಣ್ಯವಾಗಿ ಹೇಳುತ್ತಿದ್ದ ಶ್ರೀಗಳು ಇಷ್ಟಲಿಂಗವು ಜಾತಿಯ ದ್ಯೋತಕವಲ್ಲ, ಅದು ಜಾತಿ-ವರ್ಣ-ವರ್ಗರಹಿತ ಸಮಾನತೆಯ ತಳಹದಿಯ ಆದರ್ಶ ರಾಜ್ಯ ಸ್ಥಾಪನೆಗೆ ಬಸವಣ್ಣನವರು ಕೊಟ್ಟ ಲಾಂಛನ ಎಂದು ವಿವರಿಸುತ್ತಿದ್ದರು.

ಅಕ್ಕನ ಪ್ರವಚನ, ದೇವ ಪೂಜಾ ವಿಧಾನ, ವಚನಾಮೃತ, ದೇವರು, ಲಿಂಗ ತತ್ತ್ವ ದರ್ಪಣ ಮುಂತಾದ ಅಧ್ಯಾತ್ಮಿಕ ಗ್ರಂಥಗಳನ್ನು ರಚಿಸಿದ ಶ್ರೀಗಳು ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಮೂಲಕ ಅನೇಕ ಗ್ರಂಥಗಳು, ಧ್ವನಿ ಸುರುಳಿಗಳ ಮೂಲಕ ಬಸವ ತತ್ತ್ವವನ್ನು ಪಸರಿಸಿದರು.

ಕೂಡಲ ಸಂಗಮ ಕ್ಷೇತ್ರದಲ್ಲಿ 13-1-1992ರಂದು ಬಸವ ಧರ್ಮಪೀಠದ ಪೀಠಾಧೀಶರಾಗಿ ಆರೋಹಣಗೈದು, ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಎಂಬ ಅಭಿಧಾನ ತಾಳಿದರು.

ನೆಪೋಲಿಯನ್ ಬೋನೋ ಪಾರ್ಟ್‌ನ ಬಗ್ಗೆ ಒಂದು ವರ್ಣನೆ ಇದೆ. ಅದು (He came, He saw, He conquerred) ಅವನು ಬಂದ, ಅವನು ನೋಡಿದ, ಅವನು ಗೆದ್ದ. ಹಾಗೆಯೇ ಲಿಂಗಾನಂದ ಸ್ವಾಮಿಗಳು ತಾವು ಅಡಿಯಿಟ್ಟಲ್ಲೆಲ್ಲಾ ಭಕ್ತರ ಹೃದಯ ಗೆದ್ದು, ಬಸವ ಧರ್ಮದ ಸಾಮ್ರಾಜ್ಯವನ್ನು ರೂಪಿಸುತ್ತಿದ್ದರು. ರಾಷ್ಟ್ರೀಯ ಬಸವ ದಳ ಎಂಬ ತತ್ತ್ವನಿಷ್ಠ ಶರಣರ ವಿಧಾಯಕ ಸಂಘಟನೆಯನ್ನು ಸ್ಥಾಪಿಸುವ ಮೂಲಕ 1988ರಲ್ಲಿ ಕೂಡಲ ಸಂಗಮದಲ್ಲಿ "ಶರಣ ಮೇಳ ಉತ್ಸವ"ವನ್ನು ಪ್ರಾರಂಭಿಸಿ, ಲಿಂಗಾಯತ ಧರ್ಮದ ಅಂದರೆ ಬಸವ ಧರ್ಮದ ಅದ್ಭುತ ಸಂಘಟನೆಗೆ ಕಾರಣಕರ್ತರಾದರು. ಅದನ್ನು ಇಂದಿಗೂ ಪೂಜ್ಯ ಮಾತಾಜಿಯವರು ಯಶಸ್ವಿಯಾಗಿ ನೆರವೇರಿಸಿಕೊಂಡು ಬರುತ್ತಿದ್ದಾರೆ. ಅದೂ ಅಲ್ಲದೆ ಊಟಿ, ಹೈದರಾಬಾದ್‌ಗಳಲ್ಲಿಯೂ ಅಖಿಲ ಭಾರತ ಬಸವ ಧರ್ಮಸಮ್ಮೇಳನಗಳನ್ನು ನೆರವೇರಿಸಿ, ನೆರೆಯ ನಾಡುಗಳಲ್ಲಿಯೂ ಧರ್ಮ ಜಾಗೃತಿಗೈದರು.

ಹಿಂದು ಸಮಾಜದ ಭವಿಷ್ಯದ ಬಗ್ಗೆ ಗಂಭೀರ ಚಿಂತನೆಗೈಯ್ಯುತ್ತಿದ್ದ ಶ್ರೀಗಳು "ಹಿಂದುತ್ವವು ಸಮೂಹ ವಾಚಕ ಪದ. ಇದು ಅನೇಕ ಧರ್ಮ-ಧರ್ಮೀಯರ ಒಕ್ಕೂಟ. ಹಲಸಿನ ತೊಳೆಗಳು ಬಿಡಿ ಬಿಡಿಯಾಗಿದ್ದುಕೊಂಡು ಒಂದು ಕವಚದ ಒಳಗೆ ಸುರಕ್ಷಿತವಾಗಿರುವಂತೆ ಹಿಂದೂ ಪರಂಪರೆಯ ಒಳಗೆ ಬರುವ ಎಲ್ಲರೂ ಭಾವೈಕ್ಯತೆ ಕಾಪಾಡಿಕೊಳ್ಳಬೇಕು. ಕ್ಷುಲ್ಲಕ ಭಿನ್ನಾಭಿಪ್ರಾಯ, ಸಂಕುಚಿತ ಬಡಿದಾಟ ಸಲ್ಲದು" ಎಂದು ದಿಟ್ಟವಾಗಿ ಪ್ರತಿಪಾದಿಸುತ್ತಿದ್ದರು. ಸ್ವಾಮಿ, ಮಠಾಧಿಪತಿಯಾದವರ ಕರ್ತವ್ಯವು ನಿರಂತರವಾಗಿ ಸಂಚರಿಸಿ ಧರ್ಮ ಪ್ರಚಾರ ಮಾಡುವುದೇ ವಿನಾ ಮಠದಲ್ಲಿ ಕುಳಿತುಕೊಳ್ಳುವುದಲ್ಲ.

ಕಾಯಕವಿಲ್ಲದ ಜಡ ಜೀವನ ನನಗೆ ಬೇಡ. ಬದುಕಿನ ಕೊನೆಯ ಉಸಿರಿರುವವರೆಗೂ ಬಸವ ಧರ್ಮ ಪ್ರಚಾರವನ್ನು ಮಾಡುತ್ತೇನೆ ಎನ್ನುತ್ತಿದ್ದ ಶ್ರೀಗಳು ಅದೇ ರೀತಿ 1995 ಜೂನ್ 30ರಂದು ಚಿತ್ರದುರ್ಗ ಸಮೀಪದ ಹಿರಿಯೂರಿನಲ್ಲಿ ವಿಶ್ವ ಧರ್ಮ ಪ್ರವಚನ ನಡೆಸುವ ಸಂದರ್ಭದಲ್ಲಿ ಲಿಂಗೈಕ್ಯರಾದರು.

ವಿಶ್ವಗುರು ಬಸವಣ್ಣನವರು ಹೇಳುವಂತೆ

"ವೀರನಾದೊಡೆ ವೈರಿಗಳು ಮೆಚ್ಚುವಂತಿರಬೇಕು
ವ್ರತಿಯಾದೊಡೆ ಅಂಗನೆಯರು ಮೆಚ್ಚುವಂತಿರಬೇಕು
ಜಂಗಮನಾದೊಡೆ ಭಕ್ತರು ಮೆಚ್ಚುವಂತಿರಬೇಕು."

ಹಾಗೆಯೇ ಪೂಜ್ಯ ಲಿಂಗಾನಂದ ಸ್ವಾಮಿಗಳು ಭಕ್ತ ಮೆಚ್ಚುವಂತಹ ಜಂಗಮರಾಗಿದ್ದರು. ಗುರು ಬಸವಣ್ಣನವರ ಲಿಂಗೈಕ್ಯ ಸ್ಥಾನವಾಗಿರುವ ಕೂಡಲ ಸಂಗಮವು ಲಿಂಗಾಯತರ ಧರ್ಮ ಕ್ಷೇತ್ರವಾಗಿದ್ದು, ಇದು ಅಂತರಾಷ್ಟ್ರೀಯ ಮಟ್ಟದ ಪ್ರವಾಸಿ ಕೇಂದ್ರವಾಗಬೇಕು ಎಂಬುದು ಶ್ರೀಗಳ ಹೆಬ್ಬಯಕೆಯಾಗಿತ್ತು. ಆ ಕಾರಣದಿಂದಲೇ 1987ರಲ್ಲಿ ಅಲ್ಲಿಯೇ ಬಸವ ಧರ್ಮ ಪೀಠ ಟ್ರಸ್ಟ್ ಸ್ಥಾಪಿಸಿ, ಹಲವಾರು ವಿಧಾಯಕ ಕಾರ್ಯಗಳನ್ನು ಕೈಗೊಂಡು ಕ್ಷೇತ್ರದ ಅಭಿವೃದ್ಧಿಗೆ ನಾಂದಿ ಹಾಡಿದರು, ಮಾತ್ರವಲ್ಲ; ಈ ದಿಶೆಯಲ್ಲಿ ಸರ್ಕಾರವನ್ನು ಪದೇ ಪದೇ ಆಗ್ರಹಿಸುತ್ತಿದ್ದರು. ಅವರು ಲಿಂಗೈಕ್ಯರಾಗಿ 2 ವರ್ಷದ ನಂತರ 1997ರಲ್ಲಿ ಅಂದಿನ ಮುಖ್ಯ ಮಂತ್ರಿ ದಿವಂಗತ ಜೆ.ಹೆಚ್ ಪಟೇಲ್‌ರವರ ಸರ್ಕಾರ ಕೂಡಲ ಸಂಗಮ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ನಿರ್ಧರಿಸಿತು. ಈ ಮೂಲಕ ಶ್ರೀಗಳ ಕನಸು ನನಸಾಯಿತೆಂದೇ ಹೇಳಬೇಕು. ಹೀಗೆ ಬಸವ ಧರ್ಮವನ್ನು ಕೇವಲ ಕನ್ನಡ ನಾಡಿನಲ್ಲಿ ಮಾತ್ರವಲ್ಲ ನೆರೆಯ ತಮಿಳು ನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ವಿದೇಶಗಳಲ್ಲೂ ಚರ ಜಂಗಮರಾಗಿ ಸಂಚರಿಸಿ ಯಶಸ್ವಿಯಾಗಿ ಪ್ರಚಾರಗೈದು ಉರಿಯುಂಡ ಕರ್ಪುರದಂತೆ ದೇವನಲ್ಲಿ ಒಂದಾದರು. ಅವರು ಗುರು ಬಸವಣ್ಣನವರ ಉಸಿರು. ನಿಜಕ್ಕೂ ಇಂತಹವರ ನೆನಹಾದಾಗಲೇ ಉದಯ.

★ ★ ★



ದಿ.23-7-2006 ರಂದು ಪೂಜ್ಯ ಮಾತಾಜಿಯವರನ್ನು ಚಿಂತಾಮಣಿಯಲ್ಲಿ ಸದ್ಭಕ್ತರು ಪುಷ್ಪವೃಷ್ಟಿ - ಆರತಿ ಮಾಡಿ ಗೌರವಿಸಿದರು.

ದೇವರ ದಾಸಿಮಯ್ಯ - ಜೇಡರ ದಾಸಿಮಯ್ಯ
ಇಬ್ಬರೂ ಬೇರೆ ಬೇರೆ

-ಮಾತಾಜಿ

[ಜೇಡರ ದಾಸಯ್ಯನ ವಚನಗಳು ಎಂಬ ಪುಸ್ತಕ811ನೆಯ ಬಸವ ಪಂಚಮಿಯಂದು ಬಿಡುಗಡೆಯಾಯಿತು. ಬಹಳ ಮಹತ್ವಪೂರ್ಣವಾಗಿರುವ ಕಾರಣ ಆ ಪುಸ್ತಕದ ಮುನ್ನುಡಿಯನ್ನು ಕಲ್ಯಾಣ ಕಿರಣದ ಓದುಗರಿಗೆ ಕೊಡಲಾಗತ್ತಿದೆ.]

ಒಂದು ಸಲ ಇಬ್ಬರು ಕಿವುಡರು ಮಾರುಕಟ್ಟೆಯಲ್ಲಿ ಪರಸ್ಪರ ಸಂಧಿಸಿದರು. "ಏನ್ರಿ, ರಾಯರೇ ಮಾರ್ಕೆಟ್ಟಿಗೆ ಬಂದಿದ್ದಿರಾ?" ಒಬ್ಬರು ಕೇಳಿದರು. "ಇದೇನು ನೀವು ಇಲ್ಲಿ? ನಾನು ಮಾರ್ಕೆಟ್ಟಲ್ಲಿ ತರಕಾರಿ ಕೊಳ್ಳೋಕೆ ಬಂದಿದ್ದೆ." "ಯಾಕ್ರಿ ಕೇಳ್ತಾ ಇಲ್ಲವಾ? ಮಾರ್ಕೆಟ್‌ಗೆ ಏಕೆ ಬಂದಿದ್ದಿರಿ?" "ನಿಮಗೆ ಕೇಳ್ತಾ ಇಲ್ಲವಾ? ನೀವೇಕೆ ಬಂದಿದೀರ್ರಿ, ತರಕಾರಿ ಕೊಳ್ಳೋಕೆ ನಾನು ಬಂದಿದ್ದೀನಿ ".

ಹೀಗೆ ಇಬ್ಬರೂ ಘನ ಕಿವುಡರು; ಒಬ್ಬರು ಮಾತಾಡಿದ್ದು ಇನ್ನೊಬ್ಬರಿಗೆ ಕೇಳಲ್ಲ. ಅದೇ ರೀತಿ ಕನ್ನಡದ ಕ್ಷೇತ್ರದಲ್ಲಿ ಇಂಥ ಸಂವಾದವು ನಡೆಯುತ್ತಿರುತ್ತದೆ. ಅವರದ್ದು ಇವರು ಕೇಳಿಸಿಕೊಳ್ಳುವುದಿಲ್ಲ; ಇವರದ್ದು ಅವರು ಕೇಳಿಸಿಕೊಳ್ಳುವುದಿಲ್ಲ. ಪತ್ರಿಕೆಗಳ ಮೂಲಕ ವಾಕ್‌ಯುದ್ಧ ನಡೆಯುತ್ತಿರುತ್ತದೆ. ಇಂಥವರ ಮಧ್ಯೆ ಬೇರೆ ಬೇರೆ ಜಾತಿ ಜನಾಂಗಗಳವರು, ರಾಜಕೀಯ ಧುರೀಣರು ಮತ್ತು ಮಠಾಧೀಶರು ಬೇರೆ ಸೇರಿಕೊಳ್ಳುತ್ತಾರೆ. ಈ ವಾಕ್ ಸಮರಕ್ಕೆ ರಂಗು ಬರುತ್ತದೆ. ಆದರೆ ಈ ಕೋಳಿ ಕಾಳಗದ ಮಧ್ಯೆ ಸತ್ಯವೂ ಸತ್ತೇ ಹೋಗುತ್ತದೆ.

ಲಿಂಗಾಯತರಲ್ಲಿನ ಪ್ರತಿಯೊಂದು ಜಾತಿ, ಪಂಗಡ, ಪಂಥಗಳವರಿಗೆ ನಾವು ಗುರು ಬಸವಣ್ಣನವರಿಗೂ ಪೂರ್ವದಲ್ಲಿದ್ದೆವು ಎಂದು ಸಾಧಿಸುವ ಛಲ; ಹಾಗೆಲ್ಲ ಅವರು ಇದ್ದರೂ ಗುರು ಬಸವಣ್ಣನವರು ಲಿಂಗಾಯತ ಧರ್ಮದ ಸಂಸ್ಥಾಪಕರು ಎಂಬುದಕ್ಕೆ ಏನೇನೂ ಕೊರತೆ ಬರದು. ಏಕೆಂದರೆ ಮಾನವ ಸಮಾಜ ಹುಟ್ಟಿದಾಗಲೇ ಅದು ಹಲವಾರು ಬುಡಕಟ್ಟುಗಳ (tribes and clans) ರೂಪದಲ್ಲಿರುತ್ತದೆ. ಭಾರತದಲ್ಲಿ ಜಾತಿಗಳೂ ಬೆಳೆದಿವೆ. ಇನ್ನು ವೈಷ್ಣವ, ನಾಥ, ಕಾಳಾಮುಖ, ಮುಂತಾದ ಧಾರ್ಮಿಕ ಪಂಥಗಳೂ ಇರುತ್ತವೆ. ಇವೆಲ್ಲವೂ ಸಣ್ಣ ಸಣ್ಣ ಹಳ್ಳ, ತೊರೆಗಳಂತೆ ಯಾವುದಾದರೂ ಧರ್ಮ ಎಂಬ ವಾಹಿನಿಯನ್ನು ಸೇರಿಕೊಳ್ಳುತ್ತವೆ. ಅದೇ ರೀತಿ ಗುರು ಬಸವಣ್ಣನವರು ಲಿಂಗಾಯತ ಧರ್ಮವನ್ನು ಕೊಟ್ಟಾಗ ಹಲವಾರು ಜಾತಿ ಮತ ಪಂಗಡ ಉದ್ಯೋಗಗಳವರು ಮತ್ತು ಹಲವಾರು ಪಂಥಗಳವರು ಈ ನೂತನ ಧರ್ಮವಾಹಿನಿಯಲ್ಲಿ ಮಿಳಿತವಾದರು.

ದೇವರ ದಾಸಿಮಯ್ಯ / ಜೇಡರ ದಾಸಿಮಯ್ಯ

ರಾಜಕಾರಣಿಗಳು ಯಾವ ಸಭೆಗೆ ಹೋಗುತ್ತಾರೋ ಅಲ್ಲಿ ಒಂದು ಏನಾದರೂ ಆಶ್ವಾಸನೆ ಕೊಡುತ್ತಾರೆ. ಉಪಮುಖ್ಯ ಮಂತ್ರಿ ಶ್ರೀ ಯಡಿಯೂರಪ್ಪನವರು ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ದೇವರ ದಾಸಿಮಯ್ಯ ಅಧ್ಯಯನ ಪೀಠವನ್ನು ಸ್ಥಾಪಿಸುವುದಾಗಿ ಘೋಷಿಸಿದರು. ಆಗ ಖ್ಯಾತ ಸಂಶೋಧಕರಾದ ಡಾ॥ಚಿದಾನಂದ ಮೂರ್ತಿ,ಆರ್.ರಾಚಪ್ಪ ಮತ್ತಿತರರು "ದೇವರ ದಾಸಿಮಯ್ಯ ಬೇರೆ, ಜೇಡರ ದಾಸಿಮಯ್ಯ ಬೇರೆ; ವಚನಕಾರನು ಜೇಡರ ದಾಸಿಮಯ್ಯನೇ ವಿನಾ ದೇವರ ದಾಸಿಮಯ್ಯ ಅಲ್ಲ. ದೇವರ ದಾಸಿಮಯ್ಯನ ಹೆಸರಿನಲ್ಲಿ ಪೀಠವನ್ನು ಸ್ಥಾಪಿಸಲಿ; ಆದರೆ ಆತನೇ ವಚನಕಾರ ಎಂದರೆ ಇತಿಹಾಸಕ್ಕೆ ಅಪಚಾರ" ಎಂದರು. ಆಗ ಗುಳೇದ ಗುಡ್ಡದ ಪೂಜ್ಯ ಶ್ರೀ ಬಸವರಾಜ ಸ್ವಾಮಿಗಳು ಮತ್ತು ದೇವಾಂಗ ಸಮಾಜದವರು ಡಾ॥ ಚಿದಾನಂದ ಮೂರ್ತಿಯವರನ್ನು ವಿರೋಧಿಸಿ ದೇವರ ದಾಸಿಮಯ್ಯನೇ ಆದ್ಯ ವಚನಕಾರ ಎಂದು ವಾದಿಸಿ ಪತ್ರಿಕೆಗಳಿಗೆ ಬರೆದರು.

ನಮ್ಮ ದೇಶದಲ್ಲಿ ಸತ್ಯದ, ಇತಿಹಾಸದ ವಸ್ತುನಿಷ್ಠ ಅಧ್ಯಯನವು ನಡೆಯುವುದೇ ಇಲ್ಲ. ಸತ್ಯವನ್ನು ಇತಿಹಾಸವನ್ನು ನಿರ್ಧರಿಸುವ, ನಿಯಂತ್ರಿಸುವ ಅಂಶಗಳಾಗಿ ಜಾತಿ ಮತ್ತು ವೈಯಕ್ತಿಕ ದ್ವೇಷ - ಈರ್ಷೆಗಳು ಕೆಲಸ ಮಾಡುತ್ತವೆ. ದೇವರ ದಾಸಿಮಯ್ಯ ವಚನಕಾರನಲ್ಲ ಎಂದು ಹೇಳುತ್ತಿದ್ದಂತೆಯೇ ದೇವಾಂಗ ಸಮಾಜಕ್ಕೆ, ಸಂಘ -ಸಂಸ್ಥೆಗಳಿಗೆ ಸಿಟ್ಟು ಬರುತ್ತದೆ. ರಾಜಕೀಯದಲ್ಲಿ ಗುಂಪುಗಾರಿಕೆ ಇರುವಂತೆ ಸಾಹಿತ್ಯ ಕ್ಷೇತ್ರದಲ್ಲಿಯೂ ಗುಂಪುಗಾರಿಕೆ ಇರುವುದರಿಂದ ಡಾ॥ಚಿದಾನಂದ ಮೂರ್ತಿಯವರು ಹೇಳಿದುದಕ್ಕೆ ವಿರುದ್ಧವಾದ ಅಭಿಪ್ರಾಯವನ್ನು ಅವರ ವಿರೋಧಿಗಳು ಕೊಡುವ ಸಂಭವವಿರುತ್ತದೆ. ಈ ಹಿನ್ನೆಲೆಯಲ್ಲಿ ಕೆಲವೊಂದು ವಿಚಾರಗಳನ್ನು ನಾವು ವಿಶ್ಲೇಷಿಸೋಣ.

ದೇವರ ದಾಸಿಮಯ್ಯ - ಜೇಡರ ದಾಸಿಮಯ್ಯ

ದೇವರ ದಾಸಿಮಯ್ಯ ಮತ್ತು ಜೇಡರ ದಾಸಿಮಯ್ಯ ಎಂಬ ಹೆಸರುಗಳು ಸಾಕಷ್ಟು ಗೊಂದಲವನ್ನು ಉಂಟು ಮಾಡುತ್ತವೆ. ಶಿವಶರಣ ಕಥಾರತ್ನ ಕೋಶದಂತಹ ಕೃತಿಯಲ್ಲೂ ಶ್ರೀ ತ.ಸು.ಶಾಮರಾಯರು ಈ ಗೊಂದಲಕ್ಕೆ ಒಳಗಾಗಿದ್ದಾರೆ. ಜೇಡರ ಮತ್ತು ದೇವರ ಎಂಬ ಎರಡೂ ಸ್ಥಳಗಳಲ್ಲಿ ದಾಸಿಮಯ್ಯನ ಹೆಸರುಗಳು ಬಂದಿದ್ದು ಒಳಗಿನ ಕಥೆ ಒಂದೇ ಇದೆ. ಹೆಸರುಗಳೇ ಹೇಳುವಂತೆ ಒಬ್ಬರು ದೇವಾಂಗ (ರೇಷ್ಮೆ ವಸ್ತ್ರವನ್ನು ನೇಯುವ ವೃತ್ತಿಯವರು) ಸಮಾಜದಲ್ಲಿ ಹುಟ್ಟಿದವರು. ಮತ್ತೊಬ್ಬರು ಜೇಡರ (ಹತ್ತಿ ವಸ್ತ್ರಗಳನ್ನು ನೇಯುವವರು,ಜಾಡರು ಎಂದು ಇವರನ್ನು ಕರೆಯಲಾಗುವುದು) ಸಮಾಜದಲ್ಲಿ ಹುಟ್ಟಿದವರು. ವೀರವಿರಾಗಿಣಿ ಅಕ್ಕಮಹಾದೇವಿ ಅನುಭವ ಮಂಟಪಕ್ಕೆ ಬಂದಾಗ ಅಲ್ಲಿ ಒಬ್ಬ ದಾಸಿಮಯ್ಯನನ್ನು ಕಂಡು ಶರಣು ಸಲ್ಲಿಸುವಳು.

ಅನಿಮಿಷನಲ್ಲಮಯ್ಯ, ಮರುಳ ಶಂಕರಯ್ಯ, ಕೋಲ ಶಾಂತಯ್ಯ
ಮಾದಾರ ಧೂಳಯ್ಯ, ಮಿಂಡ ಮಲ್ಲಿನಾಥ, ಚನ್ನಬಸವಣ್ಣ
ಚೇರಮರಾಯ, ತೆಲುಗ ಜೊಮ್ಮಣ್ಣ, ಕಿನ್ನರಯ್ಯ
ಹಲಾಯುಧ, ದಾಸಿಮಯ್ಯ, ಭಂಡಾರಿ ಬಸವರಾಜ ಮುಖ್ಯವಾದ
ಚನ್ನಮಲ್ಲಿಕಾರ್ಜುನನ ಶರಣರಿಗೆ ನಮೋ ನಮೋ ಎಂಬೆನು

ಈ ವಚನದಿಂದ ಅಲ್ಲಿ ಒಬ್ಬ ದಾಸಿಮಯ್ಯ ಇದ್ದುದು ಸಿದ್ಧವಾಗುತ್ತದೆ. ಗುರು ಬಸವಣ್ಣನವರ ಒಂದು ವಚನ ಹೀಗಿದೆ :

ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ
ಕಕ್ಕಯ್ಯನೊಕ್ಕುದ ಇಕ್ಕ ನೋಡಯ್ಯ
ದಾಸಯ್ಯ ಶಿವದಾನವ ಎರೆಯ ನೋಡಯ್ಯ
ಮನ್ನಣೆಯ ಚನ್ನಯ್ಯ ಎನ್ನುವನು ಮನ್ನಿಸ
ಉನ್ನತ ಮಹಿಮ ಲಿಂಗದೇವಾ, ಶಿವಧೋ! ಶಿವಧೋ!

"ನಾನು ಉತ್ತಮ ಕುಲದಲ್ಲಿ ಹುಟ್ಟಿದವನು ಎಂಬ ಹೊರೆಯನ್ನು ಹೊರಿಸಬೇಡ;ಇದು ನನ್ನ ಪಾಲಿಗೆ ಹೆಮ್ಮೆಯ ವಿಷಯವಲ್ಲ; ನನ್ನಲ್ಲಿ ಕುಲಮದ, ಹಮ್ಮು ಬಂದರೆ ಕಕ್ಕಯ್ಯನು ಒಕ್ಕ ಪ್ರಸಾದವನ್ನು ನೀಡನು; ದಾಸಯ್ಯ ಮಜ್ಜಿಗೆಯನ್ನು ಕೊಡನು, ಗೌರವಾನ್ವಿತ ಮಹಾತ್ಮ ಚನ್ನಯ್ಯ ನನ್ನನ್ನು ನಂಬುವುದಿಲ್ಲ." ಎನ್ನುತ್ತಾರೆ ಗುರು ಬಸವಣ್ಣನವರು.ಕಾಂಚೀಪುರದಲ್ಲಿ ಹುಲ್ಲು ಮಾರುತ್ತಲಿದ್ದ, ಶಿವನಿಗೆ ಅಂಬಲಿ ಕುಡಿಸಿದ ಮಾದಾರ ಚನ್ನಯ್ಯ ಬೇರೆ. ಪ್ರಸುತ್ತ ವಚನದಲ್ಲಿ ಪ್ರಸ್ತಾಪವಾಗಿರುವ ಚನ್ನಯ್ಯ ಬೇರೆ ಎಂದು ಅರ್ಥೈಸಬೇಕು.

ಕಾಂಚೀಪುರದ ಚನ್ನಯ್ಯನ ವೃತ್ತಾಂತ

ತಮಿಳು ನಾಡಿನ ಕಾಂಚೀಪುರದಲ್ಲಿ ಕರಿಕಾಲ ಚೋಳ ಎಂಬ ಬಿರುದು ಪಡೆದಿದ್ದ ಜಯಪ್ರಿಯ ರಾಜ ವೀರ ರಾಜೇಂದ್ರ ಚೋಳ. ಈತನ ಕಾಲ ಕಿ.ಶ.1062. ಈತ 1062ರಿಂದ 1070ರವರೆಗೆ ಅಧಿಕಾರದಲ್ಲಿದ್ದ ಇವನು ಮಹಾಶಿವಭಕ್ತ. ರಾಜನ ಕುದುರೆಯ ಲಾಯಕ್ಕೆ ಹುಲ್ಲನ್ನು ಒದಗಿಸುತ್ತಿದ್ದ ಚನ್ನಯ್ಯ ಮಾದಾರ ಕುಲದವನು. ಅವನೂ ನಿಷ್ಠಾವಂತ ಶಿವಭಕ್ತ. ಭಕ್ತಿ ಪಂಥದ ಅನುಸಾರಿಗಳು ಪರಸ್ಪರ ಭಕ್ತಿಯ ಸ್ನೇಹವನ್ನು ಹೊಂದಿರುತ್ತಾರೆ. ಮತ್ತು ಅಧ್ಯಾತ್ಮ ಜೀವಿಗಳಾದ ಗುರುಗಳು ಸಹ ಜಾತಿ, ಅಂತಸ್ತು ಭೇದ ಮಾಡದೆ ಭಕ್ತರೊಡನೆ ವ್ಯವಹರಿಸುತ್ತಾರೆ. ಇಂಥ ಒಬ್ಬ ಗುರುವು ರಾಜ ಮತ್ತು ಹುಲ್ಲು ಒದಗಿಸುವ ಚನ್ನಯ್ಯ ಇಬ್ಬರನ್ನೂ ಸಮಾನ ದೃಷ್ಟಿಯಿಂದ ಕಾಣುತ್ತಿರಬಹುದು.

ಬಹುಶಃ ಅಂದು ರಾಜನ ಅರಮನೆಗೆ ಭೋಜನಕ್ಕಾಗಿ ಗುರುಗಳಿಗೆ ಆಹ್ವಾನವಿದ್ದಿರಬಹುದು. ಚನ್ನಯ್ಯ ತನ್ನ ಗುಡಿಸಲಿನಲ್ಲಿ ಊಟಕ್ಕೆ ಕುಳಿತಿದ್ದ ;ಅಂಬಲಿಯನ್ನು ಹೆಂಡತಿ ಬಟ್ಟಲಲ್ಲಿ ಸುರಿದು ಕೊಟ್ಟಳು. ಒಂದು ಸಲ ಬೆರಳನ್ನು ಎದ್ದಿ ಚೀಪಿದ. ಅದ್ಭುತವಾದ ರುಚಿಯನ್ನು ಹೊಂದಿತ್ತು, ತಟ್ಟನೆ ಗುರುವಿನ ನೆನಪಾಯಿತು. ಹಾಗೆಯೇ ಎತ್ತಿಟ್ಟ. ಗುರುಗಳಿಗೆ ಆಹ್ವಾನ ಕಳಿಸಿದ; ನಂತರ ಬಂದರು. ಅಂಬಲಿಯನ್ನು ಅವರ ಹಿಂದಿನ ಭಕ್ತಿಯನ್ನು ಸವಿದರು. ಹೊಟ್ಟೆ ತುಂಬಿತು.

ಅರಮನೆಯ ಆಹ್ವಾನ ನೆನಪಾಯಿತು. ಶಿಷ್ಟಾಚಾರಕ್ಕಾಗಿ ಹೋಗಿ ತಮ್ಮ ಊಟ ಆದುದನ್ನು , ಚನ್ನಯ್ಯನ ಆಕಸ್ಮಿಕ ಆಹ್ವಾನವನ್ನು ತಾವು ಸ್ವೀಕರಿಸಲೇಬೇಕಾಯಿತು ಎಂಬುದನ್ನು ವಿವರಿಸಿದರು. ರಾಜ ಗುಣಗ್ರಾಹಿ; ಅರಮನೆಯ ಭಕ್ಷ್ಯಕ್ಕಿಂತಲೂ ಚನ್ನಯ್ಯನ ಮನೆಯ ಅಂಬಲಿ ಹೆಚ್ಚು ಪ್ರಿಯವಾಗಬೇಕಾದರೆ ಆತನ ಭಕ್ತಿಯ ಉತ್ಕಟತೆ ಎಷ್ಟಿರಬಹುದು ಎಂಬುದನ್ನುಗ್ರಹಿಸಿ ತಾನೇ ಸ್ವತಃ ಚನ್ನಯ್ಯನ ಮನೆ ಬಾಗಿಲಿಗೆ ಹೋಗಿ ಗೌರವಿಸಿದ. ರಾಜನಿಂದ ಗೌರವಿಸಲ್ಪಟ್ಟ, ರಾಜಗುರುವಿನಿಂದ ಭೋಜನ ಸ್ವೀಕರಿಸಲ್ಪಟ್ಟ ಕೀರ್ತಿಗೆ ಭಾಜನನಾದ ಚನ್ನಯ್ಯನ ಖ್ಯಾತಿ ಕರ್ನಾಟಕದ ಕಲ್ಯಾಣದವರೆಗೂ ಹಬ್ಬಿತು.

ಭಕ್ತರ ಚರಿತ್ರೆಗಳು ಪುರಾಣಕಾರರ ವರ್ಣನೆಯಲ್ಲಿ ಸಿಕ್ಕಿ ವಿರೂಪಗೊಂಡು ಪವಾಡಗಳ ವೇಷವನ್ನು ತಳೆಯುವ ಕಾರಣ ಅವರ ಕಾಲವನ್ನು ಐತಿಹಾಸಿಕವಾಗಿ ನಿರ್ಧರಿಸಲು ಆಗುವುದೇ ಇಲ್ಲ. ಆದರೆ ರಾಜರ ಚರಿತ್ರೆಗಳು ದಾಖಲಿಸಲ್ಪಟ್ಟಿವೆ. 1062 ರಿಂದ 1070ರ ವರೆಗೆ ಆಳಿದ ಚೋಳರಾಜನಿಂದ ಸನ್ಮಾನಿಸಲ್ಪಟ್ಟ ಚನ್ನಯ್ಯ ಬಸವಣ್ಣನವರ ಅನುಭವ ಮಂಟಪದಲ್ಲಿರಲು ಸಾಧ್ಯವೆ?

"ಎತ್ತು ಈಯಿತು ಅಂತ ಯಾರೋ ಅಂದರೆ ಕೊಟ್ಟಿಗೆಗೆ ಕಟ್ಟು" ಎನ್ನುವವರಂತೆ ಚನ್ನಯ್ಯ ಎಂದ ತಕ್ಷಣ ಕಾಂಚೀಪುರದ ಚನ್ನಯ್ಯ, ದಾಸಯ್ಯ ಅಂದ ತಕ್ಷಣ ದೇವರ ದಾಸಿಮಯ್ಯ ಎಂದು ಆತುರಾತುರವಾಗಿ ನಿರ್ಧರಿಸುವ ಸಾಹಿತಿಗಳು, ಸಂಶೋಧಕರ ಬಗ್ಗೆ ಅಚ್ಚರಿ ಮೂಡುತ್ತದೆ. 11ನೆಯ ಶತಮಾನದ ತಮಿಳು ನಾಡಿನ ಶಿವಭಕ್ತ ಚನ್ನಯ್ಯನೇ ಬೇರೆ 12ನೆಯ ಶತಮಾನದ ಅನುಭವ ಮಂಟಪದ ಶರಣ ಈ ಚನ್ನಯ್ಯನೇ ಬೇರೆ ಎಂಬುದನ್ನು ಅರಿಯುವುದು ಅಗತ್ಯವಿದೆ. ಅಕ್ಕಮಹಾದೇವಿಯ ವಚನದಲ್ಲಿ ಬರುವ ಚೇರಮರಾಯ, ಹಲಾಯುಧರು ಸಹ ತಮಿಳುನಾಡಿನಿಂದ ಬಂದ ಶರಣರಾಗಿದ್ದರಿಂದ ಅಲ್ಲಿ ರೂಢಿಯಲ್ಲಿದ್ದ ಹೆಸರುಗಳನ್ನು ಇಟ್ಟುಕೊಂಡವರಿರಬೇಕು.

ಒಕ್ಕುದನ್ನು [ಉಂಡ ಬಳಿಕ ನೀಡುವ ಪ್ರಸಾದ] ಇಕ್ಕಬೇಕಾದರೆ, ಶಿವದಾನ (ಮಜ್ಜಿಗೆ) ನೀಡಬೇಕಾದರೆ ನೀಡುವವರು ಸ್ಥಳೀಯವಾಗಿ ಇರಬೇಕಲ್ಲವೆ? ಒಂದೇ ಹೆಸರಿನವರು ಕಂಡ ಮಾತ್ರಕ್ಕೆ ಬೇರೆ ಬೇರೆ ಕಾಲಮಾನದಲ್ಲಿ ಇದ್ದವರನ್ನು ಒಬ್ಬರೇ ಎನ್ನುವುದು ಹಾಸ್ಯಾಸ್ಪದ ಸಂಗತಿ. ವೈಷ್ಣವರಲ್ಲಿ ಹೇಗೆ ವಿಷ್ಣುವಿಗೆ ತಮ್ಮನ್ನು ತಾವು ಅರ್ಪಿಸಿಕೊಂಡಾಗ ಅವರು ತಮ್ಮ ಹೆಸರಿನ ಮುಂದೆ ಪುರಂದರ ದಾಸ, ಕನಕ ದಾಸ, ವಿಜಯ ದಾಸ ಎಂಬ ವಿಶೇಷಣವನ್ನು ಸೇರಿಸಿಕೊಳ್ಳುತ್ತಿದ್ದರೋ ಹಾಗೆ ಶಿವನಿಗೆ ತಮ್ಮನ್ನು ತಾವು ಅರ್ಪಿಸಿಕೊಂಡಾಗ ತಮ್ಮ ಹೆಸರಿನ ಮುಂದೆ ದಾಸ ಎಂಬ ವಿಶೇಷಣವನ್ನು ಸೇರಿಸಿಕೊಳ್ಳುವ ಒಂದು ಶಿವದಾಸ ಪಂಥ ಮತ್ತು ಪರಿಪಾಠವಿದ್ದಿರಲೇ ಬೇಕು. ಈ ದಿಶೆಯಲ್ಲಿ ಆಲೋಚಿಸಿದಾಗ ಕನ್ನಡ ಸಾಹಿತ್ಯದಲ್ಲಿ ಪ್ರೊ.ಆರ್.ರಾಚಪ್ಪನವರ ಸಂಶೋಧನೆಯ ಪ್ರಕಾರ ಶಿವದಾಸಿಮಯ್ಯ, ಶಂಕರ ದಾಸಿಮಯ್ಯ, ವೀರ ಶಂಕರ ದಾಸಿಮಯ್ಯ. ದೇವರ ದಾಸಿಮಯ್ಯ ಮತ್ತು ಜೇಡರ ದಾಸಿಮಯ್ಯ ಎಂಬ ಐದು ಜನ ದಾಸಿಮಯ್ಯರು ಕಾಣಸಿಗುತ್ತಾರೆ.

ದೇವರ ದಾಸಿಮಯ್ಯ ಮತ್ತು ಜೇಡರ ದಾಸಿಮಯ್ಯ ಉಭಯತರೂ ಮುದನೂರಿನವರೇ ಆಗಿದ್ದರೂ ಇಬ್ಬರೂ ಬದುಕಿದ್ದ ಕಾಲಮಾನ ಬೇರೆ ಬೇರೆ. ದೇವರ ದಾಸಿಮಯ್ಯ ಶಿವದಾಸರಾಗಿ ಏಕ ದೇವತಾ- ಶಿವೋಪಾಸಕನಾಗಿದ್ದರು. ಆರಂಭದ ದಿನಗಳಲ್ಲಿ ಜೇಡರ ದಾಸಿಮಯ್ಯನೂ ಏಕ ಶಿವೋಪಾಸಕನೆ.

1. ಎತ್ತನೇರಿದ ಕರ್ತನೊಬ್ಬನೇ ಜಗಕೆಲ್ಲ
ಎತ್ತು ಬೆಳೆದ ಧಾನ್ಯವನುಂಬ ದೇವರ್ಕಳೆಲ್ಲ
ನಿಮ್ಮ ತೊತ್ತಿನ ಮಕ್ಕಳು ಕಾಣಾ ರಾಮನಾಥ - ವ.755, ಪು248, ಸಂ.7

2. ದಾಸನ ಕುಲವಾದಾತ ಈಶಂಗಲ್ಲದೆ ಶರಣೆನ್ನ
ಆಸೆ ಮಾಡ ನೋಡ ಅನ್ಯ ದೈವಂಗಳಿಗೆ
ದೇಶವ ಪಿಶಾಚಗಳಿಗೆ ಆಸೆ ಮಾಡನೋಡ
ಅವನನ್ಯ ಕುಲ ಕಾಣಾ ರಾಮನಾಥಾ -ವ. 812, ಪು.261, ಸಂ.7

ಈ ವಚನಗಳಲ್ಲಿ ನಿರಾಕಾರ ದೇವರ ಕಲ್ಪನೆಗಿಂತ ನಂದಿ ವಾಹನನಾದ ಶಿವನನ್ನೇ ಜಗದ ಕರ್ತ ಎಂದು ದಾಸಿಮಯ್ಯನವರು ಪ್ರತಿಪಾದಿಸಿದ್ದಾರೆ. "ದಾಸನ ಕುಲ" ಎಂಬುದು ಒಂದು ಆಧ್ಯಾತ್ಮಿಕ ಪಂಥ. ಈ ಭಕ್ತಿ ಪಂಥದವರು ಈಶನಿಗೆ ತಮ್ಮನ್ನು ತಾವು ಸಮರ್ಪಿಸಿಕೊಂಡು "ದಾಸ ಕುಲ" ವನ್ನು ಸೇರಿಕೊಳ್ಳುತ್ತಿದ್ದರು.

3. ಕಡು ಭಸಿತಮಂ ಪೂಸಿ
ಮುಡಿಯಲ್ಲಿ ಲಿಂಗವ ಧರಿಸಿ ವ. 774, ಪುಟ 252, ಸಂ.7

ಎಂಬ ವಚನದಲ್ಲಿ, ಕೆಲವು ಶಿವದಾಸರು ದಟ್ಟವಾಗಿ ವಿಭೂತಿಯನ್ನು ಹಚ್ಚುತ್ತಿದ್ದುದಲ್ಲದೆ, ಮುಡಿ (ಜಟೆ)ಯಲ್ಲಿ ಲಿಂಗವನ್ನು ಧರಿಸುತ್ತಿದ್ದುದಾಗಿ ತಿಳಿದು ಬರುತ್ತದೆ. ಮತ್ತೆ ಕೆಲವರು ಚೀಲ, ಬುಟ್ಟಿಗಳಲ್ಲಿ ಇಟ್ಟುಕೊಂಡು ಸ್ಥಾವರ ಲಿಂಗಗಳ ಸಣ್ಣರೂಪವಾದ ಚರಲಿಂಗಗಳನ್ನು ತಮ್ಮೊಡನೆ ಒಯ್ಯುತ್ತಿದ್ದರು.

ನಂತರದಲ್ಲಿ ಜೇಡರ ದಾಸಯ್ಯ ಇಷ್ಟಲಿಂಗದೀಕ್ಷೆ ಪಡೆದು ಇಷ್ಟಲಿಂಗ ಪೂಜಕರಾಗಿದ್ದಾರೆ.

ಕರಸ್ಥಲದ ಜ್ಯೋತಿಯಿದು
ಕರುವಿಟ್ಟ ಎರಕವಿದು
ಇದರ ನೆಲೆಯ ತಿಳಿದು ನೋಡಿದಡೆ ನಿಜದಾನಂದವು
ಕೂಡಿದಾತನೆ ಶರಣ ಕಾಣಾ। ರಾಮನಾಥ ವ.778, ಪುಟ.253, ಸಂ.7

ಲಿಂಗಾಯತ ಧರ್ಮದ ತ್ರಿತತ್ತ್ವಗಳಾದ ಗುರು-ಲಿಂಗ-ಜಂಗಮದ ಪರಿಕಲ್ಪನೆ ಇದು ಗುರು ಬಸವಣ್ಣನವರ ಕೊಡುಗೆ. ಈ ಬಗ್ಗೆ ಅಲ್ಲಮ ಪ್ರಭು, ಚನ್ನಬಸವಣ್ಣ, ಸಿದ್ಧರಾಮೇಶ್ವರ ಮುಂತಾಗಿ ಎಲ್ಲರೂ ಸ್ಪಷ್ಟಪಡಿಸಿದ್ದಾರೆ.

ಗುರು ಭಕ್ತನಾದಲ್ಲಿ ಘಟಧರ್ಮವಳಿದು.
ಲಿಂಗ ಭಕ್ತನಾದಲ್ಲಿ ಮನಸ್ಸಂಚಲ ನಿಂದು
ಜಂಗಮ ಭಕ್ತಿಯಲ್ಲಿ ಧನದಾಸೆಯಳಿದು
ತ್ರಿವಿಧಾಂಗ ಸಲೆ ಸಂದು ತ್ರಿಕರಣ ಶುದ್ಧನಾದವಂಗೆ
ಮರ್ತ್ಯ ಕೈಲಾಸವೆಂಬ ಕಾಳು ಮಾತಿಲ್ಲ
ಆತ ನಿಶ್ಚಿಂತ ನಿಜ ಮುಕ್ತನಯ್ಯ, ರಾಮನಾಥ. ವ.796, ಪುಟ.257, ಸಂ.7

ಪರವಧುವ ನೆರೆಯದೆ ಪರಧನವ ತುಡುಕದೆ
ಪರದೈವದಿಚ್ಛೆ ವಡೆಯದೆ
ಗುರು ಲಿಂಗ ಜಂಗಮಕ್ಕೆ ವರ ದಾಸನಾದಾತನೆ
ಧರೆ ಮೂರಕ್ಕೆ ಗುರುವಾಗಿಪ್ಪನ್ನೆ ರಾಮನಾಥ ವ.827, ಪುಟ.265, ಸಂ-7

ಲಿಂಗಾಯತ ಧರ್ಮ ಸ್ವೀಕಾರಕ್ಕೆ ಮೊದಲು "ಶಿವದಾಸ" ನಾಗಿದ್ದ ಜೇಡರ ದಾಸಿಮಯ್ಯ ಇಷ್ಟಲಿಂಗಧಾರಿ ಲಿಂಗಾಯತನಾದ ಬಳಿಕ ದೇವರ ಕಲ್ಪನೆಯಲ್ಲಿ ಪ್ರಮುಖ ಬದಲಾವಣೆಯಾಗುತ್ತದೆ. ಮೊದಲು ಎತ್ತನೇರಿದ ಕರ್ತ ಶಿವನನ್ನೇ ದೇವರು ಎಂದವರು ನಂತರ ನಿರಾಕಾರ ಸ್ವರೂಪನಾದ ದೇವರನ್ನು ಅರಿತು ಆರಾಧಿಸುತ್ತಾರೆ.

ಅಣುರೇಣು ಮಧ್ಯದ ಪ್ರಣವದಾಧಾರ
ಭುವನಾಧೀಶನೊಬ್ಬನೆಯಯ್ಯ
ಇದೆ ಪರಿಪೂರ್ಣವೆಂದೆನ್ನದನ್ಯ ದೈವವ ಸ್ಮರಿಸುವ
ಭವಿಯನೆಂತು ಭಕ್ತನೆಂಬೆನ್ನೆ ರಾಮನಾಥ -ವ. 727, ಪು.242, ಸಂ.7

ಆಡಬಾರದ ಬಯಲು
ಸೂಡಬಾರದ ಬಯಲು
ನುಡಿಯಬಾರದ ಬಯಲು
ಹಿಡಿಯಬಾರದ ಬಯಲು
ಈ ಒಡಲಿಲ್ಲದ ಬಯಲೊಳಗೆ ಅಡಗಿರ್ದ ಭೇದವ
ಈ ಲೋಕದ ಜಡರೆತ್ತ ಬಲ್ಲರೈ? ರಾಮನಾಥ - ವ.733, ಪು.243, ಸಂ.7

ಜೇಡರ ದಾಸಯ್ಯನವರು ಗುರು ಬಸವಣ್ಣನವರ ಸಮಕಾಲೀನರು ಮಾತ್ರವಲ್ಲ ಒಡನಾಡಿಗಳು ಎನ್ನುವುದಕ್ಕೆ ಮತ್ತೊಂದು ಮಹತ್ವದ ದಾಖಲೆ ದಾಸಯ್ಯನವರ ವಚನಗಳಲ್ಲಿ ಪ್ರಸ್ತಾಪವಾಗಿರುವ ಡೋಹರ ಕಕ್ಕಯ್ಯನವರ ಹೆಸರು. ಡೋಹರ ಕಕ್ಕಯನವರು ಅನುಭವ ಮಂಟಪದಲ್ಲಿ ಗೌರವಾನ್ವಿತ ಸ್ಥಾನ ಹೊಂದಿದ ಶರಣರು. ಅವರ ಒಂದು ವಚನವು ಕಕ್ಕಯ್ಯನವರು ಗುರು ಬಸವಣ್ಣನವರಿಂದ ನೇರವಾಗಿ ಅನುಗ್ರಹಿಸಲ್ಪಟ್ಟ ಶರಣರು ಎಂಬುದಕ್ಕೆ ಸಾಕ್ಷಿಯಾಗುತ್ತದೆ.

ಕಷ್ಟ ಕುಲದಲ್ಲಿ ಹುಟ್ಟಿದ ಕರ್ಮವ ಕಳೆದು
ಮುಟ್ಟಿ ಪಾವನವ ಮಾಡಿ, ಕೊಟ್ಟನಯ್ಯಾ ಎನ್ನ ಕರಸ್ಥಲಕ್ಕೆ ಲಿಂಗವ
ಆ ಲಿಂಗ ಬಂದು ಸೋಂಕಲೊಡನೆ
ಎನ್ನ ಸರ್ವಾಂಗದ ಅವಲೋಹವಳಿಯಿತ್ತಯ್ಯ......
ಬಸವಣ್ಣನ ಕರುಣದಿಂದ ಪ್ರಭುದೇವರ ಶ್ರೀಪಾದವ
ಕಂಡು ಬದುಕಿದೆನು ಕಾಣಾ ಅಭಿನವ ಮಲ್ಲಿಕಾರ್ಜುನಾ.

ಧರ್ಮಪಿತ ಬಸವಣ್ಣನವರು ಹೊಸ ಧರ್ಮವನ್ನು ಕೊಟ್ಟಾಗ ಅವರಿಂದ ಅನುಗ್ರಹಿತರಾಗಿ, ಪುನಃ ಅನುಗ್ರಹಿತರಾದವರಿಂದ ಅನುಗ್ರಹಿತರಾಗಿ ಹೀಗೆ ಸರಪಳಿ ಬೆಳೆಯುತ್ತ ಹೋಗಿರುತ್ತದೆ. ಆದರೆ ಡೋಹರ ಕಕ್ಕಯ್ಯನವರು ಧರ್ಮಗುರುವಿನ ಹಸ್ತದಿಂದಲೇ ನೇರವಾಗಿ ದೀಕ್ಷೆ ಪಡೆದವರು ಎಂಬುದಕ್ಕೆ,

"ಮುಟ್ಟಿ ಪಾವನವ ಮಾಡಿ, ಕೊಟ್ಟನಯ್ಯಾ ಎನ್ನ ಕರಸ್ಥಲಕ್ಕೆ ಲಿಂಗವ" ಎಂಬ ಮಾತು ಸಾಕ್ಷಿಯಾಗುತ್ತದೆ. ಇಂಥ ಡೋಹರ ಕಕ್ಕಯ್ಯನವರು ಎಲ್ಲ ಶರಣರ ಗೌರವಾದರಣೆಗೆ ಪಾತ್ರರಾಗಿದ್ದ ಶರಣರು. ಅನುಭವ ಮಂಟಪದಲ್ಲಿ ಬೇರೆ ಯಾವ ಕಕ್ಕಯ್ಯನವರೂ ಇರಲಿಲ್ಲ; ಇಂಥ ಕಕ್ಕಯ್ಯನವರ ಬಗ್ಗೆ ಜೇಡರ ದಾಸಯ್ಯ ನವರು ಹೀಗೆ ಹೇಳುತ್ತಾರೆ:

ಕೀಳು ಡೋಹಾರ ಕಕ್ಕ, ಕೀಳು ಮಾದರ ಚೆನ್ನ
ಕೀಳು ಓಹಿಲದೇವ, ಕೀಳು ಉದ್ಭಟಯ್ಯ ಎನ್ನಬಹುದೆ?

ಕೀಳಿಂಗಲ್ಲದೆ ಹಯನು ಕರೆಯದು ಕಾಣಾ ರಾಮನಾಥ! ವ.785, ಸಂ.7

ಓಹಿಲದೇವ, ಉದ್ಭಟಯ್ಯ ಮುಂತಾದ ಹೆಸರಿನವರು ಅನುಭವ ಮಂಟಪದಲ್ಲೂ ಇದ್ದಿರಬಹುದು. ಒಂದು ವೇಳೆ ಅವರು ಹಿಂದಿನವರು ಎಂದುಕೊಂಡರೂ ಡೋಹಾರ ಕಕ್ಕಯ್ಯನವರು ಮಾತ್ರ ಖಚಿತವಾಗಿ ಅನುಭವ ಮಂಟಪದಲ್ಲಿ ಇದ್ದವರು. ಕಲ್ಯಾಣ ಕ್ರಾಂತಿಯ ನಂತರ ಸಾಹಿತ್ಯ ರಕ್ಷಣೆಗಾಗಿ ಶರಣರು ಸಹ್ಯಾದ್ರಿಯತ್ತ ನಡೆದಾಗ ಆ ತಂಡದಲ್ಲಿ ಕಕ್ಕಯ್ಯ ಶರಣರು ಇದ್ದುದು ಮಾತ್ರವಲ್ಲ ಅವರು ಮತ್ತು ಅವರ ಪತ್ನಿ ಭಿಷ್ಟಾದೇವಿಯ ಸಮಾಧಿಗಳು ಇಂದಿಗೂ ಐತಿಹಾಸಿಕ ಕುರುಹಾಗಿ ಬೆಳಗಾಂವ ಜಿಲ್ಲೆಯ ಕಕ್ಕೇರಿಯಲ್ಲಿವೆ. ಅಂದಾಗ ಈ ವಚನವು ಜೇಡರ ದಾಸಯ್ಯನವರು ಗುರು ಬಸವಣ್ಣನವರ ಒಡನಾಡಿಗಳು ಎಂಬುದನ್ನು ದೃಢಪಡಿಸುತ್ತದಲ್ಲವೆ?

ಜೇಡರ ದಾಸಯ್ಯನವರ ಪತ್ನಿ ದುಗ್ಗಳೆ ಆದರ್ಶ ಸತಿ. ಅದನ್ನು ಅವರೇ ಹೇಳಿದ್ದಾರೆ.

ಬಂದುದನರಿದು ಬಳಸುವಳು
ಬಂದುದ ಪರಿಣಾಮಿಸುವಳು
ಬಂಧು ಬಳಗವ ಮರೆಸುವಳು
ದುಗ್ಗಳೆಯ ತಂದು ಬದುಕಿದೆನು ಕಾಣಾ ರಾಮನಾಥ ವ.829, ಸಂ.7

ಸಿಕ್ಕಿರುವ ಮತ್ತೊಂದು ಮಹತ್ವದ ದಾಖಲೆ ಎಂದರೆ ಜೇಡರ ದಾಸಯ್ಯನವರ ಧರ್ಮ ಪತ್ನಿ ದುಗ್ಗಳೆಯ ಎರಡು ವಚನಗಳು.

1. ಬಸವಣ್ಣನಿಂದ ಗುರು ಪ್ರಸಾದಿಯಾದೆನು.
ಚನ್ನಬಸವಣ್ಣನಿಂದ ಲಿಂಗ ಪ್ರಸಾದಿಯಾದೆನು
ಪ್ರಭುದೇವರಿಂದ ಜಂಗಮ ಪ್ರಸಾದಿಯಾದೆನು.
ಮರುಳಶಂಕರದೇವರಿಂದ ಮಹಾಪ್ರಸಾದಿಯಾದೆನು.
ಇಂತೀ ಚತುರ್ವಿಧವು ಏಕೀಭವಿಸಿ ಪ್ರಾಣಲಿಂಗವಾದ
ಮಹಾಮಹಿಮಂಗೆ ಶರಣೆಂದು ಬದುಕಿದೆನಯ್ಯಾ
ದಾಸಯ್ಯ ಪ್ರಿಯ ರಾಮನಾಥಾ -ವ.700, ಪು.229. ಸಂ.5

2. ಭಕ್ತನಾದಡೆ ಬಸವಣ್ಣನಂತಾಗಬೇಕು
ಜಂಗಮವಾದಡೆ ಪ್ರಭುದೇವರಂತಾಗಬೇಕು
ಯೋಗಿಯಾದಡೆ ಸಿದ್ಧರಾಮಯ್ಯನಂತಾಗಬೇಕು
ಭೋಗಿಯಾದಡೆ ಚನ್ನಬಸವಣ್ಣನಂತಾಗಬೇಕು
ಇಂತಿವರ ಕಾರುಣ್ಯ ಪ್ರಸಾದವ ಕೊಂಡು
ಸತ್ತ ಹಾಗಿರಬೇಕಲ್ಲದೆ ತತ್ತ್ವದ ಮಾತು ಎನಗೇಕಯ್ಯ.
ದಾಸಯ್ಯ ಪ್ರಿಯ ರಾಮನಾಥ? - ವ.701, ಪು.229, ಸಂ.5

ಸಾಮಾನ್ಯವಾಗಿ ಕೆಲವು ಭಾಗಗಳಲ್ಲಿ ಕೆಲವು ಹೆಸರುಗಳು, ಕೆಲವು ಜನಾಂಗಗಳವರಲ್ಲಿ ಕೆಲವು ಹೆಸರು ಪ್ರಚಲಿತವಿರುತ್ತವೆ. ಹಾಗೆ ದಾಸಯ್ಯ, ದಾಸಿಮಯ್ಯ, ದುಗ್ಗಳೆ, ಸುಗ್ಗಳೆ ಈ ಹೆಸರುಗಳು ಸಹ ಮುದನೂರು ಭಾಗದಲ್ಲಿ ಬಹಳಷ್ಟು ಪ್ರಚಲಿತವಿರಬಹುದು. ವಚನಗಳನ್ನು ಬರೆದ ಜೇಡರ ದಾಸಯ್ಯನ ಪತ್ನಿ ದುಗ್ಗಳೆಯು ತನ್ನ ವಚನದಲ್ಲಿ ಬಸವಣ್ಣ, ಚನ್ನಬಸವಣ್ಣ, ಪ್ರಭುದೇವರು, ಮರುಳು ಶಂಕರದೇವರು, ಸಿದ್ಧರಾಮಯ್ಯ, ಅಜಗಣ್ಣ ಅವರುಗಳ ಹೆಸರನ್ನು ಪ್ರಸ್ತಾಪಿಸಿರುವುದರಿಂದ ಜೇಡರ

ದಾಸಯ್ಯ ಮತ್ತು ದುಗ್ಗಳೆ ಗುರು ಬಸವಣ್ಣನವರ ಸಮಕಾಲೀನರಷ್ಟೆ ಅಲ್ಲ ಅನುಭವ ಮಂಟಪದ ಸಕ್ರಿಯ ಸದಸ್ಯರು ಎಂದು ನಿರ್ವಿವಾದವಾಗಿ ನಿರ್ಧರಿಸಬಹುದು.

ಧರ್ಮಗುರು ಬಸವಣ್ಣನವರ ವಚನಗಳಲ್ಲಿ ದೇವರ ದಾಸಿಮಯ್ಯ ಮತ್ತು ಜೇಡರ ದಾಸಯ್ಯ ಉಭಯತರ ಹೆಸರುಗಳೂ ಪ್ರಸ್ತಾಪವಾಗುತ್ತವೆ.

1. ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸದಿರಯ್ಯಾ,
ಕಕ್ಕಯ್ಯನೊಕ್ಕುದನಿಕ್ಕ, ನೋಡಯ್ಯಾ.
ದಾಸಯ್ಯ ಶಿವದಾನವನೆರೆಯ, ನೋಡಯ್ಯಾ
ಮನ್ನಣೆಯ ಚನ್ನಯ್ಯನೆನ್ನುವ ಮನ್ನಿಸ.
ಉನ್ನತ ಮಹಿಮ ಲಿಂಗದೇವಾ, ಶಿವಧೋ ! ಶಿವಧೋ!! -ಬ.ವ.ದೀ-345

2. ಭಕ್ತಿಯಿಲ್ಲದ ಬಡವ ನಾನಯ್ಯಾ.
ಕಕ್ಕಯ್ಯನ ಮನೆಯಲು ಬೇಡಿದೆ.
ಚನ್ನಯ್ಯನ ಮನೆಯಲು ಬೇಡಿದೆ.
ದಾಸಯ್ಯನ ಮನೆಯಲು ಬೇಡಿದೆ.
ಎಲ್ಲಾ ಪುರಾತರು ನೆರೆದು ಭಕ್ತಿ ಭಿಕ್ಷವನಿಕ್ಕಿದಡೆ
ಎನ್ನ ಪಾತ್ರೆ ತುಂಬಿತ್ತು ಲಿಂಗದೇವಾ. -ಬ.ವ.ದೀ - 351

3. ತೊತ್ತಿಂಗೆ ಬಲ್ಲಹನೊಲಿದಡೆ ಪದವಿಯ ಮಾಡದೆ ಮಾಣ್ಬನೆ?
ಜೇಡರ ದಾಸಯ್ಯಂಗೊಲಿದಾತ, ಮತ್ತೊಬ್ಬ ದೇವನೆ, ಅಯ್ಯಾ ?
ಮಾದರ ಚನ್ನಯ್ಯಂಗೆ, ಡೋಹರ ಕಕ್ಕಯ್ಯಂಗೆ
ತೆಲುಗ ಜೊಮ್ಮಯ್ಯಂಗೆ ಒಲಿದಾತ ಮತ್ತೊಬ್ಬ ದೇವನೆ ಅಯ್ಯಾ?
ಎನ್ನ ಮನದ ಪಂಚೇಂದ್ರಿಯ ನಿಮ್ಮತ್ತಲಾದಡೆ
ತನ್ನತ್ತ ಮಾಡುವ ಲಿಂಗದೇವ. -ಬ.ವ.ದೀ - 473

4. ದೇವಾ, ನಿಮ್ಮ ಪೂಜಿಸಿ ಚನ್ನನ ಕುಲ ಚೆನ್ನಾಯಿತ್ತು;
ದೇವಾ, ನಿಮ್ಮ ಪೂಜಿಸಿ ದಾಸನ ಕುಲ ದೇಸೆವಡೆಯಿತ್ತು
ದೇವಾ, ನಿಮ್ಮಡಿಗೆರಗಿದ್ದ ಮಡಿವಾಳ ಮಾಚಯ್ಯ ನಿಮ್ಮಡಿಯಾದ.
ನೀನೊಲಿದ ಕುಲಕ್ಕೆ ನೀನೊಲ್ಲದ ಹೊಲೆಗೆ
ಮೇರೆಯುಂಟೆ, ದೇವಾ?
ಜಾತಿ-ವಿಜಾತಿಯಾದಡೇನು ಅಜಾತಂಗೆ ಶರಣೆನ್ನದವನು
ಆತನೇ, ಹೊಲೆಯ, ಲಿಂಗದೇವಾ.
-ಬ.ವ.ದೀ - 603

ದೇವರ ದಾಸಿಮಯ್ಯನ ಜೀವನದಲ್ಲಿ ಪ್ರಸಿದ್ಧವಾದ ಒಂದು ಪವಾಡವು ಬರುತ್ತದೆ. ಅದೆಂದರೆ ತಾನು ನೇಯ್ದು ಬೆಲೆ ಬಾಳುವ ದೇವಾಂಗ (ರೇಷ್ಮೆಯ) ವಸ್ತ್ರವೊಂದನ್ನು ಶಿವ(ವೇಷಧಾರಿ)ಗೆ ನೀಡಿ ಅಪಾರವಾದ ತವ ನಿಧಿಯ ದೇವರ ದಾಸಿಮಯ್ಯ ಪಡೆದನು ಎಂಬುದು ಇದು; ಮತ್ತು ದೇವರ ದಾಸಿಮಯ್ಯನ ಹೆಸರು ಸಹ ಗುರು ಬಸವಣ್ಣನವರ ವಚನಗಳಲ್ಲಿ ಪ್ರಸ್ತಾಪವಾಗಿದೆ.

1. ಭಕ್ತಿ ಎಂತಹದಯ್ಯಾ ?
ದಾಸಯ್ಯ ಮಾಡಿದಂತಹದಯ್ಯಾ.
ಭಕ್ತಿ ಎಂತಹದಯ್ಯಾ ?
ಸಿರಿಯಾಳ ಮಾಡಿದಂತಹದಯ್ಯಾ.
ಭಕ್ತಿ ಎಂತಹದಯ್ಯಾ ?
ಸಿಂಧುಬಲ್ಲಾಳ ಮಾಡಿದಂತಹದಯ್ಯಾ.
ಭಕ್ತಿ ಎಂತಹದಯ್ಯಾ ? ಕೂಡಲಸಂಗಮದೇವಾ,
ನೀ ಬಾಣನ ಬಾಗಿಲ ಕಾಯ್ದಂತಹದಯ್ಯಾ. -ಬ.ವ.ದೀ-148

2. ಮುನ್ನಿನವರು ಹೋದ ದಾರಿ ಭಯ ಕಾಣೆರಣ್ಣಾ!
ಬಲ್ಲಾಳನ ವಧುವಿನೊಡನೆ ಸರಸವಾಡಿದಂದಿಂದ
ಭಯ ಕಾಣೆರಣ್ಣಾ!
ಸಿರಿಯಾಳನ ಮಗನ ಬೇಡಿದಂದಿಂದ ಭಯ ಕಾಣೆರಣ್ಣಾ!
ದಾಸನ ವಸ್ತ್ರವ ಸೀಳಿದಂದಿಂದ ಭಯ ಕಾಣೆರಣ್ಣಾ!
ಅಘಟಿತಘಟಿತರು ವಿಪರೀತ ಚರಿತರು
ಕೂಡಲಸಂಗನ ಶರಣರು ನಡೆದ ದಾರಿ ಭಯ ಕಾಣೆರಣ್ಣಾ!-ಬ.ವ.ದೀ- 149

3. ನೆರೆ ನಂಬೋ ನೆರೆ ನಂಬೋ, ಧರಧುರವಿಲ್ಲದೆ ಸಾಮವೇದಿಗಳಂತೆ;
ನೆರೆ ನಂಬೋ ನೆರೆ ನಂಬೋ, ದಾಸ-ದುಗ್ಗಳೆಯಂತೆ;
ನೆರೆ ನಂಬೋ ನೆರೆ ನಂಬೋ, ಸಿರಿಯಾಳ ಚಂಗಳೆಯಂತೆ;
ನೆರೆ ನಂಬೋ ನೆರೆ ನಂಬೋ, ಸಿಂಧು ಬಲ್ಲಾಳನಂತೆ.
ನಂಬಿದೆಯಾದಡೆ ತನ್ನನೀವ ಕೂಡಲ ಸಂಗಮದೇವ! - ಬ.ವ.ದೀ-151

4. ಸೋಲಬಲ್ಲರು ಅವರು ಗೆಲ್ಲರಿಯರಯ್ಯಾ.
ತನು ಮನ ಧನದಲ್ಲಿ ವಂಚನೆಯನರಿಯರಯ್ಯಾ,
ದಾಸ ಸಿರಿಯಾಳನವರು
ಕೂಡಲ ಸಂಗಮ ದೇವನ ಶರಣರು ಉಪಚಾರವನರಿಯರಯ್ಯ.- ಬ.ವ.ದೀ-320

5. ಬಾಣ ಮಯೂರನಂತೆ ಬಣ್ಣಿಸಬಲ್ಲೆನೆ?
ಸಿರಿಯಾಳನಂತೆ ಉಣಲಿಕ್ಕಬಲ್ಲೆನೆ ?
ದಾಸಿಮಯ್ಯನಂತೆ ಉಡಕೊಡಬಲ್ಲೆನೆ?
ಉಂಡು ಉಟ್ಟು ಕೊಟ್ಟಡೆ ಮುಯ್ಯಿಗೆ ಮುಯ್ಯೆನಿಸಿತ್ತು;
ಎನಗೆ ಕೊಟ್ಟಡೆ ಧರ್ಮ, ಕೂಡಲಸಂಗಮದೇವ. - ಬ.ವ.ದೀ-322

6. ದಾಸಿದೇವ ತನ್ನ ವಸ್ತ್ರವನಿತ್ತು ತವನಿಧಿಯ ಪ್ರಸಾದವ ಪಡೆದ.
ಸಿರಿಯಾಳ ತನ್ನ ಮಗನನಿತ್ತು ಪ್ರಾಣ ಪ್ರಸಾದವ ಪಡೆದ.
ಬಲ್ಲಾಳದೇವ ತನ್ನ ವಧುವನಿತ್ತು ಸಮತಾ ಪ್ರಸಾದವ ಪಡೆದ.
ಇವರೆಲ್ಲರೂ ತಮತಮಗೆ ಮಾಡಿ ಹಡೆದರು ಸಮ್ಯಕ್ ಪದವಿಯನು.
ನಾನೇನನೂ ಅರಿಯದ ಭಕ್ತಿಯ ಬಡವಂಗೆ ಕರುಣಿಸು
ಕೂಡಲಸಂಗಮದೇವಾ. - ಬ.ವ.ದೀ-323

7. ದಾಸನ ವಸ್ತ್ರವ ಬೇಡದ ಮುನ್ನ
ತವನಿಧಿಯನಿತ್ತಡೆ ನಿಮ್ಮ ದೇವರೆಂಬೆ.
ಸಿರಿಯಾಳನ ಮಗನ ಬೇಡದ ಮುನ್ನ
ಕಂಚಿಯ ಪುರವ ಕೈಲಾಸಕ್ಕೊಯ್ದಡೆ ನಿಮ್ಮ ದೇವರೆಂಬೆ,
ಬಲ್ಲಾಳನ ವಧುವ ಬೇಡದ ಮುನ್ನ
ಸ್ವಯಲಿಂಗವ ಮಾಡಿದಡೆ ನಿಮ್ಮ ದೇವರೆಂಬೆ.
ದೇಹಿ ನೀನು, ವ್ಯಾಪಾರಿಗಳು ನಮ್ಮವರು!
ಬೇಡು, ಕೂಡಲಸಂಗಮದೇವಾ, ಎಮ್ಮವರು ಕೈಯಲು! -ಬ.ವ.ದೀ-441

8. ದ್ವಿಜರಿಗೆ ಕೊಟ್ಟು ಹಲಬರು ಕೆಟ್ಟರು:
ಉದ್ಧರಿಸುವನೊಬ್ಬ ಶಿವಶರಣ ಸಾಲದೆ?
ನಾರಾಯಣ ವೃದ್ಧಬ್ರಾಹ್ಮಣನಾಗಿ ಬಂದು ಬಲಿಯ ಭೂಮಿಯ ದಾನವ ಬೇಡಿದ
ಕೊಟ್ಟ ಬಲಿ ಬಂಧನಕ್ಕೊಳಗಾದ!
ಈಶ ಭಕ್ತನಾಗಿ ಬಂದು ದಾಸನ ವಸ್ತ್ರವ ಬೇಡಿದ ಕೊಟ್ಟ ದಾಸ ತವ ನಿಧಿಯ ಪಡೆದ!
ಕಪಟದಿಂದ ನಾರಾಯಣ ಹಾರುವನಾಗಿ ಬಂದು ಕರ್ಣನ ಕವಚವ ಬೇಡಿದ
ಕೊಟ್ಟ ಕರ್ಣ ಕಳದಲ್ಲಿ ಮಡಿದ!
ಕಾಮಾರಿ ಜಂಗಮವಾಗಿ ಬಂದು ಸಿರಿಯಾಳನ ಮಗನ ಬೇಡಿದ:
ಕೊಟ್ಟ ಸಿರಿಯಾಳಸೆಟ್ಟಿ ಕಂಚಿಯ ಪುರವ ಕೈಲಾಸಕ್ಕೊಯ್ದ.
ನಾರಾಯಣ ಹಾರುವನಾಗಿ ಬಂದು ನಾಗಾರ್ಜುನನ ಶಿರವ ಬೇಡಿದ:
ಕೊಟ್ಟ ನಾಗಾರ್ಜುನನ ಶಿರಹೋಯಿತ್ತು!
ಶಿವನು ಜಂಗಮವಾಗಿ ಬಂದು ಸಿಂಧು ಬಲ್ಲಾಳನ ವಧುವ ಬೇಡಿದ:
ಕೊಟ್ಟ ಸಿಂಧು ಬಲ್ಲಾಳ ಸ್ವಯಲಿಂಗವಾದ!
ಇದು ಕಾರಣ ಇಲ್ಲಿಯೂ ಲೇಸು, ಅಲ್ಲಿಯೂ ಲೇಸು:
ಕೊಡಿರೇ, ನಮ್ಮ ಕೂಡಲಸಂಗನ ಶರಣರಿಗೆ. - ಬ.ವ.ದೀ-620

9. ಅರ್ಥ ಪ್ರಾಣಾಭಿಮಾನವ ಕೊಟ್ಟೆನೆಂಬರಲ್ಲದೆ
ಕೊಟ್ಟ ಭಕ್ತರನಾರನೂ ಕಂಡುದಿಲ್ಲ.
ದಾಸ ತನ್ನ ವಸ್ತ್ರವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ.
ಬಲ್ಲಾಳ ತನ್ನ ವಧುವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ.
ಸಿರಿಯಾಳ ತನ್ನ ಮಗನ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ.
ಇವೆಲ್ಲ ಹೊರಗಣ ಮಾತು!
ಕೂಡಲಸಂಗಮದೇವರಲ್ಲಿ ತನ್ನ ಕೊಟ್ಟ ಸಿಂಧುಮರಾಳ. -ಬ.ವ.ದೀ - 678

ದೇವರ ದಾಸಿಮಯ್ಯನವರು ಗುರು ಬಸವಣ್ಣನವರಿಗೂ ಪೂರ್ವದಲ್ಲಿ ಆಗಿ ಹೋದ ಮಹಾತ್ಮ; ವಸ್ತ್ರವನ್ನಿತ್ತು ಸಮೃದ್ಧಿಯ ವರ ಪಡೆದ ಶಿವಭಕ್ತ ಎಂಬುದು ಈ ನಾಲ್ಕೂ ವಚನಗಳಲ್ಲಿ ಪ್ರಸ್ತಾಪವಾಗಿದೆ. ಮಾತ್ರವಲ್ಲ 'ಕೊಡುವ ಮತ್ತು ಪಡೆಯುವ ಕ್ರಿಯೆ ಒಂದು ವ್ಯವಹಾರವೇ ಸರಿ.' ಎಂದು ದೇವ ದಾಸಿಮಯ್ಯನ ಕ್ರಿಯೆಯನ್ನು ಗುರು ಬಸವಣ್ಣನವರು ಟೀಕಿಸಿದ್ದಾರೆ.

10. ದಾಸನಂತೆ ತವನಿಧಿಯ ಬೇಡುವನಲ್ಲ;
ಚೋಳನಂತೆ ಹೊನ್ನಮಳೆಯ ಕರೆಸೆಂಬವನಲ್ಲ;
ಅಂಜದಿರು! ಅಂಜದಿರು! ಅವರಂದದವ ನಾನಲ್ಲ!
ಎನ್ನ ತಂದೆ, ಲಿಂಗದೇವಾ, ಸದ್ಭಕ್ತಿಯನೆ ಕರುಣಿಸೆನಗೆ; - ಬ.ವ.ದೀ-757

ದೇವರ ದಾಸಿಮಯ್ಯ ಮತ್ತು ಜೇಡರ ದಾಸಯ್ಯ ಬೇರೆ ಬೇರೆ ಎಂಬುದಕ್ಕೆ ಧರ್ಮಪಿತ ಬಸವಣ್ಣನವರ ವಚನಗಳಲ್ಲಿಯೇ ಸುಳಿವು ದೊರೆಯುತ್ತಲಿದೆ. ನಾವು ಚಿಕಿತ್ಸಕ ಬುದ್ಧಿಯಿಂದ ಅಧ್ಯಯನ ಮಾಡಿದರೆ ಜೇಡರ ದಾಸಯ್ಯನವರಿಗೆ ಸಂಬಂಧಿಸಿದ ವಚನಗಳಲ್ಲಿ ಗುರು ಬಸವಣ್ಣನವರ ಸಮಕಾಲೀನರಾದ ಕಕ್ಕಯ್ಯ, ಮಡಿವಾಳ ಮಾಚಯ್ಯ, ಚನ್ನಯ್ಯ ಮುಂತಾದವರ ಹೆಸರುಗಳು ದಾಸಯ್ಯನವರ ಹೆಸರಿನ ಸಂಗಡ ಬರುತ್ತವೆ. ದೇವರ ದಾಸಿಮಯ್ಯನವರ ಹೆಸರಿನ ಸಂಗಡ ಹಿಂದೆ ಆಗಿಹೋಗಿರುವ ಸಿರಿಯಾಳ - ಚಂಗಳೆ, ಸಾಮವೇದಿ, ಸಿಂಧುಬಲ್ಲಾಳ, ಬಾಣ ಮುಂತಾದವರ ಹೆಸರುಗಳು ಬರುತ್ತವೆ.

ದೇವರ ದಾಸಿಮಯ್ಯನವರ ವಿವರ

ದೇವರ ದಾಸಿಮಯ್ಯನವರ ಚರಿತ್ರೆಯಲ್ಲಿ ರೇಷ್ಮೆ ವಸ್ತ್ರ ನೀಡಿ ತವನಿಧಿಯ ಪಡೆದ ಪ್ರಸಂಗ ಪ್ರಸಿದ್ಧವಾದಂತೆ ಸುಗ್ಗಲೆ ಎಂಬ ರಾಣಿಯ ಪತಿ ಜಯಸಿಂಹನನ್ನು ಶಿವಭಕ್ತನನ್ನಾಗಿ ಮಾಡಿದ ಪ್ರಸಂಗವೂ ಬಹಳ ಪ್ರಸಿದ್ಧ. ದೇವರ ದಾಸಿಮಯ್ಯ ಈಗಿನ ಕಲಬುರ್ಗಿ ಜಿಲ್ಲೆಯ ಮುದನೂರು ಎಂಬ ಗ್ರಾಮದಲ್ಲಿದ್ದ ಕಾಮಯ್ಯ ಮತ್ತು ಶಂಕರಿ ಎಂಬ ದಂಪತಿಗಳ ಮಗನಾಗಿ ಜನಿಸಿ ಮನೆತನದ ಉದ್ಯೋಗವಾದ ನೇಯ್ಗೆಯನ್ನು ಮಾಡುತ್ತಿದ್ದು ಒಮ್ಮೆ ಶ್ರೀಶೈಲಕ್ಕೆ ಹೋಗಿ ಅರಣ್ಯದಲ್ಲಿ ತಪಸ್ಸನ್ನಾಚರಿಸಿದರು. ಕಾಡಿನಲ್ಲಿನ ಅನೇಕ ಜನರು ಮೃಗಗಳ ಬೇಟೆಯಾಡಿ ಬದುಕುತ್ತಿರಲು ಅವರಿಗೆ ಅಹಿಂಸೆಯನ್ನು ಬೋಧಿಸಿದವರು. ಒಮ್ಮೆ ನಂದಿ ಎಂಬ ಗ್ರಾಮಕ್ಕೆ ಬಂದು ಅಲ್ಲಿನ ವೈಷ್ಣವರನ್ನು ವಾದದಲ್ಲಿ ಗೆದ್ದು ಅಲ್ಲಿದ್ದ ಮುಕುಂದ ಮೂರ್ತಿಯನ್ನು ತೆಗೆಸಿ ಶಿವಲಿಂಗವನ್ನು ಸ್ಥಾಪಿಸಿ ಅದಕ್ಕೆ ರಾಮೇಶ್ವರಲಿಂಗ ಎಂದು ಹೆಸರಿಟ್ಟು, ಅಲ್ಲಿನ ವೈಷ್ಣವರನ್ನೆಲ್ಲ ವೀರಶೈವರನ್ನಾಗಿ ಮಾಡಿದರು. ನಂತರ ಗೌಡಗೆರೆ ಎಂಬಲ್ಲಿಗೆ ಬಂದು ಗ್ರಾಮದ ಮುಖಂಡರಾದ ಮುದ್ದಯ್ಯ ಮತ್ತು ಅವರ ಊರಿನಲ್ಲಿದ್ದ ಒಕ್ಕಲಿಗರಿಗೆಲ್ಲ ವೀರಶೈವ ದೀಕ್ಷೆ ಕೊಟ್ಟರು. ಪೊಟ್ಟಲಕೆರೆ ಎಂಬ ಊರಿನಲ್ಲಿ ಕೆಲಕಾಲವಿದ್ದು ಅನೇಕರಿಗೆ ದೀಕ್ಷೆ ನೀಡಿದರು. ಅಲ್ಲಿನ ಜನರು ಒಂದು ಮಠವನ್ನೇ ಕಟ್ಟಿಕೊಟ್ಟರು. ಅಲ್ಲಿ ಕೆಲವು ಕಾಲ ಇದ್ದು ಮತ ಪ್ರಚಾರ ಮಾಡಿ ತನ್ನ ಊರಿಗೆ ಮರಳಿದರು.

ಮುದನೂರಿನಲ್ಲಿ ವಾಸವಾಗಿರುತ್ತ ನೇಯ್ಗೆ ಕಾಯಕ ಮಾಡುತ್ತ ತಾನೂ ಶಿವಭಕ್ತಿ ಪಾರಮ್ಯದಲ್ಲಿ ಸುಖಿಯಾಗಿ, ಇತರರಿಗೂ ವೀರಶೈವ ದೀಕ್ಷೆ ಕೊಡುತ್ತ ಇರುವಾಗ ಜೈನರು ಆತನಿಗೆ ಬಹಳಷ್ಟು ಕಿರುಕುಳವನ್ನು ಕೊಡುತ್ತಿದ್ದರು. ಆಗ ಜೈನ ಧರ್ಮ ಬಹಳ ಶಿಥಿಲವಾಗಿದ್ದು ಜೈನ ಧರ್ಮೀಯರಿಗೂ ವೀರಶೈವರಿಗೂ ಸಂಘರ್ಷ ನಡೆಯುತ್ತಿತ್ತು. ಕಾಲಾನಂತರದಲ್ಲಿ ಅಲ್ಲಿಯ ಜೈನರೆಲ್ಲರೂ ವೀರಶೈವರಾದರು. ಜಿನಾಲಯದಲ್ಲಿ ದೇವರ ದಾಸಿಮಯ್ಯನು ರಾಮನಾಥ ಲಿಂಗವನ್ನು ಸ್ಥಾಪಿಸಿದನು.

ಆದರ್ಶ ಪತ್ನಿ ಸಿಕ್ಕರೆ ಮದುವೆಯಾಗುವೆನೆಂದು ಹುಡುಕುತ್ತಿದ್ದ ದೇವರ ದಾಸಿಮಯ್ಯನಿಗೆ ದುಗ್ಗಳೆ ಎಂಬ ಆದರ್ಶ ಪತ್ನಿಯೇ ಸಿಕ್ಕಳು. ಆತ 12 ವರ್ಷಗಳ ವಿಶೇಷ ಪರಿಶ್ರಮದಿಂದ ಒಂದು ರೇಷ್ಮೆಯ ಬಟ್ಟೆಯನ್ನು ನೇಯ್ದು ಸಿದ್ಧಾಪುರದ ಸಂತೆಗೆ ಮಾರಲು ಒಯ್ದ. ಮಾರಲಾಗದೆ ವಾಪಸ್ಸು ತರುವಾಗ ಓರ್ವ ಜಂಗಮ ಮಳೆಯಿಂದ ತೋಯ್ದುಕೊಂಡು ಗಿಡದ ಕೆಳಗೆ ನಡುಗುತ್ತಿರುವುದನ್ನು ನೋಡಿ ದಾಸಿಮಯ್ಯ ಆ ಬೆಲೆಬಾಳುವ ವಸ್ತ್ರವನ್ನು ಕೊಟ್ಟ. ಆತನೋ ಆ ವಸ್ತ್ರವನ್ನು ಹಲವು ತುಂಡುಗಳನ್ನಾಗಿ ಮಾಡಿ ಕಾಲಿನ ಹುಣ್ಣಿಗೆ ಕಟ್ಟಿದ; ಮೈಗೆ ಸುತ್ತಿಕೊಂಡ. ದಾಸಿಮಯ್ಯ ವಿಚಲಿತನಾಗಲಿಲ್ಲ.

ಕೋಪಗೊಳ್ಳಲಿಲ್ಲ. ಆ ಜಂಗಮನನ್ನು ಕರೆದೊಯ್ದು ಆತನನ್ನು ಉಪಚರಿಸಲು ಹೇಳಿದ. ದುಗ್ಗಳೆಯೂ ಅಷ್ಟೇ ಪ್ರಶಾಂತ ಮನದಿಂದ ಉಪಚರಿಸಿದಳು. ಇದರಿಂದ ಸುಪ್ರೀತನಾದ ಜಂಗಮನು ಒಂದು ಹಿಡಿ ಧಾನ್ಯವನ್ನು ಕೊಟ್ಟು ಅದನ್ನು ಅವರ ಧಾನ್ಯದ ಕಣಜದಲ್ಲಿ ಹಾಕಲು ತಿಳಿಸಿದನು. ಹಾಗೆ ಮಾಡುತ್ತಲೇ ಧಾನ್ಯವು ವೃದ್ಧಿಯಾಯಿತಲ್ಲದೆ ಸಂಪತ್ತು ತುಂಬಿ ತುಳುಕಿತು. ಅದರಿಂದ ದಂಪತಿಗಳಿಬ್ಬರು ಇನ್ನಷ್ಟು ಸ್ಫೂರ್ತಿಗೊಂಡು ದಾಸೋಹ ಕಾರ್ಯವನ್ನು ನಡೆಸುತ್ತಿದ್ದರು.

ಜಯಸಿಂಹನ ಪರಿವರ್ತನೆ

ಪೊಟ್ಟಲಕೆರೆಯಲ್ಲಿದ್ದ ದೇಸಿಂಗ ರಾಜ (ಜಯಸಿಂಹ 1008 - 1040) ನ ಹೆಂಡತಿ ಸುಗ್ಗಲವ್ವೆ : ಪತಿ ಜೈನ ಧರ್ಮೀಯ. ಆದರೆ ಸುಗ್ಗಲವ್ವೆಯು ಗುಪ್ತವಾಗಿ ಶಿವಭಕ್ತಿಯನ್ನು ಆಚರಿಸುತ್ತಿದ್ದಳು. ನಂತರದಲ್ಲಿ ದೇವರ ದಾಸಿಮಯ್ಯನಿಂದ ದೀಕ್ಷೆಯನ್ನು ಸ್ವೀಕರಿಸಿದಳು. ಆಗ ಜೈನರು ಆಕ್ಷೇಪಿಸಿದರು. ಪತಿ ಜಯಸಿಂಹನು. "ನಾನು ಜಿನ ಧರ್ಮೀಯ. ನೀನು ಪತಿಯ ಧರ್ಮವನ್ನೇ ಅನುಸರಿಸಬೇಕು" ಎಂದನು. ಆಗ ಆಕೆ, "ನನ್ನ ಗುರುವಾದ ದೇವರ ದಾಸಿಮಯ್ಯನನ್ನು ವಾದದಲ್ಲಿ ಸೋಲಿಸಿದರೆ ನಾನು ಜಿನಮತವನ್ನೇ ಅನುಸರಿಸುವೆ." ಎಂದು ತಿಳಿಸಿದಳು. ಆಗ ರಾಜನು ವಿದ್ವತ್ ಸಭೆಯನ್ನು ಏರ್ಪಡಿಸಿದನು. ಆ ಸಭೆಯಲ್ಲಿ ದಾಸಿಮಯ್ಯನು ಜೈನರು ಮಾತ್ರವಲ್ಲ ಇನ್ನೂ ಹಲವಾರು ಮತ ಪಂಥಗಳವರನ್ನು ವಾದದಲ್ಲಿ ಸೋಲಿಸಿದನು. ಜಯಸಿಂಹನು ರಾಜಪರಿವಾರ ಸಹಿತವಾಗಿ ವೀರಶೈವನಾದನು, ಇಪ್ಪತ್ತು ಸಾವಿರ ಜೈನರು ವೀರಶೈವರಾದರು.

ಮುದನೂರಿನಲ್ಲಿಯೇ ಪತ್ನಿ ಸಹಿತ ವಾಸವಿದ್ದು ಕಡೆಯಲ್ಲಿ ಅದೇ ಊರಿನಲ್ಲಿಯೇ ದಾಸಿಮಯ್ಯನು ಶಿವೈಕ್ಯನಾದನು. ಈತನ ಕಾಲ ಸುಮಾರು 1040 [ಶಿವಶರಣ ಕಥಾ ರತ್ನ ಕೋಶ. ಪುಟ 194-196]

ಶಿವಶರಣ ಕಥಾರತ್ನ ಕೋಶದ ಸಂಪಾದಕರಾದ ಶ್ರೀ ತ.ಸು.ಶಾಮರಾಯರು ಕಡೆಯದಾಗಿ. "ದೇವರ ದಾಸಿಮಯ್ಯನು ವಚನಕಾರ, ರಾಮನಾಥ ಅಂಕಿತ" ಎಂದು ಲೇಖನವನ್ನು ಮುಗಿಸಿದ್ದಾರೆ. ಇದೇ ಸಂಪಾದಕರು ಜೇಡರ ದಾಸಯ್ಯ ಎಂಬ ಬಗ್ಗೆಯೂ ಬರೆದಿದ್ದು (ಪುಟ 162) ದೇವರ ದಾಸಿಮಯ್ಯ ಮತ್ತು ಜೇಡರ ದಾಸಯ್ಯ ಉಭಯತರೂ ಒಂದೇ ಎಂಬರ್ಥದಲ್ಲಿ ಬರೆದಿದ್ದಾರೆ. ಆದರೆ ಒಂದು ಮಹತ್ವಪೂರ್ಣ ಪ್ರಸಂಗವು ಜೇಡರ ದಾಸಯ್ಯನ ಕುರಿತು ಇರುವ ವಿವರದಲ್ಲಿದ್ದು ಇದು ಎಷ್ಟು ಜನ ಸಾಹಿತಿಗಳು / ಸಂಶೋಧಕರ ಗಮನಕ್ಕೆ ಬಂದಿದೆಯೋ ತಿಳಿಯುತ್ತಿಲ್ಲ.

"ಮುದನೂರಿನ ವಿಪ್ರರು ತಮ್ಮ ರಾಮನಾಥ ಲಿಂಗದ ಬಳಿಗೆ ಬರುವ ಈತನನ್ನು (ಜೇಡರ ದಾಸಯ್ಯ) ಗುಡಿಯ ಲಿಂಗಕ್ಕೆ ವೀರಶೈವರು ಕೈ ಮುಗಿಯುವುದಿಲ್ಲ" ಎಂದು ಹಂಗಿಸಲು, ಮರುದಿನ ಗುಡಿಯ ಬಾಗಿಲು ತೆರೆಯದೆ ಹೋಯಿತು. ಆಗ ಜೇಡರ ದಾಸಯ್ಯನ ಅನುಗ್ರಹದಿಂದ ಬಾಗಿಲು ತೆರೆಯಿತು." ಈ ಬಗ್ಗೆ ನಾನು ಮುಂದೆ ವಿಮರ್ಶೆ ಮಾಡುತ್ತೇನೆ.

ಗೊಂದಲಗಳು ಅನಗತ್ಯ

ದೇವರ ದಾಸಿಮಯ್ಯ, ಜೇಡರ ದಾಸಿಮಯ್ಯ ಬೇರೆ ಬೇರೆ ಎಂಬುದಕ್ಕೆ ಸಾಕಷ್ಟು ಸುಳಿವುಗಳು ಸಿಗುತ್ತಿದ್ದರೂ ತ.ಸು.ಶಾಮರಾಯರು ಆದಿಯಾಗಿ ಡಾ।ಎಲ್.ಬಸವರಾಜು ಅವರು ಸಹ ಗೊಂದಲಕ್ಕೆ ಒಳಗಾಗಿ, ದೇವರ ದಾಸಿಮಯ್ಯನೇ ವಚನಕಾರ ಎಂಬ ಭಾವ ತಳೆದಿದ್ದಾರೆ. ಈ ಗೊಂದಲಕ್ಕೆ ಕೆಳಗಿನ ಕಾರಣಗಳನ್ನು ಪಟ್ಟಿ ಮಾಡಬಹುದು.

1. ದೇವರ ದಾಸಿಮಯ್ಯ, ಜೇಡರ ದಾಸಿಮಯ್ಯ ಇಬ್ಬರೂ ಒಂದೇ ಊರಿನವರು-ಮುದನೂರಿನವರಾಗಿ, ಇದ್ದುದು. ಇಬ್ಬರ ಪತ್ನಿಯರ ಹೆಸರೂ ದುಗ್ಗಳೆ ಎಂದಿರುವುದು. ಇಬ್ಬರೂ ಬಾಲ್ಯದಿಂದಲೂ ತಮ್ಮ

ಊರಿನ ಅಧಿದೈವತವಾದ ರಾಮನಾಥನ ಭಕ್ತರೇ ಆದುದು.

2. ಬಹಳ ಜನ ಸಾಹಿತಿಗಳು, ಸಂಶೋಧಕರು, ಬರಹಗಾರರಿಗೆ ಶೈವ, ವೀರಶೈವ, ಲಿಂಗಾಯತದ ತಾತ್ತ್ವಿಕ ವ್ಯತ್ಯಾಸ, ಆಚರಣೆಗಳ ಭಿನ್ನತೆ ತಿಳಿಯದೆ ಇರುವುದು.

3. ಜಯಸಿಂಹನ ಕಾಲಕ್ಕೆ (1008 - 1040) ಇದ್ದ ದೇವರ ದಾಸಿಮಯ್ಯನು ವಚನಕಾರ ಎಂಬ ಬಗ್ಗೆ ಯಾರೋ ಮಹನೀಯರು ಮೊದಲು ಹೇಳಿದ್ದನ್ನು ನಂತರದ ಸಾಹಿತಿಗಳೆಲ್ಲರೂ ನನ್ನದೂ ಅದೇ ನನ್ನದೂ ಅದೇ ಎಂದು ಡಿಟೋ --॥-- ಹಾಕುತ್ತ ಬಂದಿರುವುದು.

ದೇವರ ದಾಸಿಮಯ್ಯ ಸ್ಥಾವರಲಿಂಗ ವಿರೋಧಿಯಲ್ಲ, ಬಹಳಷ್ಟು ಕಡೆ ವಿಷ್ಣು ಮೂರ್ತಿ ತೆಗೆದು ರಾಮನಾಥ ಲಿಂಗವನ್ನು ಜಿನಾಲಯಗಳಲ್ಲಿ ಜಿನ ಮೂರ್ತಿ ತೆಗೆದು ಸ್ಥಾವರ ಲಿಂಗಗಳನ್ನು ಸ್ಥಾಪಿಸಿದ್ದಾನೆ. ಆದರೆ ಜೇಡರ ದಾಸಯ್ಯನು ಲಿಂಗಾಯತ ಧರ್ಮ ಸ್ವೀಕರಿಸಿ ಊರಿಗೆ ಬಂದಾಗ ಕುತೂಹಲದಿಂದ ಬಾಲ್ಯದಲ್ಲಿ ತನ್ನ ಆರಾಧ್ಯ ದೇವತೆಯಾಗಿದ್ದ ರಾಮನಾಥನ ಗುಡಿಗೆ ಸಂದರ್ಶನಕ್ಕೆ ಬಂದು, ನಮಸ್ಕರಿಸದೆ ಇದ್ದಾಗ ವಿಪ್ರರು ವ್ಯಂಗ್ಯವಾಡಿರುವುದನ್ನು ಗಮನಿಸಿದರೆ ದೇವರ ದಾಸಿಮಯ್ಯ ಶೈವ / ವೀರಶೈವ; ಜೇಡರ ದಾಸಯ್ಯ ಇಷ್ಟಲಿಂಗ ನಿಷ್ಠಾಪರ ಲಿಂಗಾಯತ ಶರಣ ಎಂಬುದು ಮನದಟ್ಟಾಗುತ್ತದೆ.

ಶ್ರೀ ಗುರು ಬಸವಣ್ಣನವರು ಗುಡಿಶಾಹಿ (Temple craft) ಮತ್ತು ಪುರೋಹಿತಶಾಹಿ (Priest Craft) ಎರಡಕ್ಕೂ ವಿರೋಧಿ. ಹೀಗಾಗಿ ಅವರು ಮತ್ತು ಅವರ ಸಮಕಾಲೀನ ಶರಣ ಮಾರ್ಗಿಗಳು, ನಂತರದ ಬಸವ ಪಥಿಕ ಯೋಗಿಗಳು ಯಾರೂ ವೈಷ್ಣವ ಗುಡಿಯಲ್ಲಿ ಸ್ಥಾವರಲಿಂಗವನ್ನು ಸ್ಥಾಪಿಸುವ, ಜಿನಾಲಯಗಳನ್ನು ಶಿವಾಲಯಗಳನ್ನಾಗಿ ಪರಿವರ್ತಿಸುವ ಹೋರಾಟಕ್ಕೆ ತೊಡಗಿಯೇ ಇಲ್ಲ. ದೇಹವನ್ನು ದೇವಾಲಯವಾಗಿ ಮಾಡಿಕೊಳ್ಳಲು ಇಷ್ಟಲಿಂಗವನ್ನು ಕಟ್ಟಿದರು. ಆದ್ದರಿಂದ ವಿಷ್ಣು, ಜಿನರ ಆಲಯಗಳನ್ನು ಶಿವಾಲಯ ಮಾಡುವ ಸಂಘರ್ಷದಲ್ಲಿ ಶೈವರು, ವೀರಶೈವರು ತೊಡಗಿದ್ದರೇ ವಿನಾ ಲಿಂಗಾಯತ ಶರಣರು ಅಲ್ಲ. ದೇವರ ದಾಸಿಮಯ್ಯ ಏಕ ಶಿವೋಪಾಸಕ (Monodeitist), ಜೇಡರ ದಾಸಯ್ಯ ಶರಣನಾದ ಬಳಿಕ ಏಕದೇವೋಪಾಸಕ (Monotheist). ಏಕದೇವೋಪಾಸನೆ ಗುರು ಬಸವ ಸಂಸ್ಥಾಪಿತ ಲಿಂಗಾಯತ ಧರ್ಮದ ಮುಖ್ಯ ತತ್ತ್ವ.

ದೇವರ ದಾಸಿಮಯ್ಯನು ಜಯಸಿಂಹನ ಪತ್ನಿ ಸುಗ್ಗಲೆಗೆ ಮಾತ್ರ ಶೈವದೀಕ್ಷೆ ಕೊಟ್ಟಿದ್ದ. ಪತಿ ಜಯಸಿಂಹನು ಇನ್ನೂ ಜೈನಧರ್ಮದಲ್ಲಿಯೇ ಇದ್ದ. ಹೀಗೆ ಶಿವಭಕ್ತಿ ವೈಯಕ್ತಿಕ ಆಯ್ಕೆಯಾಗಿತ್ತು, ಶೈವ ಮಾರ್ಗವು ಒಂದು ಆಧ್ಯಾತ್ಮಿಕ ಪಂಥ (Spiritual cult) ವಾಗಿತ್ತು. ಲಿಂಗಾಯತ ಧರ್ಮದಲ್ಲಿ ಹಾಗೆ ಅವಕಾಶವಿರಲಿಲ್ಲ. ಪತಿ, ಪತ್ನಿ ಕುಟುಂಬ ಪರಿವಾರ ಎಲ್ಲರೂ ಒಂದೇ ಆಚರಣೆಯಲ್ಲಿರಬೇಕಾಗಿತ್ತು. ಒಂದು ವೇಳೆ ಒಬ್ಬರು ದೀಕ್ಷೆ ಪಡೆದರೆ ಅವರು ದೀಕ್ಷೆ ಹೊಂದದ ಭವಿಗಳಿಂದ ದೂರವಿರಬೇಕಾಗಿತ್ತು. ಇದರಿಂದ ಮನವರಿಕೆಯಾಗುವುದೇನೆಂದರೆ ದೇವರ ದಾಸಿಮಯ್ಯ ಶಿವಭಕ್ತ, ಶೈವ ಮಾರ್ಗ ಅನುಸಾರಿಯೇ ವಿನಾ ಲಿಂಗಾಯತ ಶರಣನಾಗಿರಲಿಲ್ಲ. ಜೈನರನ್ನು ವಾದದಲ್ಲಿ ಸೋಲಿಸಿದ ದಾಸಿಮಯ್ಯ ಜಯಸಿಂಹನಿಗೆ ಶೈವದೀಕ್ಷೆ ಕೊಟ್ಟ. ಅವನ ರಾಜಧಾನಿಯಲ್ಲಿದ್ದ ಏಳು ನೂರು ಬಸದಿಗಳು ಶಿವಾಲಯಗಳಾದವು. (ಶಿವಶರಣ ಕಥಾರತ್ನ ಕೋಶ 196).

ಬಸದಿಗಳನ್ನು ನಿರ್ಮೂಲನ ಮಾಡುವುದಾಗಲೀ, ಅಲ್ಲಿರುವ ಅರ್ಹಂತರ ಮೂರ್ತಿ ತೆಗೆದು ಲಿಂಗಗಳನ್ನು ಸ್ಥಾಪಿಸುವುದು ಲಿಂಗಾಯತ ಧರ್ಮದ ಪ್ರವೃತ್ತಿಯೇ ಅಲ್ಲ. ಉಗ್ರ ಶಿವೋಪಾಸಕ (ವೀರಶೈವ)ರು ಮಾತ್ರ ಹಾಗೆ ಮಾಡುತ್ತಿದ್ದುದು. ಧರ್ಮಪಿತ ಬಸವಣ್ಣನವರ ಲಭ್ಯವಿರುವ ಸಮಗ್ರ ವಚನಗಳಲ್ಲಿ ಒಂದೇ ಒಂದು ವಚನದಲ್ಲಿ (ಬಸವ ವಚನ ದೀಪ್ತಿ 1159, ಅಂಗ ಲಿಂಗ ಸಂಗ ಸಾರಾಯ) ವೀರಶೈವ ಪದ ಬಳಕೆಯಾಗಿದೆ. ಅದರಲ್ಲಿ ಗುರು ಬಸವಣ್ಣನವರು ವೀರಶೈವರು ಲಿಂಗಾಯತರಾದ ಬಳಿಕ. ಏಕ (ಇಷ್ಟ) ಲಿಂಗ ನಿಷ್ಠಾಪರರಾಗಿ ಇರಬೇಕೆಂದು ತಿಳಿ ಹೇಳುತ್ತಾರೆ.

ಈ ಎಲ್ಲ ವಿಶ್ಲೇಷಣೆಯಿಂದ ನಾವು ಈಗ ತಳೆಯುತ್ತಿರುವ ನಿರ್ಧಾರವೇನೆಂದರೆ ದೇವರ ದಾಸಿಮಯ್ಯ ಜಯಸಿಂಹನ ಕಾಲದವನು (1040) ಜೇಡರ ದಾಸಯ್ಯನು ಗುರು ಬಸವಣ್ಣನವರ ಸಮಕಾಲೀನ, ಅನುಭವ ಮಂಟಪದ ಶರಣ. ಇನ್ನು ಒಂದು ಸಂದೇಹ ನಮಗೆ ಬಲವಾಗಿ ಉಳಿಯುತ್ತದೆ. ಅದೆಂದರೆ, ಜೇಡರ ದಾಸಯ್ಯ ವಚನಕಾರನೇ ಆಗಿದ್ದು ಅನುಭವ ಮಂಟಪದ ಶರಣನೇ ಆಗಿದ್ದರೆ ಲಭ್ಯವಿರುವ ಆತನ 177 ವಚನಗಳಲ್ಲಿ ಗುರು ಬಸವಣ್ಣ, ಚನ್ನಬಸವಣ್ಣ, ಅಲ್ಲಮ ಪ್ರಭು ಮುಂತಾದವರ ಹೆಸರುಗಳನ್ನು ಏಕೆ ಪ್ರಸ್ತಾಪಿಸಿಲ್ಲ? ಡೋಹರ ಕಕ್ಕಯ್ಯನವರ ಹೆಸರನ್ನು ಪ್ರಸ್ತಾಪಿಸಿರುವ ಜೇಡರ ದಾಸಯ್ಯ ಈ ಎಲ್ಲ ಶರಣರ ನೇತಾರರಾದ ಬಸವಣ್ಣನವರ ಹೆಸರನ್ನು ಏಕೆ ಉಲ್ಲೇಖಿಸಿಲ್ಲ ?

ವಚನ ಸಾಹಿತ್ಯವು ಬರೆಯಲ್ಪಟ್ಟುದೆಲ್ಲವೂ ಪೂರ್ಣ ರೂಪದಲ್ಲಿ ಉಳಿದಿಲ್ಲ; ಮತ್ತು ಕೈಗೆ ಲಭ್ಯವಾಗಿಲ್ಲ. ಹೀಗಾಗಿ ಪ್ರೊ.ರಾಚಪ್ಪನವರೂ ಅಭಿಪ್ರಾಯ ಪಡುವಂತೆ ಜೇಡರ ದಾಸಿಮಯ್ಯನ ಲಭ್ಯವಿರುವ ವಚನಗಳಲ್ಲಿ ಅಷ್ಟಾವರಣ, ಪಂಚಾಚಾರ, ಷಟಸ್ಥಲ ಮುಂತಾದ ಸಂಗತಿಗಳನ್ನು ಬಸವಾದಿ ಪ್ರಮಥರು ಪ್ರಸ್ತಾಪಿಸಿರುವ ಪರಿಕಲ್ಪನೆಗಳಂತೆ ಪ್ರಸ್ತಾಪಿಸಿಲ್ಲ. ಬಹುಶಃ ಆತ ಬರೆದ ಎಲ್ಲ ವಚನಗಳೂ ಲಭ್ಯವಾಗಿಲ್ಲ ಎಂದೇ ಊಹಿಸಬಹುದು. ಜೇಡರ ದಾಸಯ್ಯನು ಬಸವಾದಿ ಪ್ರಮಥರನ್ನು ಏಕೆ ಸ್ತುತಿಸಿಲ್ಲ ಅಥವಾ ಹೆಸರಿಸಿಲ್ಲ ಎಂಬ ಪ್ರಶ್ನೆಗೆ ದುಗ್ಗಳೆಯ ವಚನಗಳಲ್ಲಿ ಉತ್ತರವು ಸಿಗುತ್ತದೆ. ಬಹುಶಃ ಅನುಭವ ಮಂಟಪದಲ್ಲಿ "ನೀನೂ ತತ್ತ್ವಗಳನ್ನು ಪ್ರತಿಪಾದಿಸು ತಾಯಿ" ಎಂದು ಗುರು ಬಸವಣ್ಣನವರು, ಪ್ರಭುದೇವರು ಮುಂತಾದವರು ನುಡಿದಾಗ, "ಭಕ್ತನಾದಡೆ ಬಸವಣ್ಣನಂತಾಗಬೇಕು

ಜಂಗಮವಾದಡೆ ಪ್ರಭು ದೇವರಂತಾಗಬೇಕು
ಯೋಗಿಯಾದಡೆ ಸಿದ್ಧರಾಮಯ್ಯನಂತಾಗಬೇಕು
ಭೋಗಿಯಾದಡೆ ಚನ್ನಬಸವಣ್ಣನಂತಾಗಬೇಕು
ಐಕ್ಯನಾದಡೆ ಅಜಗಣ್ಣನಂತಾಗಬೇಕು.
ಇಂತಿವರ ಕಾರುಣ್ಯ ಪ್ರಸಾದಕೊಂಡು
ಸತ್ತ ಹಾಗಿರಬೇಕಲ್ಲದೆ ತತ್ತ್ವದ ಮಾತು ಎನಗೇಕಯ್ಯಾ
ದಾಸಯ್ಯ ಪ್ರಿಯ ರಾಮನಾಥಾ? -701, ಪುಟ 229, ಸಂ.5

ಎಂದು ಹೇಳಿ, ಇಂಥ ಮಹಾನುಭಾವರ ಮುಂದೆ ಸತ್ತ ಹಾಗಿರಬೇಕಲ್ಲದೆ ತತ್ತ್ವದ ಮಾತು ನನಗೇಕೆ?" ಎಂದು ದುಗ್ಗಳೆ ಉತ್ತರಿಸಿದಂತೆ ಕಾಣುತ್ತದೆ.

ವಚನಕಾರ ಜೇಡರ ದಾಸಯ್ಯ, ಆತ ಜೇಡರ (ನೇಕಾರ) ಕುಲದವನು; ಜಾಡರು ಹತ್ತಿಯ ಬಟ್ಟೆ ನೇಯುವವರು. ದೇವರ ದಾಸಿಮಯ್ಯನು ದೇವಾಂಗ ಕುಲದವನು; ಇವರು ರೇಷ್ಮೆ ಬಟ್ಟೆ ನೇಯುವವರು. ದೇವರ ದಾಸಿಮಯ್ಯನ ಹೆಸರು ಮತ್ತು ಜೀವನದ ಘಟನೆಗಳು ಪರಸ್ಪರ ಕಲೆತು ಕಲಸು ಮೇಲೋಗರವಾಗಿ ಗೊಂದಲವು ಉಂಟಾಗಿದೆ. ಈ ಗೊಂದಲವನ್ನು ನಿವಾರಿಸಿದ ಸಂಶೋಧಕರು ಹೆಚ್.ದೇವೀರಪ್ಪನವರು. ಕಣ್ಣು ಮುಚ್ಚಿಕೊಂಡು ಯಾರೋ (ಪ್ರಥಮರು) ಮಾಡಿದ ಊಹೆಯನ್ನೇ ಪ್ರತಿಪಾದಿಸುತ್ತ ಅನೇಕ ಸಾಹಿತಿಗಳು, ಸಂಶೋಧಕರು ಸಾಗಿ ಬಂದರು. ಲಿ॥ಶರಣ.ಹೆಚ್.ದೇವೀರಪ್ಪನವರು ಅಂಥ ಕೆಲವು ಊಹೆಗಳನ್ನು ಮರುಪರೀಕ್ಷೆಗೆ ಒಳಪಡಿಸಿ, ಸತ್ಯವನ್ನು ನಿರ್ಭಯವಾಗಿ ಪ್ರತಿಪಾದಿಸಿದ್ದಾರೆ.

1. ಉಜ್ಜಯಿನಿಯ ಮರುಳು ಸಿದ್ಧರ ದೇವಾಲಯದಲ್ಲಿ ಇರುವ ಗುರು ಬಸವಣ್ಣನವರ ಮೂರ್ತಿಯನ್ನು ಸಂಶೋಧಿಸಿದ್ದು.

2. ಗುರು ಬಸವಣ್ಣನವರಿಗೆ ಇದ್ದುದು ಇಬ್ಬರು ಪತ್ನಿಯರಲ್ಲ, ಒಬ್ಬಳೇ ಪತ್ನಿ, ನೀಲಗಂಗಾ ಆಕೆಯ ಹೆಸರು.

3. ವಚನಕಾರ ಜೇಡರ ದಾಸಿಮಯ್ಯನೇ ಹೊರತು ದೇವರ ದಾಸಿಮಯ್ಯನಲ್ಲ.

1974ರಲ್ಲಿ ಶರಣ ಹೆಚ್.ದೇವೀರಪ್ಪ ಮತ್ತು ಪ್ರೊ.ಶರಣ.ಆರ್.ರಾಚಪ್ಪ ಸೇರಿ ಬಹಳ ಮಹತ್ವಪೂರ್ಣವಾದ ಒಂದು ಕೃತಿ "ಜೇಡರ ದಾಸಿಮಯ್ಯನ ವಚನಗಳು." ಹೊರತಂದಿದ್ದಾರೆ. ತರಳ ಬಾಳು ಪ್ರಕಾಶನದಿಂದ ಪ್ರಕಟಗೊಂಡು, ಬೆಂಗಳೂರಿನಲ್ಲಿ ತರಳುಬಾಳು ಹುಣ್ಣಿಮೆ ನಡೆದಾಗ ಆ ಕೃತಿ ಬಿಡುಗಡೆಗೊಂಡಿದೆ. ಆಳವಾದ ಮತ್ತು ಎಲ್ಲ ಪಾಠಾಂತರಗಳಿಂದ ಕೂಡಿದ ಅಧಿಕೃತ ಕೃತಿಯಾಗಿ ಹೊರಹೊಮ್ಮಿದೆ. ಈ ಕೃತಿಯಲ್ಲಿ ಪ್ರಕಟಗೊಂಡ ಕೆಲವು ಮಾಹಿತಿಗಳು ಅತ್ಯಂತ ಮಹತ್ವಪೂರ್ಣವಾಗಿವೆ.

1. ಕ್ರಿ.ಶ.1928ರಲ್ಲಿ ಲಿಂ.ಫ.ಗು.ಹಳಕಟ್ಟಿಯವರು ರಾಮನಾಥ ಅಂಕಿತದ ವಚನಗಳನ್ನು ಬೆಳಕಿಗೆ ತಂದವರು. ದೇವರ ದಾಸಿಮಯ್ಯನ ವಚನಗಳು ಎಂಬ ಶೀರ್ಷಿಕೆಯನ್ನು ಅವರು ಕೊಟ್ಟರು.

2. ಇದೇ ವಚನಗಳೇ ಶ್ರೀ ಜ.ಚ.ನಿ ಅವರಿಂದ "ದೇವರ ದಾಸಿಮಾರ್ಯ ಪ್ರಶಸ್ತಿ" ಯಲ್ಲಿ ಪ್ರಕಟಗೊಂಡಿವೆ.

3. ಶ್ರೀ ಬಿ.ಎಸ್.ಸಣ್ಣಯ್ಯ ಅವರು ಪ್ರಬುದ್ಧ ಕರ್ನಾಟಕದ 46-4ನೇ ಸಂಚಿಕೆಯಲ್ಲಿ ದೇವರ ದಾಸಿಮಯ್ಯನ ವಚನಗಳನ್ನು ಅಚ್ಚುಹಾಕಿದ್ದಾರೆ.

4. ಡಾ॥ಎಲ್.ಬಸವರಾಜು ಅವರು 9 ಓಲೆಯ ಗ್ರಂಥಗಳ ನೆರವಿನಿಂದ 1970ರಲ್ಲಿ "ದೇವರ ದಾಸಿಮಯ್ಯನ ವಚನಗಳು" ಎಂಬ ಶೀರ್ಷಿಕೆಯ ಕೆಳಗೆ ಪ್ರಕಟಿಸಿದ್ದಾರೆ. ಅವರು ವಚನಕಾರರ ಹೆಸರನ್ನು ಕುರಿತು. ಜೇಡರ ದಾಸಿಮಯ್ಯ ಎಂಬ ರೂಪವೇ ಪ್ರಾಚೀನ ಹಾಗೂ ನಿರ್ದುಷ್ಟ ಎಂದಿದ್ದರೂ "ಜೇಡರ ದಾಸಮಯ್ಯ, ಮುದನೂರು ದಾಸಮಯ್ಯ, ದೇವರ ದಾಸಮಯ್ಯ. ಈ ಮೂರು ಬಸವ ಪೂರ್ವ ಪ್ರಸಿದ್ಧ ವಚನಕಾರನಾದ ಒಬ್ಬನೇ ವ್ಯಕ್ತಿಗೆ ಅನ್ವಯಿಸುವುದೆಂಬುದು ಸುನಿಶ್ಚಿತ." ಎಂದಿದ್ದಾರೆ.

5. ಆಚಾರ್ಯ ಡಿ.ಎಲ್.ನರಸಿಂಹಾಚಾರ್ ಅವರು ಜೇಡರ ಮತ್ತು ದೇವರ ದಾಸಿಮಯ್ಯಗಳು ಅಭಿನ್ನರು ಎಂದು ಭಾವಿಸಿದ್ದಾರೆ. ಆದರೂ ಸೂಕ್ಷ್ಮವಾಗಿ ಪರಿಶೀಲಿಸಿದರೆ ಅವರ ಒಲವು ಜೇಡರ ದಾಸಿಮಯ್ಯನ ಹೆಸರಿಗೇ ಇದೆ.

ಈ ವಿವರಗಳನ್ನು ನೀಡಿದ ದೇವೀರಪ್ಪ ಮತ್ತು ರಾಚಪ್ಪನವರು ಬಹಳ ಮಹತ್ವಪೂರ್ಣ ಅಧ್ಯಯನದ ಫಲವನ್ನು ಕೊಟ್ಟಿದ್ದಾರೆ.

"ಈ ಸಂದೇಹವು ರಾಮನಾಥಾಂಕಿತ ವಚನಗಳಿರುವ ತಾಳೆಯೋಲೆಯ ಕಟ್ಟುಗಳನ್ನು ಪರಿಶೀಲಿಸಿದರೆ ತನಗೆ ತಾನೇ ಪರಿಹಾರವಾಗುವುದು. ವಚನ ಸಂಗ್ರಹಗಳಿರುವ ಕಟ್ಟುಗಳಲ್ಲಿ ಪ್ರತಿಕಾರರು ಇವು ಇಂತಿಂಥವರ ವಚನಗಳೆಂದು ವಚನಾರಂಭದಲ್ಲಿಯೂ ಮೊದಲ ವಚನವಿರುವ ಓಲೆಯ ಅಂಚಿನಲ್ಲಿಯೂ ವಚನಗಳ ಮುಕ್ತಾಯದಲ್ಲಿಯೂ ಬರೆಯುವುದು ವಾಡಿಕೆ." ಎಂದು (ಪುಟ X) ಹೇಳಿ, 5 ಹಸ್ತಪ್ರತಿಗಳ ಮೇಲೆ 3ರಲ್ಲಿ ಜೇಡರ ದಾಸಿಮಯ್ಯಗಳ ವಚನ ಎಂದು, 2 ಪ್ರತಿಗಳ ಮೇಲೆ ದಾಸಿಮಯ್ಯಗಳ ವಚನ ಎಂದು ಇರುವುದನ್ನು ದೃಢಪಡಿಸಿ, ದೇವರ ದಾಸಿಮಯ್ಯನ ವಚನಗಳು ಎಂಬ ಶೀರ್ಷಿಕೆ ಯಾವ ಒಂದು ಪ್ರತಿಯಲ್ಲಿಯೂ ಇಲ್ಲ; ಪ್ರತಿಕಾರರ ಹೇಳಿಕೆಯಂತೆ ರಾಮನಾಥಾಂಕಿತ ವಚನಗಳ ಕರ್ತೃ ಜೇಡರ ದಾಸಿಮಯ್ಯನೇ ಹೊರತು ದೇವರ ದಾಸಿಮಯ್ಯ ಅಲ್ಲ." ಎಂದು ದೃಢ ಪಡಿಸಿದ್ದಾರೆ. ಇಬ್ಬರು ದಾಸಿಮಯ್ಯಗಳು ಮುದನೂರಿನವರೇ ಆದುದರಿಂದ ಮತ್ತು ಅವರ ಪತ್ನಿಯರ ಹೆಸರುಗಳು ದುಗ್ಗಳೆ ಎಂದೇ ಇರುವುದರಿಂದ ಸಾಕಷ್ಟು ಗೊಂದಲ ಹಿಂದಿನ ಕವಿಗಳಿಂದ ಇಂದಿನ ಸಾಹಿತಿಗಳವರೆಗೆ ಸಾಗಿ ಬಂದಿದೆ. ವಚನಕಾರನ ಹೆಸರು ನಿರ್ಧರಿಸುವಲ್ಲಿ ದೇವೀರಪ್ಪ, ರಾಚಪ್ಪನವರು ಖಚಿತ ಅಭಿಪ್ರಾಯ ನೀಡಿದ್ದಾರಾದರೂ ಜೀವನ ಚರಿತ್ರೆಯ ವಿಷಯದಲ್ಲಿ ಪುನಃ ಉಭಯತರ ಚರಿತ್ರೆಗಳನ್ನು ಸಂಕರಗೊಳಿಸಿದ್ದಾರೆ. ನಾನು ಪ್ರಸ್ತುತ ಲೇಖನದಲ್ಲಿ ಆಗಲೇ ವಸ್ತ್ರವನ್ನು ಕೊಟ್ಟು ತವನಿಧಿಯನ್ನು ಪಡೆದವನು ದೇವರ ದಾಸಿಮಯ್ಯ ಎಂಬುದನ್ನು ವಿವರವಾಗಿ ಬರೆದಿದ್ದೇನೆ. ದೇವೀರಪ್ಪ- ರಾಚಪ್ಪನವರು

ಈ ಪ್ರಸಂಗವನ್ನು ಜೇಡರ ದಾಸಿಮಯ್ಯನಿಗೆ ಜೋಡಿಸಿದ್ದಾರೆ.

ಶಂಕರ ದಾಸಿಮಯ್ಯನೆಂಬ ಓರ್ವ ಶೈವ ಬ್ರಾಹ್ಮಣನು ಇಳಕಲ್ ಎಂದು ಕರೆಯಲ್ಪಡುವ ಕಂದುಶಿಲೆಯವನು. ಅವನ ಮೊದಲ ಹೆಸರು ಗೋವಿಂದ ಭಟ್ಟ, ಅವನ ಹೆಂಡತಿ ಉಮ್ಮವ್ವೆಯೊಡನೆ ಕಾಶಿಕ್ಷೇತ್ರದ ಕಡೆ ಪ್ರಯಾಣ ಬೆಳೆಸಿದ. ದಾರಿಯಲ್ಲಿ ನವಿಲೆ ಎಂಬ ಗ್ರಾಮದಲ್ಲಿ ಜಡೆಯ ಶಂಕರನ ದೇವಾಲಯದಲ್ಲಿ ಬೀಡುಬಿಟ್ಟಿರುವಾಗ ಓರ್ವ ಜಂಗಮ(ಶೈವ ಸನ್ಯಾಸಿ)ನಿಂದ ವೀರಶೈವ ದೀಕ್ಷೆ ಪಡೆದು ಶಂಕರದಾಸನಾದ, ಅವನ ಪತ್ನಿಯ ಹೆಸರು ಶಿವದಾಸಿ ಎಂದಾಯಿತು. ಒಮ್ಮೆ ಮುದನೂರಿಗೆ ಬಂದು ರಾಮನಾಥ ದೇವಾಲಯದ ಬಳಿ ಬೀಡುಬಿಟ್ಟಾಗ ತನ್ನ ಶಿಷ್ಯನನ್ನು ಧಾನ್ಯ ಭಿಕ್ಷೆಗೆ ಹೋಗಲು ಸೂಚಿಸಿದ ಇದನ್ನು ತಿಳಿದ ದೇವರ ದಾಸಿಮಯ್ಯ ತನ್ನ ಬಳಿ ಅಪಾರ ಧಾನ್ಯ ಇರುವುದಾಗಿಯೂ, ತಾನೊಬ್ಬನೇ ಕೊಡುವುದಾಗಿಯೂ ತಿಳಿಸಿದಾಗ ಆ ಮಾತಿನಲ್ಲಿದ್ದ ಹಮ್ಮನ್ನು ಕಂಡು ಆ ತವ ನಿಧಿಯ ಸಂಪತ್ತು ಮಾಯವಾಗುವಂತೆ ಮಾಡಿದ. ಆಗ ದೇವರ ದಾಸಿಮಯ್ಯ ಕ್ಷಮೆ ಕೇಳಲು ಅದು ಮರಳಿ ಬಂದಿತು. ಇವನು ವೀರಶೈವವನ್ನು ಉಗ್ರವಾಗಿ ಪ್ರತಿಪಾದನೆ ಮಾಡಿದ. ಒಮ್ಮೆ ಅವನಿಗೆ ಕನಸು ಬಿದ್ದು ಅದರಲ್ಲಿ ಬೌದ್ಧನೊಬ್ಬನನ್ನು ತಾಗಿದಂತಾಗಲು, ಬೆಳಗೆದ್ದು ಶ್ರೀಗಿರಿಗೆ ಹೋಗಿ ದೇಹವನ್ನು ಅಗ್ನಿಗೆ ಒಪ್ಪಿಸಿ ಶಿವಸಾಯುಜ್ಯವನ್ನು ಪಡೆದನು. (ಶಿವಶರಣ ಕಥಾ ರತ್ನ ಕೋಶ. ಪುಟ 433).

ಒಂದೇ ಹೆಸರಿನ ಹಲವಾರು ಜನರು ಇರುವುದರಿಂದ ಕಾಲಮಾನವನ್ನು ನಿರ್ಧರಿಸಲಾಗದ ಗೊಂದಲಕ್ಕೆ ಬಹಳಷ್ಟು ಜನರು ಒಳಗಾಗಿದ್ದಾರೆ. ಪ್ರೊ.ರಾಚಪ್ಪನವರು 5 ಜನ ದಾಸಿಮಯ್ಯನವರುಗಳನ್ನು ಗುರುತಿಸಿದ್ದಾರೆ. 1.ದೇವರ ದಾಸಿಮಯ್ಯ 2.ವೀರಶಂಕರ ದಾಸಿಮಯ್ಯ 3.ಜೇಡರ ದಾಸಿಮಯ್ಯ 4.ಶಿವ ದಾಸಿಮಯ್ಯ 5.ಶಂಕರ ದಾಸಿಮಯ್ಯ.

ವೀರಶಂಕರ ದಾಸಿಮಯ್ಯನು ಕೋಪಿಷ್ಠನು, ಮತೀಯ ತೀವ್ರವಾದಿಯೂ ಆಗಿದ್ದ. ಈತ ಹುಟ್ಟು ಬ್ರಾಹ್ಮಣ. ಮುದನೂರಿಗೆ ಬಂದ ಈತ ರಾಮನಾಥ ದೇವಾಲಯದ ಮಗ್ಗುಲಲ್ಲೇ ಇರುತ್ತಾನೆ. ಧಾನ್ಯ ಭಿಕ್ಷೆತರಲು ಶಿಷ್ಯನಿಗೆ ಸೂಚಿಸುವನೇ ವಿನಾ ದೇವರ ದಾಸಿಮಯ್ಯನವರ ಮನೆಗೆ ಊಟಕ್ಕೆ ಹೋಗಲಿಲ್ಲ. ವೀರಶೈವ ದೀಕ್ಷೆ ಪಡೆದರೂ ಅವರಲ್ಲಿ ಪರಸ್ಪರ ಊಟೋಪಚಾರ ಇರುತ್ತಿರಲಿಲ್ಲ. ಸಾಂಪ್ರದಾಯಿಕವಾಗಿ ವೀರಶಂಕರ ದಾಸಿಮಯ್ಯ ಹುಟ್ಟಿದ್ದು ಬ್ರಾಹ್ಮಣರಲ್ಲಿ; ದೇವರ ದಾಸಿಮಯ್ಯ ಹುಟ್ಟಿದ್ದು ದೇವಾಂಗ ನೇಯ್ಗೆಯವರಲ್ಲಿ ಅರ್ಥಾತ್ ಶೂದ್ರರಲ್ಲಿ. ಆದ್ದರಿಂದಲೇ ದೇವರ ದಾಸಿಮಯ್ಯನ ಮನೆಯಿಂದ ಧಾನ್ಯ ಮಾತ್ರ ಪಡೆಯುತ್ತಾನೆ. ಇನ್ನೊಂದು ಬಹಳ ಮಹತ್ವದ ಅಂಶ; ವೀರಶೈವನಾಗಿದ್ದ ವೀರಶಂಕರ ದಾಸಿಮಯ್ಯ ಕನಸ್ಸಿನಲ್ಲಿ ಬೌದ್ಧನನ್ನು ಮುಟ್ಟಿಸಿಕೊಂಡ ಕಾರಣ, ಶ್ರೀಶೈಲಕ್ಕೆ ಹೋಗಿ ಅಗ್ನಿಯಲ್ಲಿ ಶರೀರವನ್ನು ದಹಿಸಿಕೊಳ್ಳುತ್ತಾನೆ. ವೀರಶೈವರಲ್ಲಿ ತಾವು ಹುಟ್ಟಿದ ಜಾತಿಯ ಪ್ರಕಾರ ಅಂತಿಮ ಸಂಸ್ಕಾರವಿತ್ತು ಅದೇ ಲಿಂಗಾಯತದಲ್ಲಿ ಮೂಲತಃ ಯಾವುದೇ ಜಾತಿಯವರಿರಲಿ ಅವರ ಶವಗಳನ್ನು ದಹಿಸುವುದಿಲ್ಲ ಎಂಬುದು ಗಮನಾರ್ಹ! ವೀರಶಂಕರ ದಾಸಿಮಯ್ಯನ ಹೆಸರಿನಲ್ಲಿ ಒಂದು ಬರಹವಿದೆ. ಅದನ್ನು ವಚನವೆಂದೇ ಸಂಗ್ರಹಕಾರರು. ಸಮಗ್ರ ವಚನ ಸಂಪುಟದ 9ನೆಯ ಸಂಪುಟದ ಪುಟ 33ರಲ್ಲಿ ಕೊಟ್ಟಿದ್ದಾರೆ. ಅದು ವೀರಶೈವನಾಗಿ ದ್ವಿಜರನ್ನು ವೀರಶಂಕರ ದಾಸಿಮಯ್ಯ ಬೈದಿರುವ ಬರಹವೇ ವಿನಾ ವಚನ ಎನ್ನಿಸಿಕೊಳ್ಳದು.

ಶಂಕರ ದಾಸಿಮಯ್ಯನು ವಚನಕಾರ; ಸಮಗ್ರ ವಚನ ಸಂಪುಟದ 9ನೆಯ ಸಂಪುಟದ 54-55ನೆಯ ಪುಟಗಳಲ್ಲಿ 5 ವಚನಗಳು ಇವೆ. ಈತ ಅನುಭವ ಮಂಟಪದ ಶರಣ.

ಪ್ರಾಮಾಣಿಕವಾಗಿ ಹೇಳಬೇಕೆಂದರೆ ಕನ್ನಡದಲ್ಲಿರುವ ವಚನ ಸಾಹಿತ್ಯವನ್ನು, ಶರಣರನ್ನು ಕುರಿತು ಅಧ್ಯಯನ ಮಾಡಿರುವ ಹಿರಿಯ-ಕಿರಿಯ ಸಾಹಿತಿಗಳು ತಾತ್ತ್ವಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡದೆ ಇರುವುದರಿಂದ ಒಬ್ಬರ ಮುಂಡಕ್ಕೆ ಇನ್ನೊಬ್ಬರ ತಲೆಯನ್ನು ಜೋಡಿಸುವ ಕೆಲಸವನ್ನೇ ಮಾಡುತ್ತಾ

ಹೋಗಿದ್ದಾರೆ. ವಚನ ಸಾಹಿತ್ಯ ಮತ್ತು ಅದರಲ್ಲಿ ಹುದುಗಿರುವ ಗುರು ಬಸವಣ್ಣನವರು ಸಂಸ್ಥಾಪಿಸಿಕೊಟ್ಟ ಒಂದು ಪರಿಪೂರ್ಣ ಸ್ವರೂಪದ ಲಿಂಗಾಯತ ಧರ್ಮವನ್ನು ಅರಿಯುವ ಮುನ್ನ ಶೈವ ಮತ್ತು ವೀರಶೈವದ ಸ್ವರೂಪಗಳನ್ನು ಅರಿಯಬೇಕು. ದೇವರ ಮತ್ತು ಜೇಡರ ದಾಸಿಮಯ್ಯಗಳ ರುಂಡ-ಮುಂಡವನ್ನು ಅದಲು ಬದಲು ಮಾಡಿರುವಂತೆ ಶೈವ, ವೀರಶೈವ, ಲಿಂಗಾಯತ ತತ್ತ್ವಗಳನ್ನು ಈ ಸಾಹಿತಿಗಳು ಕಲಸಿಟ್ಟು ಬಿಟ್ಟಿದ್ದಾರೆ. ಇದಕ್ಕೆ ಮೂಲ ಕಾರಣರು ಹರಿಹರ, ಭೀಮಕವಿ ಮುಂತಾದವರು ಸಹ. ಅವರು ತತ್ತ್ವ-ಸಿದ್ಧಾಂತಗಳೆಂಬ "ಬ್ರೇಕ್" ಇಲ್ಲದೆ ವರ್ಣನೆಯ ಗಾಡಿ ಬಿಡುವುದರಲ್ಲೇ ಆಸಕ್ತರು.

ಈ ತಾತ್ತ್ವಿಕ ಲೇಖನದಲ್ಲಿ ಅಪ್ರಸ್ತುತ ಎನಿಸಿದರೂ ಒಂದು ದೃಷ್ಟಾಂತವನ್ನು ಹೇಳಬೇಕೆನಿಸುತ್ತಿದೆ. ಒಮ್ಮೆ ಒಬ್ಬ ಯಾತ್ರಿಕ ತನ್ನೊಡನೆ ಒಂದು ತಾಮ್ರದ ತಂಬಿಗೆ ಇಟ್ಟುಕೊಂಡು ಸಮುದ್ರ ಸ್ನಾನಕ್ಕೆ ಹೋದ; ಸಮುದ್ರದೊಳಕ್ಕೆ ಹೋಗಿ ಸ್ನಾನ ಮಾಡಿ ಬರುವ ತನಕ ಈ ತಂಬಿಗೆಯನ್ನು ಕಾಯುವುದು ಹೇಗೆ? ಎಂಬ ಸಮಸ್ಯೆ ಕಾಡಿತು. ಒಂದು ಉಪಾಯ ಹೊಳೆಯಿತು. ಸಮುದ್ರ ದಂಡೆಯ ಮರಳಲ್ಲಿ ಆ ತಂಬಿಗೆ ಹುಗಿದು, ಮೇಲೆ ಗುರುತಿಗಾಗಿ ಲಿಂಗಾಕೃತಿಯಲ್ಲಿ ಮರಳನ್ನು ಏರಿಸಿ ಸ್ನಾನಕ್ಕೆ ಹೋದ. ಇದನ್ನು ಗಮನಿಸಿದ ಇನ್ನಿತರ ಯಾತ್ರಿಕರು ಬಹುಶಃ ಸಮುದ್ರ ಸ್ನಾನಕ್ಕೆ ಹೋಗುವ ಮೊದಲು ಹೀಗೇ ಮರಳಿನಲ್ಲಿ ಲಿಂಗವನ್ನು ಮಾಡಬೇಕೆಂದು ಭಾವಿಸಿ ಎಲ್ಲರೂ ಮಾಡಿ, ಸ್ನಾನಕ್ಕೆ ಹೋದರು. ಆ ಮೊದಲನೆಯ ಮನುಷ್ಯ ಬಂದು ನೋಡುತ್ತಾನೆ. ನೂರಾರು ಮರಳಿನ ಗುಡ್ಡೆಗಳು! ತಂಬಿಗೆಯನ್ನು ಹುಡುಕುವುದು ಹೇಗೆ ಸಾಧ್ಯ ? ಹಾಗೆ ಹರಿಹರ, ಭೀಮಕವಿ ಇತ್ಯಾದಿ ಕವಿಗಳು ಶೈವದ ಪರಿಭಾಷೆಯಲ್ಲಿ ವಚನ ಸಾಹಿತ್ಯ, ಲಿಂಗಾಯತ ಧರ್ಮ, ಶರಣರ ಜೀವನ ಚರಿತ್ರೆ ಬರೆದು ಸತ್ಯವು ಇತಿಹಾಸದ ಮರಳಿನಲ್ಲಿ ಕಳೆದೇ ಹೋಗುವಂತೆ ಮಾಡಿದ್ದಾರೆ.

ಗುರು ಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮೇಶ್ವರ, ಜೇಡರ ದಾಸಿಮಯ್ಯ ಇವರ ವಚನಗಳನ್ನು ಅಧ್ಯಯನ ಮಾಡುವಾಗ ಆರಂಭದ ಶೈವಾಚರಣೆ, ಶಿವಭಕ್ತಿ; ನಂತರ ಬರುವ ಲಿಂಗಾಯತ ಆಚರಣೆ, ಏಕ ಲಿಂಗ ನಿಷ್ಠೆ ಇವನ್ನು ಗುರುತಿಸಬೇಕು. ಇಲ್ಲದಿದ್ದರೆ, ಆ ಶರಣರ ಬದುಕು, ಬರಹ, ತತ್ತ್ವ, ನಂಬಿಕೆಗಳಿಗೆ ಅಪಚಾರ ಮಾಡಬೇಕಾಗುತ್ತದೆ. ದೇವೀರಪ್ಪನವರ ಕೃತಿಯಲ್ಲಿ ಮತ ಎಂಬ ವಿಷಯದ ಅಡಿಯಲ್ಲಿ (ಪುಟ XXX) "ಜೇಡರ ದಾಸಿಮಯ್ಯನ ಜೀವನ ಚರಿತ್ರೆಯಿಂದ ಆತನು ಲಿಂಗವಂತನಾಗಿದ್ದರೂ ಸ್ಥಾವರಲಿಂಗ ಪೂಜೆಯನ್ನು ಬಿಟ್ಟಿರಲಿಲ್ಲವೆಂದು ಗೊತ್ತಾಗುತ್ತದೆ." ಎಂದು ಬರೆದಿದ್ದಾರೆ. ಮುಂದುವರಿದು, "ಉತ್ತಮಾಂಗದ ಶಿವಲಿಂಗದ ಸೊಬಗ ತನ್ನ ಮಗ ಸದ್ಯೋಜಾತನಿಗೆ ಉಪನಯನ ಮಾಡಿಸಿದ ಪರಮಮಾಹೇಶ್ವರ. ವಿಷ್ಣುಮೂರ್ತಿಗಳನ್ನು ಶಿವನಿತ್ತ ಹಣೆಗಣ್ಣಿನ ಉರಿಯಿಂದ ಸುಡುವುದು ಅವರ ಶೈವ ಪ್ರಚಾರ ಮಾರ್ಗ. ಕಡೆಗೆ ಜಡೆಯ-ಶಂಕರಲಿಂಗದಲ್ಲಿಯೇ 'ಬೀಜದೊಳಗಂಕುರಂ ಪೊಗುವ ಮಾಳ್ಕೆಯಿಂ' ಸೇರಿಕೊಂಡವನು. ತಾನು ವಿಪ್ರನೆಂಬುದನ್ನು ಕಡೆತನಕ ಮರೆಯಲೇ ಇಲ್ಲ ಆತ. ಜೇಡರದಾಸಿಮಯ್ಯನ ಸಾತ್ವಿಕಾಹಂಕಾರವನ್ನು ತೊಲಗಿಸಬೇಕೆಂದು ಮುದನೂರಿಗೇ ಹೋದವನು ನೆಟ್ಟಗೆ ಜೇಡರ ದಾಸಿಮಯ್ಯನ ಮಠಕ್ಕೆ ಹೋಗಲೇ ಇಲ್ಲ; ರಾಮನಾಥಾಲಯದ ಪಕ್ಕದಲ್ಲಿ ಬೀಡಾರ ಮಾಡಿಕೊಂಡಿರುತ್ತಾನೆ. ಜೇಡರ ದಾಸಿಮಯ್ಯನಾದರೂ ಆತನನ್ನು ಆರೋಗಣೆಗೆ ಮನೆಗೇ ಬಿಜಯಂಗೆಯ್ಯಿರೆಂದು ಕರೆಯಲಿಲ್ಲ; 'ಪಡಿ' ಕಳಿಸುವೆನೆನ್ನುತ್ತಾನೆ. ಆ ಕಾಲದಲ್ಲಿ 'ಮೇಲು' 'ಕೀಳು' ಎಂಬ ನಂಬುಗೆ ಇನ್ನೂ ಅಚಲವಾಗಿದ್ದಿತು. ಸ್ಥಾವರ ಲಿಂಗಾರಾಧನೆಯನ್ನು ಯಾರೂ ವಿರೋಧಿಸುತ್ತಿರಲಿಲ್ಲ." ಎಂದು ದೇವೀರಪ್ಪನವರು ಬರೆದಿದ್ದಾರೆ.

ಜೇಡರ ದಾಸಯ್ಯ ಮೊದಲು ಶೈವ, ನಂತರ ವೀರಶೈವ, ನಂತರ ಲಿಂಗಾಯತ! ಶೈವರು ಶಿವನನ್ನು ಆರಾಧಿಸಿದರೂ ಇನ್ನಿತರ ದೇವತೆಗಳನ್ನೂ ಆರಾಧಿಸುತ್ತಾರೆ. ವೀರಶೈವರು ಶಿವನನ್ನಲ್ಲದೆ ಅನ್ಯ ದೈವವನ್ನು ಆರಾಧಿಸಬಾರದು; ಮನದಲ್ಲಿ, ಕನಸಿನಲ್ಲಿ ಸಹ ಅನ್ಯ ದೈವಸ್ಮರಣೆ, ಭವಿ ಸಂಗ ಮಾಡಬಾರದು

ಎಂಬ ನಂಬಿಕೆ ಇದೆ. ಆದಕ್ಕೇನೆ ವೀರಶಂಕರ ದಾಸಯ್ಯ ಕನಸಿನಲ್ಲಿ ಬೌದ್ಧನನ್ನು ಮುಟ್ಟಿಸಿಕೊಂಡಿದ್ದಕ್ಕಾಗಿ ಬೆಂಕಿಗೆ ಹಾರಿ ಪ್ರಾಣ ಬಿಡುತ್ತಾನೆ. ಕಡು ಭಸಿತವಂ ಪೂಸಿ, ಮುಡಿಯಲ್ಲಿ ಲಿಂಗವ ಧರಿಸಿ ಜೇಡರ ದಾಸಿಮಯ್ಯ ಏಕದೇವತಾ- ಶಿವ ನಿಷ್ಠನಾಗಿದ್ದ. ನಂತರ ಲಿಂಗಾಯತನಾದ. ವೀರಶೈವರು ಸ್ಥಾವರ ಲಿಂಗ ವಿರೋಧಿಗಳಲ್ಲ. ಒಮ್ಮೆ ಮುದನೂರಿಗೆ ಹೋದಾಗ ಕುತೂಹಲದಿಂದ ರಾಮನಾಥನ ಗುಡಿಗೆ ಹೋದಾಗ ವಿಪ್ರರು, "ನೀವು ಸ್ಥಾವರ ಲಿಂಗಕ್ಕೆ ನಮಸ್ಕರಿಸುವುದಿಲ್ಲ; ಏಕೆ ಬಂದೆ?" ಎನ್ನುತ್ತಾರೆ. ಅಷ್ಟು ಹೊತ್ತಿಗೆ ಜೇಡರ ದಾಸಯ್ಯ ಲಿಂಗಾಯತನಾಗಿದ್ದ ಎಂಬುದನ್ನು ನಾವು ಅರಿಯಬೇಕು. ದೇವರ ದಾಸಿಮಯ್ಯನಾಗಲೀ, ವೀರ ಶಂಕರ ದಾಸಿಮಯ್ಯನಾಗಲೀ ಲಿಂಗಾಯತರಾಗಲೇ ಇಲ್ಲ. ಅವರ ಕಾಲಕ್ಕೆ ಈ ಧರ್ಮವು ಹುಟ್ಟಿರಲೇ ಇಲ್ಲ. ಅವರು ಉಭಯತರೂ ವೀರಶೈವರು. ಅದರ ಪ್ರಕಾರ ದೀಕ್ಷಾನಂತರವೂ, ವರ್ಣಾಶ್ರಮ, ಜಾತಿಗಳು ಅಳಿಯುತ್ತಿರಲಿಲ್ಲ. ಶೂದ್ರ ವೀರಶೈವ, ಬ್ರಾಹ್ಮಣ ವೀರಶೈವ ಪರಸ್ಪರ ಬೆರೆಯುತ್ತಿರಲಿಲ್ಲ. ಶೈವ ಬ್ರಾಹ್ಮಣರು ಜನಿವಾರ ಧರಿಸಿ, ಸ್ಥಾವರ ಲಿಂಗವನ್ನು ಪೂಜಿಸುವರು. ಬ್ರಾಹ್ಮಣ ವೀರಶೈವರು ಜನಿವಾರ ಧರಿಸಿ, ಅವರ ತುದಿಗೆ ಒಂದು ಬಟ್ಟೆಯಲ್ಲಿ ಚರಲಿಂಗ (ಸ್ಥಾವರಲಿಂಗದ ಚಿಕ್ಕಗಾತ್ರ)ವನ್ನು ಕಟ್ಟುವರು. ಉಭಯತರೂ ಚಂಡಿಕೆ (ಜುಟ್ಟು) ಹೊಂದಿರುವರು. ಸನ್ಯಾಸಿಗಳು ಜನಿವಾರ ತೆಗೆಯುವುದರಿಂದ ಆ ಚರಲಿಂಗವನ್ನು ಮುಡಿಯಲ್ಲಿ ಇಟ್ಟು ಅದನ್ನು ಕಟ್ಟುವರು. ಮಾಜಿ ವೀರಶೈವ ಮಹಾಸಭಾಧ್ಯಕ್ಷ ಜೆ.ಬಿ.ಮಲ್ಲಾರಾಧ್ಯರು ಜನಿವಾರ / ಲಿಂಗ ಎರಡೂ ಇಟ್ಟುಕೊಂಡಿದ್ದರು. ಆಗ ಅವರು ಲಿಂಗಾಯತರೇ ಅಲ್ಲ ಎಂದು ಲಿಂ॥ಎ.ಕೆ.ಜವಳಿ ನ್ಯಾಯಾಲಯಕ್ಕೆ ಸಹ ಹೋಗಿದ್ದರು. ಈ ಹಿನ್ನೆಲೆಯಲ್ಲಿ ವೀರಶಂಕರ ದಾಸಿಮಯ್ಯನು ತನ್ನ ಮಗ ಸದ್ಯೋಜಾತನಿಗೆ ಉಪನಯನ ಮಾಡಿಸಿರುವುದು ಸ್ವಾಭಾವಿಕ. ಅದು ವೀರಶೈವ ಆಚರಣೆ. ವೀರಶೈವ ಬ್ರಾಹ್ಮಣ ಸನ್ಯಾಸಿಗೆ ಜಂಗಮನೆಂದು, ವೀರಶೈವ ಬ್ರಾಹ್ಮಣ ಗೃಹಸ್ಥರಿಗೆ ಪರಮ ಮಹೇಶ್ವರರೆಂದು ಕರೆಯಲಾಗುತ್ತಿತ್ತು.

ವೀರಶೈವ ದೀಕ್ಷಾ ನಂತರವೂ ವರ್ಣ, ಜಾತಿಗಳು ಅಳಿಯುತ್ತಿರಲಿಲ್ಲವಾದ್ದರಿಂದಲೇ ವೀರ ಶಂಕರ ದಾಸಿಮಯ್ಯ ದೇವರ ದಾಸಿಮಯ್ಯನ ಮನೆಯಲ್ಲಿ ಉಣ್ಣದೆ ಧಾನ್ಯವನ್ನು ತರಿಸುತ್ತಾನೆ ಎಂಬುದು ಚನ್ನಬಸವಣ್ಣನವರ ವಚನದಲ್ಲಿರುವ ಟೀಕೆಗೆ ಅರ್ಥಕೊಡುತ್ತದೆ.

ಕುಲ ಹೀನ ಶಿಷ್ಯಂಗೆ ಅನುಗ್ರಹವ ಕೊಟ್ಟು.

ತನ್ನ ಪ್ರಾಣಲಿಂಗವ ನಿಕ್ಷೇಪಿಸಿ, ಕರ್ಣದಲ್ಲಿ ಮಂತ್ರವ ಹೇಳಿ ಆ ಶ್ರೀಗುರು ಬಂದು ಆ ಶಿಷ್ಯನ ಮನೆಯ ಹೊಗಲೊಲ್ಲದೆ.

ಅಕ್ಕಿ ತುಪ್ಪವನೀಸಿಕೊಂಬವನ ಕೇಡಿಂಗೆ ಇನ್ನೇವೆನಯ್ಯಾ?
ತನ್ನ ಪ್ರಾಣಲಿಂಗವ ಅವನಿಗೆ ಕೊಟ್ಟು, ತಾ ಹೊಗೆನೆಂಬ
ವ್ರತಗೇಡಿಯನಿನ್ನೇನೆನಬಹುದಯ್ಯಾ ?
ಅವನ ಧನಕ್ಕೆ ತಂದೆಯಾದನಲ್ಲದೆ ಅವನಿಗೆ ತಂದೆಯಾದುದಿಲ್ಲ.
ಇದು ಕಾರಣ, ಕೂಡಲಚನ್ನಸಂಗಯ್ಯಾ,
ಲಿಂಗವ ಮಾರಿಕೊಂಡುಂಬ ಭಂಗಗಾರರ
ಕೆಟ್ಟ ಕೇಡನೇನೆಂಬೆನಯ್ಯಾ ! -ಚ.ಬ.ವ- 631

ವೀರಶೈವ ಗುರುವಿನ ಆಚರಣೆಯನ್ನು ಚನ್ನಬಸವಣ್ಣನವರು ಇಲ್ಲಿ ಖಂಡಿಸಿದ್ದಾರೆ.

ಸ್ಥಾವರ ಲಿಂಗ ಪೂಜಾ ನಿರಸನ, ದೀಕ್ಷಿತರ ಮನೆಯಲ್ಲಿ ಉಂಬ ಉಡುವ, ಕೊಂಬ ಕೊಡುವ ಕ್ರಿಯೆ ಅರ್ಥಾತ್ ಸಮಾನತೆ ಲಿಂಗಾಯತ ಧರ್ಮದ ವೈಶಿಷ್ಟ್ಯ ಎಂಬುದನ್ನು ಇಲ್ಲಿ ಮನಗಾಣಬೇಕು.

ಡಾ॥ಎಲ್.ಬಸವರಾಜು ಅವರು ತಾವು ಸಂಪಾದಿಸಿದ "ದೇವರ ದಾಸಿಮಯ್ಯನ ವಚನಗಳು."

ಎಂಬ ಪುಸ್ತಕದ 1978ನೆಯ ಆವೃತ್ತಿಯ ಪುಟ 101, 102, 103ರಲ್ಲಿ 8 ವಚನಗಳನ್ನು ಕೊಟ್ಟು ಅವು ಅಪ್ರಸ್ತುತ ವಚನಗಳೆಂದು ಶೀರ್ಷಿಕೆ ಕೊಟ್ಟಿದ್ದಾರೆ. ಅವುಗಳು 1.ಏಕದೇವತಾ-ಶಿವನಿಷ್ಠೆ ಇರುವ ವಚನ 2.ಭಕ್ತನು ಭವಿಯ ಮನೆಯಲ್ಲಿ ಉಣ್ಣಬಾರದು 3. ಭವಿಯೊಡನೆ ವ್ಯವಹರಿಸಬಾರದು ಎನ್ನುವ ವಿಚಾರ ಒಳಗೊಂಡಿವೆ. ವೀರಶೈವವು ಅಂಥ ಕಠೋರತೆಯನ್ನು ಬೋಧಿಸುತ್ತಿತ್ತು. ಹೀಗಾಗಿಯೇ ದೇವರ ದಾಸಿಮಯ್ಯ, ವೀರಶಂಕರ ದಾಸಿಮಯ್ಯ ಮುಂತಾದವರು ವಿಷ್ಣುಮೂರ್ತಿಯ ಬದಲಿಗೆ, ಜಿನ ಮೂರ್ತಿಗಳ ಬದಲಿಗೆ ಲಿಂಗಗಳನ್ನು ಸ್ಥಾಪನೆ ಮಾಡುತ್ತಿದ್ದುದು. ಆದ್ದರಿಂದ ವೀರಶೈವದ ಈ ಮತಾಂಧತೆ ಕುರಿತು ಚರ್ಚಿಸಲು ಲಿಂಗಾಯತರು ಸಂಕೋಚವನ್ನೇಕೆ ಪಡಬೇಕು?.

ದುಗ್ಗಳೆಯದು ಕೃತಕ ವಚನವೆ ?

"ಭಕ್ತನಾದರೆ ಬಸವಣ್ಣನಂತಾಗಬೇಕು." ಎಂಬ ದುಗ್ಗಳೆಯ ವಚನವನ್ನು ಪುಟ 40ರಲ್ಲಿ ಅಡಿ ಟಿಪ್ಪಣಿಯಲ್ಲಿ ಉಲ್ಲೇಖಿಸಿ, 11ನೆಯ ಶತಮಾನದ ಆದಿಯವರು 12ನೆಯ ಶತಮಾನದವರೊಡನೆ ಸಂಪರ್ಕ ಬೆಳೆಸುವುದಾದರೂ ಹೇಗೆ? ಬಹುಶಃ ದುಗ್ಗಳೆಯ ಅಂಕಿತದಲ್ಲಿ ರಚಿತವಾದ ಕೂಟ (ಕೃತಕ) ವಚನವಿರಬೇಕು." ಎಂದು ಡಾ॥ಎಲ್.ಬಸವರಾಜು ಅವರು ಅಭಿಪ್ರಾಯಪಟ್ಟಿದ್ದಾರೆ. ಇದನ್ನೊಂದು ಉತ್ತಮ ಸುಳಿವು (Clue) ಎಂದು ಭಾವಿಸಿ ಡಾ॥ಬಸವರಾಜು ಮತ್ತು ಇತರ ವಿದ್ವಾಂಸರು ಅಧ್ಯಯನ ಮಾಡಿ 11ನೆಯ ಶತಮಾನದ ದೇವರ ದಾಸಿಮಯ್ಯ ಮತ್ತು 12ನೆಯ ಶತಮಾನದ ವಚನಕಾರ ಜೇಡರ ದಾಸಯ್ಯನನ್ನು ಬೇರೆ ಮಾಡಿದ್ದರೆ ಸಂಶೋಧನಾ ಕ್ಷೇತ್ರದಲ್ಲಿ ಬಹಳಷ್ಟು ಪ್ರಗತಿಯನ್ನು ಸಾಧಿಸಲು ಸಾಧ್ಯವಿತ್ತು. ಒಂದು ಮಹತ್ವಪೂರ್ಣ ಸತ್ಯವನ್ನು ಅರಿಯುವಲ್ಲಿ ಡಾ॥ಬಸವರಾಜು ಅವರು ಸೋತಿದ್ದಾರೆ ಎನ್ನದೆ ಗತ್ಯಂತರವಿಲ್ಲ.

ಶ್ರೀ ಸಿದ್ಧರಾಮೇಶ್ವರರು ಬರೆದ ತ್ರಿವಿಧಿಗಳು ಬಹಳ ಮಹತ್ವದ ರಚನೆಗಳು. ಅವರಲ್ಲಿಯೂ ಮಿಶ್ರ ಸ್ತೋತ್ರ ತ್ರಿವಿಧಿ, ಕ್ರಿಕೆಟ್ಟಿನ ರನ್ನಿಂಗ್ ಕಾಮೆಂಟರಿ ತರಹ ಇದ್ದು. ಅನುಭವ ಮಂಟಪದಲ್ಲಿ ಇದ್ದ ಮುಖ್ಯ ಶರಣರ ಪಟ್ಟಿಯನ್ನು ಒದಗಿಸುತ್ತದೆ. ಇದರಲ್ಲಿ ದಾಸಯ್ಯ - ದುಗ್ಗಳೆಯರ ಹೆಸರು ಇರುವುದು ಗಮನಾರ್ಹ.

ಕಣಿಯ ಕೇಳುವ ಭಾವ ಕರದೊಳಗೆ ಇರಲಿಕೆ
ತ್ರಿಣಯನ ರೂಪು ಪ್ರಜ್ವಲಿಸುವಲ್ಲಿ
ಅಣಿಯಂಕಧರನೊಳಗೆ ಅಣಿಯನೆತ್ತುತ್ತಿಹನು
ತ್ರಿಣಯನ ರೂಪು ದಾಸಯ್ಯ ಯೋಗಿನಾಥ - ಪದ್ಯ 79

ಅಕ್ಕಮಹಾದೇವಿ ಚೋಳಕ್ಕನಾಗಲೆ ನಿಂಬಿ
ಯಕ್ಕ ದುಗ್ಗಳೆ ಸುಗ್ಗಲವ್ವೆ ತಾಯ
ಅಕ್ಕರಿನ ಶಿಶುವೆಂದು ಚಕ್ಕನೆ ತನ್ನತ್ತ
ಎತ್ತಿಕೊಂಡನು ಕರೆದು ಯೋಗಿನಾಥ -ಪದ್ಯ 103

ಇಷ್ಟೆಲ್ಲ ಸುಳಿವು, ದಾಖಲೆ ಇದ್ದೂ ಸಹ ಅನೇಕ ವಿದ್ವಾಂಸರು ಸರಿಯಾಗಿ ಆಲೋಚಿಸದೆ ಇಬ್ಬರು ದಾಸಿಮಯ್ಯನವರನ್ನು ಅಭಿನ್ನರೆಂದು ಭಾವಿಸಿದ್ದು ನಿಜಕ್ಕೂ ಆಶ್ಚರ್ಯಕರ.

ಮೊದಲನೆಯ ವಚನಕಾರ ದಾಸಿಮಯ್ಯನೆ ?

ನಾನು ಈಗಾಗಲೇ ಚರ್ಚಿಸಿದಂತೆ ಯಾರೋ ಒಬ್ಬರು ಹೇಳಿದುದನ್ನೇ ನನ್ನೂ ಅದೇ ಎಂದು ಯಾಂತ್ರಿಕವಾಗಿ ಸಾಹಿತಿಗಳು, ಸಂಶೋಧಕರು ಹೇಳುತ್ತಾ ಬಂದಿದ್ದಾರೆ. ಈ ದಿಶೆಯಲ್ಲಿ ದೇವರ ದಾಸಿಮಯ್ಯನನ್ನು ಆದ್ಯ ವಚನಕಾರ ಎಂಬ ಮಾತು ಸಹ ಹಾಗೇ ಬಂದಿದೆ. ವಚನಕಾರನು ಜೇಡರ

ದಾಸಯ್ಯ ಎಂದು ನಾವು ನಿರ್ಧರಿಸಿದ್ದೇವೆ. ಹಾಗಾದರೆ ಜೇಡರ ದಾಸಿಮಯ್ಯನೇ ಮೊದಲನೆಯ ವಚನಕಾರನೆ ?

ಸಾಮಾನ್ಯವಾಗಿ ಸ್ವತಂತ್ರ ಚಿಂತನೆ ಎಲ್ಲರಲ್ಲೂ ಮೂಡುವಂತಹದಲ್ಲ ; ಅನೇಕರಲ್ಲಿ ಹಲವಾರು ಸಂದೇಹ, ಪ್ರಶ್ನೆ ಏಳುತ್ತಿರುತ್ತವೆ. ಅವರೆಲ್ಲರಲ್ಲಿ ಸಮಾನ ಮನಸ್ಕರನ್ನು ಒಟ್ಟುಗೂಡಿಸುವ ಅಥವಾ ಚಿಂತನೆಗೆ ಪ್ರೇರೇಪಿಸುವ ಸಾಮರ್ಥ್ಯ ಇರದು. ಗುರು ಬಸವಣ್ಣನವರಲ್ಲಿ ಅಂಥ ಅದ್ಭುತ ಸಾಮರ್ಥ್ಯವಿತ್ತು. ಅವರೇ ಮೊಟ್ಟ ಮೊದಲ ವಚನ ರಚನಕಾರರೆಂದು ನನ್ನ ಅಭಿಪ್ರಾಯ.

ಸಿದ್ಧರಾಮೇಶ್ವರರು ಅನುಭವ ಮಂಟಪಕ್ಕೆ ಬರುವ ಪೂರ್ವದಲ್ಲೇ ವಚನಗಳನ್ನು ರಚಿಸಲು ಆರಂಭಿಸಿದ್ದರು. ಗುರು ಬಸವಣ್ಣನವರು ಬಾಲ್ಯದಲ್ಲೇ ವಚನಗಳನ್ನು ರಚಿಸಲು ಆರಂಭಿಸಿದರು. ಮಂಗಳವೇಡೆಯಲ್ಲಿ 5 ವರ್ಷ ಕಾಲ ಇದ್ದರು. ಇದು ಸೊನ್ನಲಾಪುರಕ್ಕೆ ಅತಿ ಹತ್ತಿರದ ಊರು. ಹೀಗಾಗಿ, ಕನ್ನಡದಲ್ಲಿ ವಿಶಿಷ್ಟ ಶೈಲಿಯಲ್ಲಿ ವಚನಗಳನ್ನು ರಚಿಸುವ ಗುರು ಬಸವಣ್ಣನವರ ಸಂಪಹನ ವಿಧಾನ ಅಚ್ಚ ಕನ್ನಡ ನಾಡಾಗಿದ್ದ ಸೊನ್ನಲಾಪುರಕ್ಕೆ ಮುಟ್ಟಿ, ಸಿದ್ಧರಾಮೇಶ್ವರರನ್ನು ಪ್ರೇರೇಪಿಸಿರಲೇಬೇಕು. ಲಿಂಗಾಯತ ಧರ್ಮ ಸ್ವೀಕಾರಕ್ಕೆ ಮೊದಲು ಅವರು ರಚಿಸಿರುವ ವಚನಗಳನ್ನು ಸುಲಭವಾಗಿ ಗುರುತಿಸಬಹುದು. ದೂರದ ಉಡುತಡಿಗೆ ಸಹ, ಜಂಗಮರು ವಚನ ಸಾಹಿತ್ಯವನ್ನು ಪ್ರಚಾರ ಮಾಡುತ್ತಿದ್ದುದರಿಂದಲೂ ಮಹಾದೇವಿಯಕ್ಕನಿಗೆ ತಲುಪಿತು. ಅಂತೆಯೇ ಆ ತಾಯಿ ವಚನಗಳ ಉಗಮ ಸ್ಥಾನವಾದ ಕಲ್ಯಾಣಕ್ಕೆ ಧಾವಿಸಿದುದು.

ಜನ ಸಾಮಾನ್ಯರಿಗೆ ಅರ್ಥವಾಗುವ ನೆಲದ ಭಾಷೆ ; ಅದರಲ್ಲಿ ಭಕ್ತಿ ರಸ ಪ್ರವಾಹ; ಸಾಮಾಜಿಕ ಕಳಕಳಿ, ದೇವ ಪ್ರೇಮದ ತುಡಿತ, ಅನ್ಯಾಯದ ವಿರುದ್ಧ ಆಕ್ರೋಶ. ಹೀಗೆ ವೈವಿಧ್ಯಮಯ ಭಾವನೆಗಳಿಂದ ತುಂಬಿದ ಅಪ್ಪ ಬಸವಣ್ಣನವರ ಮಾತುಗಳು ಅರ್ಥಾತ್ ವಚನಗಳು ನಾಡಿನಲ್ಲೆಲ್ಲ ಹರಿದಾಡಿ ವಿದ್ಯುಚ್ಛಕ್ತಿಯಂತೆ ಭಾಕ್ತಿಕ ಹೃದಯಗಳಿಗೆ ಬೆಳಕನ್ನು, ಸಂಪ್ರದಾಯವಾದಿಗಳಿಗೆ ಆಘಾತವನ್ನು ನೀಡಿದವು. ಕ್ರಾಂತಿಪುರುಷ ಬಸವಣ್ಣನವರೇ ವಚನ ರಚನೆಯ ಮೂಲಿಗರು ; ಎಲ್ಲೆಡೆ ಪ್ರಚಾರಗೊಂಡ ವಚನಗಳ ಶೈಲಿ, ಜೇಡರ ದಾಸಯ್ಯನು ಸಿದ್ಧರಾಮೇಶ್ವರರಂತೆ ಶೈವ ಮಾರ್ಗಾವಲಂಬಿಯಾಗಿದ್ದಾಗಲೇ ಆಕರ್ಷಿಸಿ, ಆತನೂ ವಚನಗಳನ್ನು ಬರೆಯಲು ಆರಂಭಿಸಿದ್ದಾನೆ.

ಕರಿಯನಿತ್ತಡೆ ಒಲ್ಲೆ ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನ್ನಿತ್ತಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ
ನಿಮ್ಮನಿತ್ತಂತೆ ಕಾಣಾ ರಾಮನಾಥ!

ಇದು ಜೇಡರ ದಾಸಯ್ಯನ ಅತ್ಯಂತ ಪ್ರಸಿದ್ಧ ಮತ್ತು ಜನಪ್ರಿಯ ವಚನ; ಇಲ್ಲಿ ಬರುವ ಒಂದು ವಾಕ್ಯವು ಬಹಳ ಮಹತ್ವಪೂರ್ಣ. "ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ" ಎಂಬ ವಾಕ್ಯದಲ್ಲಿ ಶರಣರು ಮತ್ತು ಅವರ ಸೂಳ್ನುಡಿಗಳು ಆಗಲೇ ಲಭ್ಯವಾಗುತ್ತಿದ್ದವು ಎಂಬ ಬಗ್ಗೆ ಸೂಚನೆ ದೊರೆಯುತ್ತಿದೆ. 'ಶರಣ' ಪದವು ವಚನ ಧರ್ಮದ ಕೊಡುಗೆ. ಅದಕ್ಕೆ ಮೊದಲಿಗೆ ಭಕ್ತರನ್ನು ಶಿವಭಕ್ತರು ಎಂದು ಕರೆಯಲಾಗುತ್ತಿತ್ತು. ಶರಣರ ಸೂಳ್ನುಡಿಗಳಿಗೆ ಜೇಡರ ದಾಸಯ್ಯನವರು ಹಂಬಲಿಸುತ್ತಿದ್ದರು ಎಂಬುದು ಈ ಮಾತಿನಿಂದ ವ್ಯಕ್ತವಾಗುತ್ತದೆ. ಅವರ ಜೀವನದ ಮಧ್ಯಭಾಗ ಸುಮಾರು 50 ವರ್ಷ, ಕಳೆದ ಬಳಿಕ ಜೇಡರ ದಾಸಯ್ಯನವರು ತಮ್ಮ ಪತ್ನಿ ಸಹಿತ ಮುನ್ನಿನ ಶೈವ, ವೀರಶೈವಗಳನ್ನು ತೊರೆದು 'ಶರಣ' - ಲಿಂಗಾಯತ ಧರ್ಮಾನುಯಾಯಿಗಳಾಗಿದ್ದಾರೆ. ಹೀಗಾಗಿ ಈ ನೂತನ ಧರ್ಮದ ಸಮಗ್ರ ಪರಿಚಯ ಅವರಿಗೆ ಆಗಿರಲಿಕ್ಕಿಲ್ಲ; ಆದರಿಂದಲೇ ಅವರ ವಚನಗಳಲ್ಲಿ ಅಷ್ಟಾವರಣ, ಪಂಚಾಚಾರ, ಷಟಸ್ಥಲಗಳ ಪರಿಕಲ್ಪನೆ ಬಂದಿಲ್ಲ ಎಂದು ಊಹಿಸಬಹುದು. ಹಲವಾರು ವಿಷಯಗಳಲ್ಲಿ ಗುರು ಬಸವಣ್ಣನವರು

"ಆದ್ಯರು" ಆದಂತೆ ವಚನ ರಚನಾ ಶೈಲಿಗೆ ಸಹ ಆದಿ ಪ್ರವರ್ತಕರೆನ್ನಲು ಅಡ್ಡಿಯಿಲ್ಲ.

ಆದ್ಯರ ವಚನ ಪರುಷ ಕಂಡಣ್ಣ

1. ಆದ್ಯರ ವಚನ ಪರುಷ ಕಂಡಣ್ಣಾ :
ಸದಾಶಿವನೆಂಬ ಲಿಂಗವ ನೆರೆ ನಂಬುವುದು ;
ನಂಬಲೊಡನೆ ನೀ ವಿಜಯಿ ಕಂಡಣ್ಣಾ
ಅಧರಕ್ಕೆ ಕಹಿ, ಉದರಕ್ಕೆ ಸಿಹಿ
ಲಿಂಗದೇವನ ಶರಣರ ವಚನ ಬೇವ ಸವಿದಂತೆ. -ಬ.ವ.ದೀ-173

2. ಹಾಲ ತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು
ತವರಾಜದ ನೊರೆ ತೆರೆಯಂತೆ ಆದ್ಯರ ವಚನವಿರಲು,
ಬೇರೆ ಬಾವಿಯ ತೋಡಿ, ಉಪ್ಪನೀರನುಂಬುವನ ವಿಧಿಯಂತೆ
ಆಯಿತ್ತೆನ್ನ ಮತಿ, ಲಿಂಗದೇವಾ
ನಿಮ್ಮ ವಚನಂಗಳ ಕೇಳದೆ ಅನ್ಯ ಪುರಾಣಂಗಳ ಕೇಳಿ ಕೆಟ್ಟೆನಯ್ಯ.-292

3. ಆದ್ಯರ ವಚನ ಪರುಷವೆಂಬೆನು ;
ಆ ಪರುಷವೆನಗೆಂತು ದೊರೆಕೊಂಬುದಯ್ಯಾ ?
ತನು ಮನ ಧನವ ನಿವೇದಿಸಿ ನುಡಿವೆ ;
ಸೋಂಕಿಂಗೆ ಸೈರಿಸಲಾರೆ.
ಹೊಲೆಯರ ಮದ್ದಳೆಯಂತೆ ನುಡಿವ ಡಂಬಕ ನಾನಯ್ಯಾ, ಲಿಂಗದೇವಾ.-315

4. ಆದ್ಯರಿಗಲ್ಲದೆ ವೇದ್ಯವಾಗದು : ಮಾಣೆ ಭೋ ಮಾಣೆ ಭೋ !
ಶಿವಭಕ್ತನೇ ಕುಲಜ.
ಕೈವರ್ತಗರ್ಭಸಂಭೂತಮಾರ್ಕಂಡೇಯ ಮಹಾಮುನೇಃ।
ತಪವಾ ಜಾಯತೇ ವಿಪ್ರಕುಲಂ ಜಾತಿರ್ನವಿದ್ಯತೇ ॥
ಜಾತನಲ್ಲ ಅಜಾತನಲ್ಲ ;
ಲಿಂಗದೇವನ ಶರಣರು ನಿಸ್ಸೀಮರಯಾ! -ಬ.ವ.ದೀ.600

5. ಆದ್ಯರ ವಚನ ವೇದ್ಯರಿಗಲ್ಲದೆ ಸಾಧ್ಯವಾಗದು.
ಲಿಂಗದೇವಾ, ನಿಮ್ಮ ಅನುಭಾವದಿಂದ ಎನ್ನ ಭವಂ ನಾಸ್ತಿಯಾಯಿತ್ತು. - 838

★ ಆದ್ಯರ ವಚನ ಪರುಷ ಕಂಡಣ್ಣ
★ ಇಂತಪ್ಪ ಆದ್ಯರ ವಚನವಿರಲು
★ ಆದ್ಯರ ವಚನ ಪರುಷವೆಂಬೆನು
★ ಆದ್ಯರಿಗಲ್ಲದೆ ವೇದ್ಯವಾಗದು
★ ಆದ್ಯರ ವಚನ ವೇದ್ಯರಿಗಲ್ಲದೆ ಸಾಧ್ಯವಾಗದು

ಗುರು ಬಸವಣ್ಣನವರ ವಚನಗಳಲ್ಲಿ ಬರುವ "ಆದ್ಯರು" ಪದಕ್ಕೆ ಹಿಂದಿನವರು, ಪುರಾತನರು ಎಂದು ಎಲ್ಲರೂ ಅರ್ಥ ಮಾಡುತ್ತ, ಒಬ್ಬ ಆದ್ಯ ವಚನಕಾರನನ್ನು ಕಷ್ಟಪಟ್ಟು ಸಾಹಿತಿಗಳು ಹುಡುಕುತ್ತ ಹೋಗಿದ್ದಾರೆ. ಮೇಲೆ ಸೂಚಿಸಿರುವ ಈ ವಚನಗಳ ಭಾವವನ್ನು ಗ್ರಹಿಸಿದಾಗ ಆದ್ಯರು ಎಂದರೆ

ಹಿಂದಿನವರು ಎಂದಾಗದೆ ಆದಿ ಪ್ರಮಥ ಬಸವಣ್ಣನವರ ಒಡನಾಡಿಗಳಾದ, ವಚನ ಸಾಹಿತ್ಯ ಸಂವಿಧಾನ ರಚಿಸಿದ ಶರಣರು ಎಂದು ಅರ್ಥವಾಗುತ್ತದೆ. ಬಸವಾದಿ ಪ್ರಮಥರು ಇದನ್ನು ಸರಿಯಾಗಿ ಬಿಡಿಸಿದಾಗ ಬಸವ + ಆದಿ ಪ್ರಮಥ ಇವರಿಂದ ಪ್ರಾರಂಭವಾಗಿ ಬಂದ ಶರಣ ಸಮೂಹ ಎಂದು ಅರ್ಥವಾಗುವುದು.

ಧರ್ಮಗುರು ಬಸವಣ್ಣನವರ ವಚನಗಳಿಗೆ ವ್ಯಾಖ್ಯಾನವನ್ನು ಬರೆದ ಬೋಳ ಬಸವಾರ್ಯ ಎಂಬ ಆಚಾರ್ಯನು ಆದ್ಯರು, ವೇದ್ಯರು, ಸಾಧ್ಯರು ಎಂದು 3 ಬಗೆಯಲ್ಲಿ ಶರಣರನ್ನು ವರ್ಗೀಕರಿಸುತ್ತಾನೆ. ಆದ್ಯರು ಎಂದರೆ ಧರ್ಮಗುರು ಬಸವಣ್ಣನವರು, ಷಟಸ್ಥಲ ಜ್ಞಾನಿ ಚನ್ನಬಸವಣ್ಣನವರು, ಶೂನ್ಯ ಪೀಠಾಧೀಶರಾದ ಅಲ್ಲಮ ಪ್ರಭು-ಸಿದ್ಧರಾಮೇಶ್ವರ ಮುಂತಾದ ಮೊದಲನೆಯ ಸಾಲಿನಲ್ಲಿ ನಿಲ್ಲುವ ಪ್ರಮುಖ ಶರಣರು; ವೇದ್ಯರು ಎಂದರೆ ಆದ್ಯರ ತತ್ತ್ವಗಳನ್ನು ಅಳವಡಿಸಿಕೊಂಡ ನಿಜ ಶರಣರು; ಸಾಧ್ಯರು ಎಂದರೆ ದೀಕ್ಷೆಯನ್ನು ಪಡೆದುಕೊಂಡ ಧರ್ಮಾನುಯಾಯಿಗಳು. ಹೀಗೆ ಅರ್ಥ ಮಾಡಿದಾಗ "ಆದ್ಯರಿಗಲ್ಲದೆ ವೇದ್ಯವಾಗದು," ಈ ಧರ್ಮ; "ಆದ್ಯರ ವಚನಗಳನ್ನು ವೇದ್ಯರು ಮಾತ್ರ ಅಳವಡಿಸಿಕೊಳ್ಳಬಲ್ಲರು." ಎಂಬ ಗುರು ಬಸವಣ್ಣನವರ ವಚನ ವಾಕ್ಯಗಳಿಗೆ ಪೂರ್ಣ ಅರ್ಥ ಬರುತ್ತದೆ.

"ನಾವುಗಳೆಲ್ಲ ಕೊಟ್ಟ (ಆದ್ಯರ) ವಚನಗಳು ಪರುಷದಂತೆ ಪರಿವರ್ತಿಸುವ ಗುಣ ಹೊಂದಿವೆ. ಹಾಲಿನ ತೊರೆಯಂತೆ ಇದ್ದರೂ ಮಂಡಮತಿಗಳು ಇವನ್ನು ಅರಿಯದೆ ಮತ್ತೆ ಬೇರೆ ಬಾವಿಯ ತೋಡಿ ಉಪ್ಪನೀರನ್ನು ಉಂಬುವವನಂತೆ ಶಾಸ್ತ್ರ-ಪುರಾಣಗಳ ಮೊರೆ ಹೋಗುವರಲ್ಲ?!" ಎಂದು ಗುರು ಬಸವಣ್ಣನವರು ವಿಷಾದಿಸುತ್ತಾರೆ. ಸಾಮಾನ್ಯವಾಗಿ ಅವರು ತಮ್ಮನ್ನು ಕುರಿತೇ ಹೇಳಿಕೊಳ್ಳುವ ಶೈಲಿಯಲ್ಲಿ ಬರೆಯುತ್ತಾರೆ. ಅದು ಅವರಿಗೆ ಅನ್ವಯಿಸದೆ ಜನರಿಗೆ ಅನ್ವಯಿಸುತ್ತದೆ ಎಂಬುದನ್ನು ಅರಿಯಬೇಕು.

ಆದ್ದರಿಂದ ಗುರು ಬಸವಣ್ಣನವರೇ ಆದ್ಯ ವಚನಕಾರರು ಎಂಬುದನ್ನು ಅರಿತುಕೊಳ್ಳಬೇಕು. ಅವರ ತತ್ತ್ವ, ಸಿದ್ಧಾಂತಗಳ ಪ್ರಭಾವ ಅನೇಕರ ಮೇಲೆ ಆಗಿ ಅವರು ಶರಣ ಮಾರ್ಗಕ್ಕೆ ಬಂದಂತೆ, ಜೇಡರ ದಾಸಯ್ಯನವರ ಮೇಲೂ ಆಗಿ ಅವರು ಶರಣ ಪರಂಪರೆಯ ಮಾಲೆಗೆ ಸೇರ್ಪಡೆಯಾಗಿದ್ದಾರೆ ಎಂಬುದನ್ನು ನಾವು ಮನವರಿಕೆ ಮಾಡಿಕೊಳ್ಳಬೇಕು.

ದಿ.30-7-2006ರಂದು ಬಿಡುಗಡೆಯಾದ ಕೃತಿ

ಜೇಡರ ದಾಸಯ್ಯನ ವಚನಗಳು

ಸಂಪಾದಕರು : ಮಾತಾಜಿ, ಪ್ರಕಾಶಕರು : ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್, ಬಸವ ಮಂಟಪ, 2035, 20ನೇ ಮೇನ್, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560010.
ಬೆಲೆ : 30 ರೂ. ಅಂಚೆ ವೆಚ್ಚ 10 ರೂ. ಒಟ್ಟು 40 ರೂ ಕಳಿಸಬೇಕು.

ಜೇಡರ ದಾಸಯ್ಯನ ದಾರ್ಶನಿಕ ವಾಣಿ

ಮಾರಿಯ ಪೂಜಿಸಿ, ಮಸಣಕ್ಕೆ ಹೋಗಿ
ಗೋರಿಗೊಳಿಸಿ ಕುರಿಯ ಕೊರಳನೆ ಕೊಯ್ದುಂಬ
ಕ್ರೂರಕರ್ಮಿಗಳನವರ ಶಿವಭಕ್ತರೆನ್ನಬಹುದೆ?
ಆರೈಯದೆ ಅವನ ಮನೆಯಲುಂಡ ಭಕ್ತ
ಅಘೋರ ನರಕಕ್ಕಿಳಿವ ಕಾಣಾ, ರಾಮನಾಥ!
ವಿಷಯದ ಪಿತ್ತ ತಲೆಗೇರಿದಲ್ಲಿ
ವಿವೇಕವೆಂಬ ದೃಷ್ಟಿ ನಷ್ಟವಾಗಿ
ಪಶುಪತಿಯ ನೆನಹುಗೆಟ್ಟು ಮತಿಮಂದವಾದಲ್ಲಿ
ಮಂತ್ರದ ನೆನಹುಂಟೆ ? ಹೇಳಾ, ರಾಮನಾಥ.

ಸ್ತ್ರೀ ಸಮಾನತೆ ದೊರೆತಿಲ್ಲ : ಮಾತೆ ಮಹಾದೇವಿಯವರ ವಿಷಾದ

ಚಿಂತಾಮಣಿ, ಜು.30-7-2006ರಂದು ಕೆ.ಎಂ.ಡಿ ಕಲ್ಯಾಣ ಮಂಟಪದಲ್ಲಿ ನಡೆದ ಪ್ರವಚನ ಮುಕ್ತಾಯ ಕಾರ್ಯಕ್ರಮದಲ್ಲಿ ಪುರುಷ ಪ್ರಧಾನವಾದ ಸಮಾಜದಲ್ಲಿ ಸ್ತ್ರೀಗೆ ಸಮಾನತೆ ದೊರೆತಿಲ್ಲ ಎಂಬುದಕ್ಕೆ ಚಿತ್ರನಟಿ ಜಯಮಾಲಾರವರ ಅಯ್ಯಪ್ಪ ಸ್ಪರ್ಶ ಪ್ರಕರಣವೇ ಸಾಕ್ಷಿ ಎಂದು ಕೂಡಲಸಂಗಮದ ಜಗದ್ಗುರು ಮಾತೆ ಮಹಾದೇವಿ ಖೇದ ವ್ಯಕ್ತಪಡಿಸಿದ್ದಾರೆ.

ಇತ್ತೀಚೆಗೆ ನಗರದ ಬಸವ ಕಲ್ಯಾಣದ ಶೂನ್ಯ ಪೀಠಾಧೀಶರಾದ ಪೂಜ್ಯ ಅಲ್ಲಮ ಪ್ರಭು ಸ್ವಾಮಿಗಳಿಂದ ದಿ.16.6-2006 ರಿಂದ ಆರಂಭವಾಗಿ ದಿನಗಳಿಂದ ನಡೆಯುತ್ತಿದ್ದ ವಿಶ್ವಧರ್ಮ ಪ್ರವಚನದ ಸಮಾರೋಪ ಸಮಾರಂಭದಲ್ಲಿ ದಿ.27-7-2006ರಂದು ಭಾಗವಹಿಸಿ ಮಾತನಾಡುತ್ತಿದ್ದರು.

ಸಮಾಜವಾದ, ಸಮಾನತೆ ಬಗ್ಗೆ ಬೊಬ್ಬೆ ಹಾಕುವ ವಿವಿಧ ಸಂಘ ಸಂಸ್ಥೆಗಳು, ರಾಜಕಾರಣಿಗಳು ಈ ಪ್ರಕರಣದಲ್ಲಿ ಮೂಕ ಪ್ರೇಕ್ಷಕರಂತೆ ವರ್ತಿಸುತ್ತಿದ್ದಾರೆ ಎಂದು ಆಕ್ಷೇಪಿಸಿದರು.

ಮಾಧ್ಯಮಗಳು ಮತ್ತು ಸರ್ಕಾರ ಅಪ್ರಾಪ್ತವಾಗಿ ವರ್ತಿಸುತ್ತಿವೆ. ಅಯ್ಯಪ್ಪನ ದರ್ಶನಕ್ಕೆ ಪುರುಷನಿಗೆ ಇರುವ ಸ್ಥಾನಮಾನ ಸ್ತ್ರೀಯರಿಗೂ ಇರಬೇಕು ಎಂದರು.

ದೇಶದಲ್ಲಿ ಧರ್ಮ ನಶಿಸುತ್ತಿದೆ, ಧಾರ್ಮಿಕ ಅಧ್ಯಾತ್ಮಿಕ ವಿಚಾರಗಳು, ಪ್ರಾಮಾಣಿಕತೆ ಕ್ಷೀಣಿಸುತ್ತಿವೆ. ಇದು ದೇಶಕ್ಕೆ ಗಂಡಾಂತರಕಾರಿ ಬೆಳವಣಿಗೆ ಎಂದ ಅವರು, ಪಾಲಕರು ತಮ್ಮ ಮಕ್ಕಳಲ್ಲಿ ಅಧ್ಯಾತ್ಮಿಕ ದೇಶಭಕ್ತಿಯಂತಹ ವಿಚಾರಧಾರೆಯನ್ನು ತುಂಬುವಂತೆ ಕರೆ ನೀಡಿದರು.

ಇಂದಿನ ರಾಜಕಾರಣಿಗಳು ಬಸವಣ್ಣನವರ ಸಮಾಜ ಶಾಸ್ತ್ರ, ವಚನ ಸಾಹಿತ್ಯ ಕುರಿತು ಅಚ್ಚುಕಟ್ಟಾಗಿ ಭಾಷಣ ಮಾಡುತ್ತಾರೆ. ಆದರೆ ಇದರ ಅನುಕರಣೆ ಮಾತ್ರ ನಡೆಯುತ್ತಿಲ್ಲ ಎಂದು ವಿಷಾದಿಸಿದರು.

ಬಸವಣ್ಣನವರ ಕಾಯಕ ತತ್ತ್ವ ಕಾರ್ಲ್‌ಮಾರ್ಕ್ಸ್‌ನ ತತ್ತ್ವಗಳಿಗಿಂತ ಕ್ರಾಂತಿಕಾರಿಯಾಗಿದ್ದವು ಎಂದ ಅವರು, ಸುಮಾರು 40 ದಿನಗಳಿಂದ ಬಸವ ಕಲ್ಯಾಣದ ಶೂನ್ಯ ಮಠಾಧೀಶರಾದ ಅಲ್ಲಮ ಪ್ರಭು ಮಹಾಸ್ವಾಮಿಗಳು ಅಮೋಘ ಪ್ರವಚನ ಜ್ಞಾನ ಪ್ರಸಾದವನ್ನು ನೀಡಿದ್ದಾರೆ ಎಂದು ಪ್ರಶಂಸಿಸಿದರು. ಪೂಜ್ಯ ಶ್ರೀಗಳ ಪ್ರವಚನವು ಅಪಾರ ಪರಿಣಾಮವನ್ನು ಬೀರಿದ್ದಲ್ಲದೆ ಎಲ್ಲ ಜಾತಿ-ಮತ-ಪಂಥ- ಪಂಗಡಗಳವರನ್ನು ಆಕರ್ಷಿಸಿದ್ದು ಬಹಳ ವಿಶೇಷ.

ಸಮಾವೇಶದಲ್ಲಿ ಮಂಜುನಾಥ್, ಡಿ.ಎಸ್.ಸತ್ಯನಾರಾಯಣಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.


- ವಿಜಯ ವಾರ್ತೆ, 31-7-2006



ದಿ.27-7-2006 ರಂದು ಚಿಂತಾಮಣಿ ಪ್ರವಚನ ಮುಕ್ತಾಯ ಕಾರ್ಯಕ್ರಮದ ಉದ್ಘಾಟನೆ ಮಾಡುತ್ತಿರುವ ಸಿ.ಜಿ.ಅಶ್ವಥ ನಾರಾಯಣ ಶೆಟ್ಟಿ, ಮಾತಾಜಿ ಮತ್ತು ಪೂಜ್ಯ ಸ್ವಾಮೀಜಿ



ಬಸವ ಪಂಚಮಿಯಂದು ವಾಣಿ ವಿಲಾಸ ಆಸ್ಪತ್ರೆಯಲ್ಲಿ ಗಣಾಚಾರ ದಳದವರಿಂದ
ಗುರು ಬಸವಣ್ಣನವರಿಗೆ ಪೂಜೆ



ವಾಣಿ ವಿಲಾಸ ಆಸ್ಪತ್ರೆಯಲ್ಲಿ ಗಣಾಚಾರ ದಳದವರಿಂದ ರೋಗಿಗಳಿಗೆ ಹಣ್ಣು - ಹಾಲು ವಿತರಣೆ.




ಗುರು ಬಸವಣ್ಣನವರಿಗೆ ಆರತಿ



ಧ್ವಜಾರೋಹಣ ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳಿಂದ




ಬಸವ ಕಂದಳ ವಚನಗಳು, ಆತ್ಮಗಾನ ಪುಸ್ತಕಗಳ ಕರ್ತೃ,
ಮೈಸೂರು ರಾ.ಬ.ದಳದ ಶರಣೆ.ಸರೋಜಮ್ಮನವರಿಗೆ ಸತ್ಕಾರ




ದಾನಿಗಳಾದ ಮೈಸೂರಿನ ಶರಣ ನಾಗರಾಜು ಅವರಿಗೆ ಸತ್ಕಾರ



ಮೆರವಣಿಗೆಗೆ ವಿಶೇಷ ಕಳೆ ತಂದು ಕೊಟ್ಟ ಸುಮಂಗಲಿ ಸೇವಾಶ್ರಮದ ಮಕ್ಕಳ ಬ್ಯಾಂಡ್ ವಾದನ.



ಪಥ ಸಂಚಲನದಲ್ಲಿ ಬೃಹತ್ ಸಂಖ್ಯೆಯಲ್ಲಿ ಭಾಗಿಗಳಾದ ಶರಣರು




ಪಥ ಸಂಚಲನದಲ್ಲಿ ಭಾಗಿಗಳಾದ ಗುಲಬರ್ಗಾ ವಿ.ವಿಯ ಕಾನೂನು ವಿಭಾಗದ ಮುಖ್ಯಸ್ಥರಾದ ಶರಣ. ಡಾ||ಜಿ.ಎಸ್.ಪಾಟೀಲ್



ಪಥ ಸಂಚಲನದಲ್ಲಿ ಬೃಹತ್ ಶರಣರ ಸಮೂಹ




ಬಸವೇಶ್ವರ ಸರ್ಕಲ್ ದಲ್ಲಿರುವ ಬಸವ ಪುತ್ಥಳಿಗೆ ಮಾಲಾರ್ಪಣೆಯ ನಂತರ ಪೂಜ್ಯ ಮಾತಾಜಿಯವರಿಂದ ಆಶೀರ್ವಚನ




31-7-2006, ಬಸವ ಮಂಟಪದಲ್ಲಿ ನೀಲಾಂಬಿಕಾ ಷಷ್ಠಿ ಆಚರಣೆ




ಶರಣ-ಶರಣೆಯರಿಂದ ಸಾಮೂಹಿಕ ಇಷ್ಟಲಿಂಗಾರ್ಚನೆ.



ಬಾಗಲಕೋಟೆ ಮತಕ್ಷೇತ್ರದ ಸಂಸದರಾದ ಸಿ.ಪಿ.ಗದ್ದಿಗೌಡರು ಅವರಿಂದ ಉದ್ಘಾಟನೆ
ಎಡದಿಂದ ಬಲಕ್ಕೆ ಬಸವ ಕಂಪ್ಯೂಟರ್ ಸೆಂಟರ್‌ದ ಶ್ರೀ ನಿರಂಜನದೇವರು,
ಪೂಜ್ಯ ಸ್ವಾಮೀಜಿ, ಸಿ.ಪಿ.ಗದ್ದಿಗೌಡರು.



ದಿ.30-7-2006, ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್‌ದಿಂದ ದೆಹಲಿಯಲ್ಲಿ
1ನೆಯ ಬಸವ ಪಂಚಮಿ ಆಚರಣೆ ಪ್ರೊ.ಎಸ್.ಬಿ.ಸಸಾಲಟ್ಟಿ ಅವರಿಂದ ಬಸವ ಧ್ವಜಾರೋಹಣ



ದೆಹಲಿಯ ಕರ್ನಾಟಕ ಭವನದ ಆರವಣದಲ್ಲಿ ಬಸವ ಪಂಚಮಿಯ ಪ್ರಸಾದ
ಸ್ವೀಕರಿಸುತ್ತಿರುವ ಸಚಿವ ಶ್ರೀರಾಮುಲು ಮತ್ತು ಸಂಸದ ಸಿ.ಪಿ.ಗದ್ದಿಗೌಡರು.

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್‌ವತಿಯಿಂದ
ದೆಹಲಿಯಲ್ಲಿ ಭಕ್ತಿ ಪೂರ್ಣ 'ಬಸವ ಪಂಚಮಿ' ಕಾರ್ಯಕ್ರಮ

ನವದೆಹಲಿ:- ವಿಶ್ವಗುರು ಬಸವಣ್ಣನವರು ಲಿಂಗಾಯತ ಧರ್ಮದ ಸಂಸ್ಥಾಪಕರು, ನವ ಧರ್ಮ ದ್ರಷ್ಟಾರರು, ಇಷ್ಟಲಿಂಗ ಜನಕರು ಮತ್ತು ವಿಶ್ವಕ್ಕೆ ಸಮಾನತೆಯ ಸಂದೇಶ ಸಾರಿದ ಮಹಾಪ್ರವಾದಿ ಎಂದು ನವದೆಹಲಿಯ ಬಸವ ಮಹಾಮನೆ ಚಾರಿಟಬಲ್ ಸೊಸೈಟಿಯ ಪ್ರಧಾನ ಕಾರ್ಯದರ್ಶಿ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ ನುಡಿದರು.

ನವದೆಹಲಿಯ ಕರ್ನಾಟಕ ಭವನದಲ್ಲಿ ಬಸವ ಮಹಾಮನೆ ಚಾರಿಟಬಲ್ ಸೊಸೈಟಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಗುರು ಬಸವಣ್ಣನವರ 811ನೆಯ ಲಿಂಗೈಕ್ಯ ಸಂಸ್ಮರಣೆಯ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಪ್ರಾಸ್ತಾವಿಕವಾಗಿ ಮಾತನಾಡುತ್ತ, "ಗುರು ಬಸವಣ್ಣನವರು ಜಗತ್ತಿನ ಪ್ರಥಮ ಪಾರ್ಲಿಮೆಂಟ್ ಎನಿಸಿದ ಅನುಭವ ಮಂಟಪವನ್ನು ಸ್ಥಾಪಿಸಿ, ಅದರ ಮೂಲಕ ಜಾತಿ, ವರ್ಗ, ವರ್ಣರಹಿತವಾದ ಧರ್ಮಸಹಿತವಾದ ಕಲ್ಯಾಣ ರಾಜ್ಯವನ್ನು ಕಟ್ಟಿದವರು. 62 ವರ್ಷ 3 ತಿಂಗಳು 2 ದಿವಸಗಳ ಕಾಲ ಬದುಕಿ ಸಾರ್ಥಕ ಜೀವನ ನಡೆಸಿದ ಶ್ರೀ ಬಸವೇಶ್ವರರು ದಿ.30-7-1196 ರ ಶ್ರಾವಣ ಶುದ್ಧ ಪಂಚಮಿಯ ದಿನ ಲಿಂಗೈಕ್ಯರಾದರು. ಮಹಾಗುರು ಬಸವಣ್ಣನವರ ಸಂಸ್ಮರಣೆ ನಿಮಿತ್ತ ಬಸವ ಪಂಚಮಿ ಕಾರ್ಯಕ್ರಮವನ್ನು ರಾಷ್ಟ್ರದ ರಾಜಧಾನಿ ನವದೆಹಲಿಯಲ್ಲಿ ಇನ್ನು ಮುಂದೆ ಪ್ರತಿ ವರ್ಷವೂ ನಮ್ಮ ಸಂಸ್ಥೆಯ ವತಿಯಿಂದ ಆಚರಣೆ ಮಾಡಲಾಗುವುದು" ಎಂದು ಘೋಷಿಸಿದರು.

ಜ್ಯೋತಿ ಬೆಳಗಿಸಿ ಉದ್ಘಾಟನೆ ನೆರವೇರಿಸಿದ ಬಾಗಲಕೋಟೆ ಕ್ಷೇತ್ರದ ಲೋಕಸಭಾ ಸದಸ್ಯ ಗದ್ದಿಗೌಡರು ಮಾತನಾಡಿ, "ಗುರು ಬಸವಣ್ಣನವರು ನಮಗಾಗಿ ಶ್ರೇಷ್ಠವಾದ ಧರ್ಮ - ಸಂಸ್ಕೃತಿಯನ್ನು ನೀಡಿದ್ದಾರೆ. ಆ ಧರ್ಮವನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕೂಡಲ ಸಂಗಮದಿಂದ ದೆಹಲಿಯವರೆಗೆ ಬಂದು ಇಲ್ಲಿಯ ಶರಣರನ್ನು ಒಗ್ಗೂಡಿಸುವ ಕಾರ್ಯವು ಸಾಮಾನ್ಯವಾದುದಲ್ಲ. ಅಂಥ ಸಾಹಸವನ್ನು ಮಾಡಿ ಯಶಸ್ವಿಯಾಗಿ ಕಾರ್ಯಕ್ರಮ ನಡೆಸುತ್ತಿರುವ ಸಂಸ್ಥೆ ಮತ್ತು ಪೂಜ್ಯರ ಸೇವೆ ಶ್ಲಾಘನೀಯ ಎಂದರಲ್ಲದೆ ಇಂಥ ಕಾರ್ಯಕ್ರಮವನ್ನು ಉದ್ಘಾಟಿಸಲು ಅವಕಾಶ ದೊರೆತುದು ನನ್ನ ಅದೃಷ್ಟ." ಕೂಡಲ ಸಂಗಮ ಕ್ಷೇತ್ರಕ್ಕೆ ನೇರವಾಗಿ ರೇಲ್ವೆ ಸಂಪರ್ಕ ಕಲ್ಪಿಸುವುದಕ್ಕಾಗಿ ತಾವು ಪ್ರಾಮಾಣಿಕವಾಗಿ ಪ್ರಯತ್ನ ಮಾಡುವುದಾಗಿ ಸಂಸದರು ಭರವಸೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರೋಲಬಾಗ್‌ನ ಶ್ರೀ ಬಸವೇಶ್ವರ ಕಂಪ್ಯೂಟರ್ ಕೇಂದ್ರದ ಸಂಚಾಲಕರಾದ ಶ್ರೀ ನಿರಂಜನದೇವರು ಮಾತನಾಡಿ, ಇಂದಿನ ಕಂಪ್ಯೂಟರ್ ಯುಗದಲ್ಲಿ ಮಾನವನಿಗೆ ಧರ್ಮ ಅತ್ಯಗತ್ಯವಾಗಿ ಬೇಕಾಗಿದೆ. ಧರ್ಮವಿಲ್ಲದ ಮನುಷ್ಯ ಪಶುವಿಗೆ ಸಮಾನ ಎಂದರು.

ಬಸವ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಶ್ರೀ ಎಸ್.ಬಿ.ಸಸಾಲಟ್ಟಿಯವರು ಮಾತನಾಡಿ, "ಪ್ರಾರ್ಥನೆ ಮಾನವನ ಜೀವನದ ಅವಿಭಾಜ್ಯ ಅಂಗವಾಗಬೇಕು. ಗುರು ಬಸವಣ್ಣನವರು ಕೊಟ್ಟ ಕಾಯಕ ಮತ್ತು ದಾಸೋಹ ತತ್ತ್ವಗಳು ಅತ್ಯಂತ ಶ್ರೇಷ್ಠವಾಗಿವೆ. ಅವನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡರೆ ಜೀವನ ಸಾರ್ಥಕ" ಎಂದರು.

ಕರ್ನಾಟಕ ಭವನದ ನಿವಾಸಿ ಉಪ ಆಯುಕ್ತರುಗಳಾದ ಶರಣ.ಎಸ್.ಆರ್.ಗಾರವಾಡ, ಶರಣ.ಕೃಷ್ಣಪ್ರಸಾದ ಅವರು ತಮ್ಮ ನುಡಿಕಾಣಿಕೆಯನ್ನು ಸಲ್ಲಿಸಿದರು. ಬಸವರಾಜ ಬಿರಾದಾರ, ಸೋಮನಾಥ ಬಿರಾದಾರ ಹಾಗೂ ವೈಜನಾಥ ಬಿರಾದಾರ ಪರಿವಾರದ ವತಿಯಿಂದ ಗುರು ಬಸವಣ್ಣನವರ ಪೂಜೆ ನೆರವೇರಿಸಲಾಯಿತು. ಶ್ರೀಮತಿ ಸಸಾಲಟ್ಟಿಯವರು ಮತ್ತು ಶರಣ - ಶರಣೆಯರು ಪುಷ್ಪವೃಷ್ಟಿ ಮಾಡಿದರು. ಮೋಹನ ಎಲ್.ಪಿ ಮತ್ತು ಹರಕೇಶ ನಗರದ ಶರಣ ಬಂಧುಗಳ ಸಹಕಾರದಿಂದ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು. ಕಾರ್ಯಕ್ರಮದ ನಂತರ ಗಣಪ್ರಸಾದ ಏರ್ಪಡಿಸಲಾಗಿತ್ತು.

-ವರದಿ: ವಿ.ವಿ.ಬಿರಾದಾರ, ನವದೆಹಲಿ

ಓದುಗರಿಗೆ ಸೂಚನೆ

ಕಲ್ಯಾಣ ಕಿರಣ ಮಾಸಪತ್ರಿಕೆ ಕೆಲವರಿಗೆ 2-3 ಪ್ರತಿ ಹೋಗುತ್ತಿರುವುದಾಗಿ ತಿಳಿದು ಬಂದಿದೆ. ಕೆಲವೊಮ್ಮೆ ತಲುಪಿಲ್ಲ ಎಂದಾಗ ಪುನಃ ಹೆಸರನ್ನು ಬರೆಸಲಾಗುವುದು. ಮತ್ತೆ ಕೆಲವರು ಆಗಾಗ ಕಾಣಿಕೆ ಕೊಡುತ್ತಾರೆ. ದಾನಿಗಳಿಗೆ ಗೌರವ ಪ್ರತಿ ಕಳಿಸಲಾಗುವುದು. ಅವರಿಗೆ ಈಗಾಗಲೇ ಹಿಂದೆ ಕಾಣಿಕೆ ಕೊಟ್ಟಾಗ ಹೆಸರು ಪಟ್ಟಿಯಲ್ಲಿ ಸೇರಿರುವುದು ನೆನಪಿರದು. ಆದ್ದರಿಂದ ಒಂದಕ್ಕಿಂತ ಹೆಚ್ಚು ಪ್ರತಿ ಬರುತ್ತಿದ್ದರೆ ಕೇವಲ ಬರುತ್ತಿರುವ ವಿವರ ಮಾತ್ರ ಹೇಳದೆ ಪತ್ರಿಕೆಯ ಕವರ್ ಮೇಲೆ ಇರುವ ಕ್ರಮಸಂಖ್ಯೆ ತಿಳಿಸಬೇಕು. [illegible] Refused ಎಂದು ಬರೆದು ವಾಪಸ್ಸು ಪೋಸ್ಟ್ ಮನ್‌ಗೆ ಕೊಟ್ಟರೆ ಆ ಪ್ರತಿ ಮರಳಿದಾಗ ಹೆಸರನ್ನು ತೆಗೆಯಲು ಅನುಕೂಲವಾಗುತ್ತದೆ.



ನವದೆಹಲಿಯಲ್ಲಿ ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಬಸವ ಲಿಂಗೈಕ್ಯ ಸಂಸ್ಮರಣೆಯ ಆಚರಣೆ. ಎಡದಿಂದ ಬಲಕ್ಕೆ ಕರ್ನಾಟಕ ಭವನದ ಉಪ ಆಯುಕ್ತರಾದ ಎಸ್.ಆರ್. ಗಾರವಾಡ, ವಿ.ವಿ.ಬಿರಾದಾರ, ನಿರಂಜನ ದೇವರು, ಪೂಜ್ಯ ಚನ್ನಬಸವಾನಂದ ಸ್ವಾಮೀಜಿ, ಸಂಸದ ಪಿ.ಸಿ.ಗದ್ದಿಗೌಡರು, ಪ್ರೊ.ಎಸ್.ಬಿ.ಸಸಾಲಟ್ಟಿ, ಬಿ.ಎಸ್.ಕೃಷ್ಣಪ್ರಸಾದ್.



ಬೆಂಗಳೂರಿನ ದೊಡ್ಡಣ್ಣಶೆಟ್ಟಿ ಹಾಲ್‌ದಲ್ಲಿ ನಡೆದ 811ನೆಯ ಬಸವ ಲಿಂಗೈಕ್ಯ ಸ್ಮರಣೆಯ ವೇದಿಕೆ

CPMG/KA/BGW-50/WPP-17/2006-2008 Regd No. 19980/70

